



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 3 ಗುರುವಾರ 2023
ಸಂಪುಟ: 44 | ಸಂಚಿಕೆ: 109 | ಪುಟಗಳು: 10
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಕರ್ನಾಟಕದಲ್ಲಿ ನಾವು 20 ಸ್ಥಾನ ಗೆಲ್ಲಲೇಬೇಕಿದೆ

● ರಾಜ್ಯ ನಾಯಕರಿಗೆ ವರಿಷ್ಠರ ಟಾಸ್ಕ್ ● ಇದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಿರಿ ● ಎನ್‌ಡಿಎ ಮಣಿಸುವುದೇ ನಮ್ಮ ಪರಮ ಉದ್ದೇಶ ● ಐದು ಗ್ಯಾರಂಟಿಗಳ ಬಗ್ಗೆ ಜನತೆಗೆ ಮನವರಿಕೆ ಮಾಡಿಕೊಡುವಂತೆ ಸಲಹೆ



ನವದೆಹಲಿಯಲ್ಲಿ ಬುಧವಾರ ಕರ್ನಾಟಕದ ಕಾಂಗ್ರೆಸ್ ನಾಯಕರೊಂದಿಗೆ ಪಕ್ಷದ ವರಿಷ್ಠರು ಮುಂಬರುವ ಲೋಕಸಭೆಯೂ ಸೇರಿದಂತೆ ಮಹತ್ವದ ವಿಷಯಗಳ ಸಂಬಂಧ ಸಭೆ ನಡೆಸಿದರು. ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಸಚಿವರು, ಶಾಸಕರು, ಮುಖಂಡರು ಪಾಲ್ಗೊಂಡಿದ್ದರು.

ಬೆಂಗಳೂರು, ಆ.2 (ಕೆಎಂಶಿ)–ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಧಿಕಾರದಿಂದ ಕೆಳಗಿಳಿಸಲು ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧರಾಗಿರುವಂತೆ ರಾಜ್ಯ ಸಚಿವರು ಮತ್ತು ಶಾಸಕರಿಗೆ ಕಾಂಗ್ರೆಸ್ ವರಿಷ್ಠರು ತಾಕೀತು ಮಾಡಿದ್ದಾರೆ.

ಕರ್ನಾಟಕದಿಂದಲೇ ಕಾಂಗ್ರೆಸ್ ಪಕ್ಷಕ್ಕೆ 20 ಸ್ಥಾನಗಳನ್ನು ಗೆಲ್ಲಿಸಿಕೊಡಲೇಬೇಕು. ಇದಕ್ಕಾಗಿ ಇಂದಿನಿಂದಲೇ ನೀವು ಶ್ರಮಿಸಿ ಎಂದಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ದೆಹಲಿಯ ಕಾಂಗ್ರೆಸ್ ಕಚೇರಿಯ ವಾರ್ ರೂಂನಲ್ಲಿ ಪಕ್ಷದ ರಾಜ್ಯ ನಾಯಕರೊಂದಿಗೆ ನಡೆದ ಸಭೆಯಲ್ಲಿ ನಮ್ಮದಲ್ಲದ ಸ್ಥಾನ ಗೆಲ್ಲಲು ಕೆಲವು ಸಚಿವರು ಚುನಾವಣಾ ಕಣಕ್ಕೆ ಇಳಿಯಬೇಕಾಗುತ್ತದೆ ಎನ್ನುವುದರ ಮೂಲಕ ಅಧಿಕಾರ ತ್ಯಾಗಕ್ಕೂ ಸಿದ್ಧರಿರಿ ಎಂಬ ಸಂದೇಶ ನೀಡಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಜನತೆಗೆ ನೀಡಿದ್ದ 5 ಗ್ಯಾರಂಟಿ ಭರವಸೆಗಳನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈಡೇರಿಸುತ್ತಿರುವುದಕ್ಕೆ ವರಿಷ್ಠರು ಶ್ಲಾಘಿಸಿದ್ದಾರೆ. ಇದೇ ತಂತ್ರವನ್ನು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ನಡೆಯುತ್ತಿರುವ ▶ 6ನೇ ಪುಟಕ್ಕೆ

ಯಾವ ಸಚಿವರ ವಿರುದ್ಧ ಆರೋಪ ಬಂದರೂ ವಜಾ ಮಾಡಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಿಡಿಮಿಡಿ

ನವದೆಹಲಿ, ಆ.2–ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು, ಗ್ಯಾರಂಟಿಗಳ ಯಶಸ್ವಿ ಅನುಷ್ಠಾನದಿಂದ ಬೀಗುತ್ತಿದ್ದ ಎಐಸಿಸಿ ಹೈಕಮಾಂಡ್ ಇದೀಗ, ಪಕ್ಷದ ಸರಕಾರದೊಳಗಿನ ವಿದ್ಯಮಾನಗಳಿಂದ ಸಿಡಿಮಿಡಿಗೊಂಡಿದೆ. ಲೋಕಸಭೆ ಚುನಾವಣೆ ಹೊಸ್ತಿಲಲ್ಲಿ ಪಕ್ಷದ ಸರಕಾರದ ವರ್ಚಸ್ಸು ಮುಕ್ಕಾಗುವ, ಸದಭಿಪ್ರಾಯಕ್ಕೆ ಧಕ್ಕೆಯಾಗುವಂತಹ ವಿಚಾರಗಳು ವರಿಷ್ಠರ ತಲೆಬಿಸಿ ಮಾಡಿದ್ದು, ಸರಿದಾರಿಯಲ್ಲಿ ಮುನ್ನಡೆಯುವಂತೆ ರಾಜ್ಯ ನಾಯಕರಿಗೆ ಕಠಿಣ ಶಬ್ದಗಳಲ್ಲೇ ತಾಕೀತು ಮಾಡಿದ್ದಾರೆ. 40 ಪರ್ಸೆಂಟ್ ಕಳಂಕದ ಬಿಜೆಪಿ ಸರಕಾರದ ವಿರುದ್ಧ ರೋಸಿಹೋಗಿದ್ದ ರಾಜ್ಯದ ಜನರಿಗೆ ಸ್ವಚ್ಛ, ಪಾರದರ್ಶಕ, ದಕ್ಷ ಹಾಗೂ ಉತ್ತರದಾಯಿ ಆಡಳಿತದ ಭರವಸೆ ನೀಡಿ ಅಧಿಕಾರ ಹಿಡಿದ ಪಕ್ಷದ ಸರಕಾರ ಯಾವ ದಾರಿಯಲ್ಲಿ ಸಾಗಿದೆ ಎಂದು ರಾಹುಲ್‌ಗಾಂಧಿ ಸಿಡಿಮಿಡಿಗೊಂಡಿದ್ದು, ಭ್ರಷ್ಟಾಚಾರದ ವಿಚಾರದಲ್ಲಿ ಝೀರೋ ಟಾಲರೆನ್ಸ್, ಯಾವುದೇ ಸಚಿವರ ವಿರುದ್ಧ ಆರೋಪ ಬಂದರೂ ನಿರ್ದಾಕ್ಷಿಣ್ಯವಾಗಿ ವಜಾ ಮಾಡಿ ಎಂದು ಕಟ್ಟಪ್ಪಣೆ ಮಾಡಿದ್ದಾರೆ. ರಾಜ್ಯ ವಿಧಾನಸಭೆ ಚುನಾವಣೆ ಗೆಲುವನ್ನು ಸಂಭ್ರಮಿಸಿ, ರಾಜ್ಯದ ಆಡಳಿತ ಮಾದರಿಯನ್ನು ದೇಶದ ಮುಂದಿಡುವ ತಮ್ಮ ಉತ್ಸಾಹಕ್ಕೆ ಭಂಗ ತರುವಂತಹ ಬೆಳವಣಿಗೆ ನಡೆಯುತ್ತಿವೆ ಎಂಬ ಆತಂಕದಲ್ಲೇ ಹೈಕಮಾಂಡ್, ರಾಜ್ಯ ನಾಯಕರಿಗೆ ಬುಲಾವ್ ನೀಡಿತ್ತು. ಎರಡು ಬಾರಿ ಮುಂದೂಡಿಕೆಯಾಗಿದ್ದ ಸಚಿವರು ಹಾಗೂ ಹಿರಿಯ ನಾಯಕರನ್ನು ಒಳಗೊಂಡ ಈ ಸಭೆ ಬುಧವಾರ ಅಪರಾಹ್ನ ಎಐಸಿಸಿ ಪ್ರಧಾನ ಕಚೇರಿಯಲ್ಲಿ ನಡೆಯಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ, ಕೆ.ಸಿ. ವೇಣುಗೋಪಾಲ್, ಸುರ್ಜೇವಾಲ ಎಲ್ಲರೂ ರಾಜ್ಯ ನಾಯಕರಿಗೆ ಕಿವಿಹಿಂಡಿ ಬುದ್ಧಿವಾದದ ಜತೆಗೆ, ▶ 8ನೇ ಪುಟಕ್ಕೆ

ಗ್ಯಾರಂಟಿಗಳ ಮುಂದಿಟ್ಟುಕೊಂಡೇ ನಿಮ್ಮ ವಿರುದ್ಧ ಸೆಣಸುತ್ತೇವೆ

ಪ್ರಧಾನಿ ಮೋದಿ ಟೀಕೆಗೆ ಸಿಎಂ ಸಿದ್ದರಾಮಯ್ಯ ಎದಿರೇಟು

ಬೆಂಗಳೂರು, ಆ.2(ಕೆಎಂಶಿ)– ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳ ವಿಚಾರವನ್ನೇ ಮುಂದಿಟ್ಟುಕೊಂಡು ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸುತ್ತೇವೆ. ಇದನ್ನು ನೀವು ಸವಾಲಾಗಿ ಸ್ವೀಕರಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಥಾಹ್ವಾನ ನೀಡಿದ್ದಾರೆ.

ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವುದಾದರೆ, ನಿಮ್ಮ ಮತ್ತು ನಿಮ್ಮ ಪಕ್ಷದ ನಿಲುವನ್ನು ಸ್ಪಷ್ಟಪಡಿಸಿ. ಕರ್ನಾಟಕದ ಬಿಜೆಪಿ ನಾಯಕರಿಗೂ ಇದನ್ನು ಸಾರ್ವಜನಿಕವಾಗಿ ವಿರೋಧಿಸಲು ನಿರ್ದೇಶನ ನೀಡಿ ಎಂದು ಸವಾಲು ಹಾಕಿದ್ದಾರೆ. ಗ್ಯಾರಂಟಿ ಯೋಜನೆಗಳ ವಿಷಯವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ನಾವು ಸಿದ್ಧವಿದ್ದೇವೆ. ನೀವೂ ಸಿದ್ಧವಿದ್ದೇವೆ ಎಂದು ಘೋಷಿಸಿ. ಸ್ವಾರ್ಥಕ್ಕಾಗಿ ಘೋಷಿಸಿದ ಗ್ಯಾರಂಟಿ ಯೋಜನೆ ಜಾರಿಯಿಂದ ಕರ್ನಾಟಕ ಸರ್ಕಾರದ ಬಳಿ ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಟೀಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ರೀತಿ ಪ್ರತಿಕ್ರಿಯಿಸಿದ್ದಾರೆ.



ಕರ್ನಾಟಕದ ಗ್ಯಾರಂಟಿ (ಉಚಿತ) ಯೋಜನೆಗಳಿಂದಾಗಿ ರಾಜ್ಯದ ಖಜಾನೆ ಬರಿದಾಗಲಿದೆ ಮತ್ತು ಅಭಿವೃದ್ಧಿಗೆ ಹಣ ಇಲ್ಲದಂತಾಗಿದೆ ಎಂದು ಕಾಳಜಿ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು. ನರೇಂದ್ರ ಮೋದಿಯವರೇ, ಇದು ನಿಮ್ಮ ವೈಯಕ್ತಿಕ ಅಭಿಪ್ರಾಯವೇ, ಪ್ರಧಾನಿಯವರ ಅಭಿಪ್ರಾಯವೇ? ಇಲ್ಲವೇ ಪಕ್ಷದ ಅಭಿಪ್ರಾಯವೇ? ಎನ್ನುವುದನ್ನು ದಯವಿಟ್ಟು ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಇಲ್ಲಿ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ತಕ್ಷಣ ಜಾರಿಗೊಳಿಸಬೇಕೆಂದು ಕರ್ನಾಟಕದ ಬಿಜೆಪಿ ನಾಯಕರು ಒಂದೇ ಸಮನೆ ನಮ್ಮ ಬೆನ್ನು ಹತ್ತಿದ್ದಾರೆ. ಬಡವರಿಗೆ ನೀಡುವ ಹೆಚ್ಚುವರಿ ಅಕ್ಕಿಯಲ್ಲಿ ಒಂದು ಕಾಳು ಕಡಿಮೆ ಮಾಡಿದರೂ ಹೋರಾಟ ನಡೆಸುವುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಗುಡುಗುತ್ತಲೇ ಇದ್ದಾರೆ. ಯುಗಾದಿ, ಗಣೇಶ ಚತುರ್ಥಿ ಮತ್ತು ದೀಪಾವಳಿ ಹಬ್ಬಗಳ ಸಮಯದಲ್ಲಿ ವರ್ಷಕ್ಕೆ ಮೂರು ಗ್ಯಾಸ್ ಸಿಲಿಂಡರ್ ಮತ್ತು ಬಿಪಿಎಲ್ ಕುಟುಂಬಗಳಿಗೆ ಅರ್ಧ ಲೀಟರ್ ನಂದಿನಿ ಹಾಲು ಉಚಿತವಾಗಿ ನೀಡುತ್ತೇವೆ ಎಂದು ಇತ್ತೀಚಿನ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಬಿಡುಗಡೆಗೊಳಿಸಿದ್ದ ಪ್ರಣಾಳಿಕೆಯಲ್ಲಿ ಕರ್ನಾಟಕದ ಬಿಜೆಪಿ ಭರವಸೆ ನೀಡಿತ್ತು. ವಿಧಾನಸಭಾ ಚುನಾವಣೆ ಎದುರಿಸಲಿರುವ ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಹೆಣ್ಣುಮಕ್ಕಳ ಖಾತೆಗೆ ಮಾಸಿಕ 1000 ರೂಪಾಯಿ ಜಮೆ ಮಾಡುವ ಲಾಡ್ಲಿ–ಬೆಹನಾ ಯೋಜನೆಯ ಘೋಷಣೆ ಮಾಡಿದ್ದಾರೆ. ಇದನ್ನು 3000 ರೂಪಾಯಿಗೆ ಹೆಚ್ಚಿಸುವ ಭರವಸೆ ನೀಡಿದ್ದಾರೆ. ಇದು ಉಚಿತ ಯೋಜನೆ ▶ 6ನೇ ಪುಟಕ್ಕೆ

ಝಗಮಗಿಸುವ ಬೆಳಕಿನಲ್ಲಿ ಅರಮನೆ ಸೌಂದರ್ಯ ಕಣ್ತುಂಬಿಕೊಂಡ ಥಿಂಕ್–20 ನಿಯೋಗ



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಆಯೋಜಿಸಿರುವ ಥಿಂಕ್ 20 ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ನಿಯೋಗವು ಬುಧವಾರ ಸಂಜೆ ಅಂಬಾವಿಲಾಸ ಅರಮನೆಗೆ ಭೇಟಿ ನೀಡಿ, ಅರಮನೆಯ ದೀಪಾಲಂಕಾರ ವೀಕ್ಷಿಸಿ, ಸಂಭ್ರಮಪಟ್ಟಿತು. ಈ ವೇಳೆ ಗಣ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮೈಸೂರು ಅರಮನೆ ದೀಪಾಲಂಕಾರ ಕುರಿತು ನಿಯೋಗಕ್ಕೆ ಮಾಹಿತಿ ನೀಡಿದರು.

ಆ.5ರಂದು ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು

ಮೈಸೂರು, ಆ. 2(ಆರ್‌ಕೆ)– ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಸ್ಟ್ 5ರಂದು ಮೈಸೂರಿಗೆ ಆಗಮಿಸುವರು. ಅಂದು ಬೆಳಗ್ಗೆ 11 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅವರು, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ತಮಿಳುನಾಡಿನ ಮದುಮಲೈ ಹುಲಿ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ತೆರಳುವರು. ಅಲ್ಲಿನ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಮುರ್ಮು ಅವರು, ಮಧ್ಯಾಹ್ನ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದು, ಚೆನ್ನೈಗೆ ತೆರಳುವರು ಎಂದು ರಾಷ್ಟ್ರಪತಿಗಳ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ಪಟ್ಟಿಯಲ್ಲಿ ತಿಳಿಸಲಾಗಿದೆ.



ರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರು ಬಿಗಿ ಭದ್ರತಾ ಸಿದ್ಧತೆ ಮಾಡಿಕೊಂಡಿದ್ದು, ಇಂದು ದೆಹಲಿಯಿಂದ ವಿಶೇಷ ಭದ್ರತಾ ಪಡೆ ಅಧಿಕಾರಿಗಳು ಮೈಸೂರಿಗೆ ಆಗಮಿಸಿ ವಿಮಾನ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದರು.

ನಾಳೆ (ಆ. 3) ವಿಮಾನ ನಿಲ್ದಾಣದಲ್ಲಿ ಅಧಿಕಾರಿಗಳ ಸಭೆ ನಡೆಯಲಿದ್ದು, ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲು ತಾಲೀಮು ನಡೆಸಲಿದ್ದಾರೆ. ಆದರೆ ಮುರ್ಮು ಅವರ ಮದುಮಲೈ ಅಧಿಕೃತ ಕಾರ್ಯಕ್ರಮದ ಬಗ್ಗೆ ಅಧಿಕಾರಿಗಳು ದೃಢಪಡಿಸಿಲ್ಲ.

ಪುಟ್ಟಪರ್ತಿಯ ಖತರ್ನಾಕ್ ಖದೀಮನ ಬಂಧನ

● ಏಕಾಂಗಿಯಾಗಿ ಕೈಚಳಕ ತೋರುತ್ತಿದ್ದ ಅಂತಾರಾಜ್ಯ ಕಳ್ಳ ● ಮೈಸೂರಿನಲ್ಲಿ ನಡೆದ ಮನೆಗಳವು, ಕಾರುಗಳ ಕಳ್ಳತನ ಪ್ರಕರಣಗಳು ಬಯಲು ● 1.19 ಕೋಟಿ ರೂ. ಮೌಲ್ಯದ 750 ಗ್ರಾಂ ಚಿನ್ನಾಭರಣ, 3 ಐಷಾರಾಮಿ ಕಾರುಗಳು, ಬೆಲೆ ಬಾಳುವ 3 ವಾಚ್‌ಗಳು ವಶಕ್ಕೆ

ಮೈಸೂರು, ಆ.2(ಆರ್‌ಕೆ)–ಮೈಸೂರಿನ ವಿವಿ ಪುರಂ ಹಾಗೂ ವಿಜಯನಗರದಲ್ಲಿ ಐಷಾರಾಮಿ ಕಾರುಗಳನ್ನು ಕಳವು ಮಾಡಿ, ಪೊಲೀಸರಿಗೆ ತೀವ್ರ ತಲೆನೋವಾಗಿದ್ದ ಅಂತರರಾಜ್ಯ ಖದೀಮನನ್ನು ವಿವಿ ಪುರಂ ಠಾಣೆ ಪೊಲೀಸರು ಬಂಧಿಸಿದ್ದು, ಈತ ಒಂಟಿಯಾಗಿ ಮನೆ ಕಳವು ಪ್ರಕರಣಗಳಲ್ಲೂ ತೊಡಗಿದ್ದನ್ನು ಬಯಲಿಗೆಳೆದು 1,19,61,706 ರೂ. ಮೌಲ್ಯದ ಚಿನ್ನಾಭರಣ, ಕಾರುಗಳು ಹಾಗೂ ಬೆಲೆ ಬಾಳುವ ವಾಚ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣ ಬಳಿಯ ಪುಟ್ಟಪರ್ತಿ ನಿವಾಸಿ ಕರಿಸಾಥಿ ಬಾಬು (35) ಬಂಧಿತ ಖತರ್ನಾಕ್ ಖದೀಮನಾಗಿದ್ದು, ಆತನಿಂದ 750 ಗ್ರಾಂ ಚಿನ್ನಾಭರಣ, ಬೆಳ್ಳಿ ಪದಾರ್ಥ, 1 ಮಹೀಂದ್ರ ಎಕ್ಸ್‌ಯುವಿ 700, 1 ಫಾರ್ಚುನರ್, 1 ಟೊಯೋಟಾ ಇನ್ನೋವಾ ಐಷಾರಾಮಿ ಕಾರು, ಬೆಲೆ ಬಾಳುವ 1 ಬ್ರೀಗ್ಯಿಟ್, 1 ಓಮೇಗಾ, 1 ಪನೇರಾಯ ಕಂಪನಿ ವಾಚ್, 1 ಹೆಡ್‌ಫೋನ್ ಹಾಗೂ 'ಬಿ' ಅಂಡ್ 'ಓ' ಫೋನ್ ಸ್ಪೀಕರ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಳೆದ ಮೂರು ತಿಂಗಳಿಂದ ಮೈಸೂರಿನ ವಿವಿ ಪುರಂ ಮತ್ತು ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಿಷ್ಠಿತ ಬಡಾವಣೆಗಳಲ್ಲಿ ಆಗಿಂದಾಗ್ಗೆ ಐಷಾರಾಮಿ ಕಾರುಗಳು ಕಳುವಾಗುತ್ತಿದ್ದವು. ಅಲ್ಲದೇ ಮನೆಗಳಿಗೆ ನುಗ್ಗಿ ಬೆಲೆ ಬಾಳುವ ವಾಚ್ ಇನ್ನಿತರೆ ವಸ್ತುಗಳನ್ನೂ ಕೂಡ ಕಳವು ಮಾಡಲಾಗುತ್ತಿತ್ತು. ಈ ಪ್ರಕರಣಗಳು ಪೊಲೀಸರಿಗೆ ತೀವ್ರ ತಲೆನೋವಾಗಿ ಪರಿಣಮಿಸಿತ್ತು ಕಳವು ನಡೆಯುತ್ತಿದ್ದ ಪ್ರದೇಶಗಳಲ್ಲಿ ಪೊಲೀಸರ ರಾತ್ರಿ ಗಸ್ತು ಹೆಚ್ಚಿಸಲಾಗಿತ್ತು. ಆದರೆ ಕಳವು ಪ್ರಕರಣಗಳ ಬಗ್ಗೆ ಸಿಸಿ ಕ್ಯಾಮರಾ ಫುಟೇಜ್ ಹೊರತುಪಡಿಸಿ ಬೇರೆ ಯಾವುದೇ ಸುಳಿವು ಪೊಲೀಸರಿಗೆ ಲಭ್ಯವಾಗಿರಲಿಲ್ಲ.



ಪೊಲೀಸರು ವಶಪಡಿಸಿಕೊಂಡಿರುವ ಚಿನ್ನಾಭರಣಗಳನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ವೀಕ್ಷಿಸಿದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ, ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ವರದಾನವಾದ ಕಾರಿನ ಜಿಪಿಎಸ್: ಈ ಮಧ್ಯೆ ಜು.25ರಂದು ನಡೆದ ಐಷಾರಾಮಿ ಕಾರು ಕಳವು ಪ್ರಕರಣ ಪೊಲೀಸರಿಗೆ ಕಾರಿನ ಚಲನ–ವಲನದ ಬಗ್ಗೆ ನಿಖರ ಮಾಹಿತಿ ದೊರೆಯುವಂತಾಗಿ ಅಂತರರಾಜ್ಯ ಖದೀಮನನ್ನು ಬಂಧಿಸಲು ಸಹಕಾರಿಯಾಯಿತು. ಅದಕ್ಕೆ ಈ ಕಾರಿನಲ್ಲಿ ಜಿಪಿಎಸ್ ಅಳವಡಿಸಿದ್ದುದೇ ▶ 8ನೇ ಪುಟಕ್ಕೆ

ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ವ್ಯಕ್ತಿ ಕಣ್ಣಿಗೆ ಖಾರದ ಪುಡಿ ಎರಚಿ 6.05 ಲಕ್ಷ ರೂ. ನಗದು ದೋಚಿದ್ದ

ಐವರು ಸೆಕ್ಯೂರಿಟಿ ಗಾರ್ಡ್‌ಗಳ ಬಂಧನ; 4.35 ಲಕ್ಷ ರೂ. ಜಪ್ತಿ

ಮೈಸೂರು, ಆ.2(ಆರ್‌ಕೆ)–ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಸಿಗರೇಟ್ ಮತ್ತು ದಿನಸಿ ವಿತರಣೆ ಸಂಸ್ಥೆಯಾದ ದಸರಗುಪ್ಪೆ ಎಸ್‌ಎಸ್‌ಸಿ ಪ್ರೈವೇಟ್ ಲಿಮಿಟೆಡ್‌ನ ಬಿಲ್ ಕಲೆಕ್ಟರ್ ಕೆ.ತುಳಸೀದಾಸ್ ಕಣ್ಣಿಗೆ ಖಾರದ ಪುಡಿ ಎರಚಿ 6,05,797 ರೂ. ನಗದು ದೋಚಿ ಪರಾರಿಯಾಗಿದ್ದ ಪ್ರಕರಣವನ್ನು ಭೇದಿಸಿರುವ ಹೆಬ್ಬಾಳ ಠಾಣೆ ಪೊಲೀಸರು ಐವರು ಸೆಕ್ಯೂರಿಟಿ ಗಾರ್ಡ್‌ಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಗಳೂರಿನ ಸೂರಜ್, ಮೈಸೂರಿನ ಮಹದೇಶ್ವರ ಬಡಾವಣೆಯ ಶ್ರೀನಿವಾಸ್, ಭೈರವೇಶ್ವರನಗರದ ಅರವಿಂದ, ಹಂದಿಹಳ್ಳದ ಕಿರಣ್ ಹಾಗೂ ಹುಣಸೂರಿನ ಕಿರಣ್ ಕುಮಾರ್ ಬಂಧಿತರಾಗಿದ್ದು, ಇವರಿಂದ 4,35,000 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಜುಲೈ 26ರಂದು ಬೆಳಗ್ಗೆ 10.15 ಗಂಟೆ ವೇಳೆಗೆ ತುಳಸೀದಾಸ್ ಅವರು ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಸಿಪೆಟ್ ಬಳಿಯ ಎಸ್‌ಬಿಐಗೆ ಜಮಾ ಮಾಡಲು ಎರಡು ಬ್ಯಾಗ್‌ನಲ್ಲಿ ಹಣದೊಂದಿಗೆ ವಾಹನದಿಂದ ಇಳಿಯುತ್ತಿದ್ದಾಗ ಹೊಂಚು ಹಾಕುತ್ತಿದ್ದ ದುಷ್ಕರ್ಮಿ ಅವರ ಕಣ್ಣಿಗೆ ಖಾರದಪುಡಿ ಎರಚಿ 6,05,797 ರೂ. ನಗದು ಹಾಗೂ ಗ್ರಾಹಕರು ನೀಡಿದ್ದ 5 ಚೆಕ್‌ಗಳಿದ್ದ ಬ್ಯಾಗ್ ಕಿತ್ತುಕೊಂಡು, ಅನತಿ ದೂರದಲ್ಲಿ ನಿಂತಿದ್ದ ಮತ್ತೋರ್ವನೊಂದಿಗೆ ಡ್ಯೂಕ್ ಬೈಕ್‌ನಲ್ಲಿ ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್ ಅವರು ತನಿಖೆ ಕೈಗೊಂಡು, ಸಿಸಿ ಟಿವಿ ಫುಟೇಜ್‌ಗಳು ▶ 6ನೇ ಪುಟಕ್ಕೆ

ಅನಧಿಕೃತ ಹೊಗೆಸೊಪ್ಪು ಬೆಳೆಗಾರರಿಗೆ ಲೈಸೆನ್ಸ್ ನೀಡಲು ಕೇಂದ್ರ ವಾಣಿಜ್ಯ ಕಾರ್ಯದರ್ಶಿಗೆ ಸಂಸದ ಪ್ರತಾಪ್ ಸಿಂಹ ಮನವಿ



ಕೊಡಗು ಕಾಫಿ ಬೆಳೆಗಾರರ ಸಹಕಾರ ಸೊಸೈಟಿ ಪಾವತಿಸಬೇಕಾದ ಬಡ್ಡಿ ಮನ್ನಾ ಮಾಡಲು ಮನವಿ

ಮೈಸೂರು: ಪಿರಿಯಾಪಟ್ಟಣ ವ್ಯಾಪ್ತಿಯಲ್ಲಿರುವ ಅನಧಿಕೃತ ಹೊಗೆಸೊಪ್ಪು ಬೆಳೆಗಾರರಿಗೆ ಲೈಸೆನ್ಸ್ ನೀಡುವಂತೆ ಮೈಸೂರು–ಕೊಡಗು ಸಂಸದ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಕಾರ್ಯದರ್ಶಿಗಳಾದ ಸುನೀಲ್ ಬರ್ತ್ವಾಲ್ ಅವರನ್ನು ಭೇಟಿ ಮಾಡಿದ ಅವರು ಹೊಗೆಸೊಪ್ಪು ಬೆಳೆಗಾರರು ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ಅವರಿಗೆ ಮನವರಿಕೆ ಮಾಡಿಕೊಟ್ಟರು.

ಈ ಬಾರಿ ಆರಂಭದಲ್ಲಿ ಮುಂಗಾರು ಕೈಕೊಟ್ಟಿದ್ದು ನಂತರ ಭಾರಿ ಮಳೆಯಾದ ಹಿನ್ನೆಲೆಯಲ್ಲಿ ಹೊಗೆಸೊಪ್ಪು ಬೆಳೆಗಾರರು ತೀವ್ರ ಸಂಕಷ್ಟ ಎದುರಿಸಿದ್ದಾರೆ. ಈ ಭಾಗದ ಜನರಿಗೆ ಇದೇ ಮೂಲ ಜೀವನಾಧಾರವಾಗಿದೆ. ಹೀಗಾಗಿ ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ 11 ಸಾವಿರ ಅನಧಿಕೃತ ಬೆಳೆಗಾರರಿಗೆ ಬೆಳೆ ಬೆಳೆಯಲು ಲೈಸೆನ್ಸ್ ನೀಡಲು ಅನುಮತಿ ನೀಡಬೇಕೆಂದು ಸುನೀಲ್ ಬರ್ತ್ವಾಲ್ ಅವರಿಗೆ ಸಂಸದರು ಮನವಿ ಮಾಡಿದ್ದಾರೆ.

ಇದರಿಂದ ಅವರಿಗೆ ಬ್ಯಾಂಕಿನಲ್ಲಿ ಸಾಲ ಪಡೆಯಲು ಹಾಗೂ ತಂಬಾಕು ಮಂಡಳಿಯಿಂದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ. ಈ ಬಾರಿ ಮೈಸೂರಿನ 40 ಸಾವಿರ ಅಧಿಕೃತ ಹಾಗೂ 11 ಸಾವಿರ ಅನಧಿಕೃತ ಬೆಳೆಗಾರರಿಂದ 75–80 ಎಂ ಕೆಜಿಗಳಾಗಿದೆ. ಆದರೆ ಇದು 100 ಎಂ ಕೆಜಿಗಳಾಗಬೇಕಿತ್ತು.

ಪ್ರತೀಕೂಲ ಹವಾಮಾನದಿಂದ ಪರಿಸ್ಥಿತಿ ಇದ್ದುದರಿಂದ ಸಮಸ್ಯೆ ಎದುರಾಗಿದೆ. ಈ ನಿಟ್ಟಿನಲ್ಲಿ ಬೆಳೆಗಾರರಿಗೆ ದಂಡ ವಿನಾಯಿತಿ ಮಾಡಬೇಕೆಂದು ಮನವಿ ಮಾಡಲಾಗಿದೆ.

ಬಡ್ಡಿ ಮನ್ನಾಗೆ ಮನವಿ: ಕೊಡಗು ಕಾಫಿ ಬೆಳೆಗಾರರ ಸಹಕಾರ ಸೊಸೈಟಿಯು ಕಾಫಿ ಮಂಡಳಿಗೆ 5,63,85,180 ರೂ. ಪಾವತಿಸಬೇಕೆಂದು ಆದೇಶ ನೀಡಲಾಗಿದೆ.

ಆದರೆ ಕೋವಿಡ್ ಹಾಗೂ ನಂತರದ ಪ್ರತೀಕೂಲ ಪರಿಸ್ಥಿತಿಗಳಿಂದಾಗಿ ಕಾಫಿ ಬೆಳೆಗಾರರು ತೀವ್ರ ನಷ್ಟ ಅನುಭವಿಸಿದ್ದಾರೆ. ಈ ನಿಟ್ಟಿನಲ್ಲಿ ಸೊಸೈಟಿಯ ಮೇಲೆ ಹೆಚ್ಚುವರಿ ಹೊರೆ ಬಿದ್ದಿದೆ. ಈಗ ಹಣ ಪಾವತಿಸುವಂತೆ ಸೂಚಿಸಿದರೆ ಸೊಸೈಟಿಯ 10 ಸಾವಿರ ಸದಸ್ಯರು ಹಾಗೂ ಅದನ್ನು ನಂಬಿಕೊಂಡಿರುವ 1 ಲಕ್ಷಕ್ಕೂ ಹೆಚ್ಚು ಮಂದಿಗೆ ಭಾರೀ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಬಡ್ಡಿ ಮನ್ನಾ ಮಾಡಿ ಕಾಫಿ ಬೆಳೆಗಾರರಿಗೆ ತುಸು ನೆಮ್ಮದಿ ದೊರಕಿಸಿಕೊಡಬೇಕೆಂದು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ. ಸಂಸದರ ಮನವಿಗೆ ಕಾರ್ಯದರ್ಶಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆ.6, ರ‍್ಯಾಪಿಡ್ ಚೆಸ್ ಪಂದ್ಯಾವಳಿ



ಮೈಸೂರು,ಆ.2(ಜಿಎ)–ರಾಜ್ಯಮಟ್ಟದ ಸದ್ವಿದ್ಯಾ 19 ವರ್ಷದೊಳಗಿನವರ ರ‍್ಯಾಪಿಡ್ ಚೆಸ್ ಪಂದ್ಯಾವಳಿಯನ್ನು ಆ.6ರಂದು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆಯ ಶತೋತ್ತರ, ಸದ್ವಿದ್ಯಾ ಪ್ರೌಢಶಾಲೆಯ ಸುವರ್ಣ ಮಹೋತ್ಸವ ಹಾಗೂ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತಮಹೋತ್ಸವದ ನಿಮಿತ್ತವಾಗಿ "ಶತೋತ್ತರ, ಸುವರ್ಣ, ರಜತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಎಲ್ಲಾ ಉತ್ಸವಗಳ ಸಂಭ್ರಮಾಚರಣೆಯ ಭಾಗವಾಗಿ ರಾಜ್ಯ ಮಟ್ಟದ 19 ವರ್ಷದೊಳಗಿನವರ ರ‍್ಯಾಪಿಡ್ ಚೆಸ್ ಟೂರ್ನಮೆಂಟ್ ಏರ್ಪಡಿಸಲಾಗಿದೆ ಎಂದರು.

ಮೈಸೂರಿನ ವಿಜಯನಗರದಲ್ಲಿರುವ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಬೆಳಗ್ಗೆ 9ಕ್ಕೆ ಮೈಸೂರಿನ ರೈಲ್ವೆ ಉದ್ಯೋಗಿ ಗ್ರಾಂಡ್ ಮಾಸ್ಟರ್ ಎಂ.ಎಸ್.ತೇಜಕುಮಾರ್ ಉದ್ಘಾಟಿಸಲಿದ್ದಾರೆ. ಅಂದು ಸಂಜೆ 4 ಗಂಟೆಗೆ ಬಹುಮಾನ ವಿತರಣೆ ಮಾಡಲಾಗುತ್ತದೆ ಎಂದರು.

ಪಂದ್ಯಾವಳಿಯಲ್ಲಿ ಸ್ಪರ್ಧಿಸಲು ಈಗಾಗಲೇ ಹಲವಾರು ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದಾರೆ. 300ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಪ್ರವೇಶ ಶುಲ್ಕವನ್ನು 200 ರೂ. ನಿಗದಿ ಪಡಿಸಲಾಗಿದೆ. ಪಂದ್ಯಾವಳಿ ಹತ್ತು ವಿಭಾಗದಲ್ಲಿ ನಡೆಯಲಿದ್ದು, ವಿವಿಧ ಹಂತದಲ್ಲಿ ಪಂದ್ಯಾವಳಿ ನಡೆಸಿ, ವಿಜೇತರಾದವರಿಗೆ ನಗದು ಬಹುಮಾನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9964058045 ಸಂಪರ್ಕಿಸಿ ಎಂದರು.

ಗೋಷ್ಠಿಯಲ್ಲಿ ಸಂಸ್ಥೆಯ ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ, ಕಾಲೇಜಿನ ಪ್ರಾಂಶುಪಾಲ ವೈ.ಆರ್.ರಮೇಶ್ ಮತ್ತು ಪ್ರೌಢಶಾಲೆ ಮುಖ್ಯೋಪಾಧ್ಯಾಯ ರಾಮಚಂದ್ರ ಭಟ್ ಉಪಸ್ಥಿತರಿದ್ದರು.



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶ್ರೀರಂಗಪಟ್ಟಣದ ಸುಮಂಗಲಿ ಸೇವಾ ಟ್ರಸ್ಟ್ ವತಿಯಿಂದ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಎಂ.ಎಲ್.ಅನಂತರಾಮು (ಎಡದಿಂದ ಎರಡನೆಯವರು) ಅವರಿಗೆ 'ಕರ್ನಾಟಕ ಪ್ರಜಾಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವಂಗೀಪುರಂ ನಂಬಿ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಟ್ರಸ್ಟ್ ಅಧ್ಯಕ್ಷ ಹೆಚ್.ಡಿ.ಪುಟ್ಟಸ್ವಾಮಿ, ರೂಪದರ್ಶಿ ವಿ.ಅನಿತಾ ಇನ್ನಿತರರು ಉಪಸ್ಥಿತರಿದ್ದರು.

ಸೇನಾ ನೇಮಕಾತಿ ರ‍್ಯಾಲಿ; 2ನೇ ದಿನ 652 ಅಭ್ಯರ್ಥಿಗಳು ಭಾಗಿ



ಮೈಸೂರು,ಆ.2(ಪಿಎಂ)–ಭಾರತೀಯ ಸೇನೆಯ ಅಗ್ನಿಪಥ್ ಯೋಜನೆಯ ಅಗ್ನಿವೀರ್ ಸೇನಾ ನೇಮಕಾತಿ ರ‍್ಯಾಲಿಯ ಎರಡನೇ ದಿನವಾದ ಬುಧವಾರ 652 ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರಿನ ನಜರ್‌ಬಾದಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮೂರು ದಿನಗಳ ಅಗ್ನಿವೀರ್ ಸೇನಾ ನೇಮಕಾತಿ ರ‍್ಯಾಲಿಗೆ ಮಂಗಳವಾರ ಚಾಲನೆ ದೊರೆತಿತ್ತು. ಅಂತೆಯೇ ಬುಧವಾರ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆ ನಡೆಯಿತು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ 741 ಅಭ್ಯರ್ಥಿಗಳಿಗೆ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗಿತ್ತು. ಈ ಪೈಕಿ 652 ಮಂದಿ ಭಾಗವಹಿಸಿದ್ದರು. ಡಿಸಿ ಡಾ.ಕೆ.ವಿ.ರಾಜೇಂದ್ರ 1,600 ಮೀ. ಓಟಕ್ಕೆ ಹಸಿರು ನಿಶಾನೆ ತೋರುವ ಮೂಲಕ 2ನೇ ದಿನದ ರ‍್ಯಾಲಿಗೆ ಚಾಲನೆ ನೀಡಿದರು.

ವಿದ್ಯಾರ್ಥಿಗಳು ಅಂಬೇಡ್ಕರ್ ವಿಚಾರಗಳನ್ನು ಅಧ್ಯಯನ ಮಾಡಬೇಕು

ಮೈಸೂರು ವಿವಿ ಇತಿಹಾಸ ವಿಭಾಗದಲ್ಲಿ ಅಂಬೇಡ್ಕರ್ ಜಯಂತಿಯೊಂದಿಗೆ 'ಇತಿಹಾಸ ಸಂಘ' ಉದ್ಘಾಟನೆ



ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಡಾ.ಅಂಬೇಡ್ಕರ್ ಜಯಂತಿಯಲ್ಲಿ ಇತಿಹಾಸ ಸಂಘವನ್ನು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಸಿದ್ಧಾಶ್ರಮ ಉದ್ಘಾಟಿಸಿದರು.

ಮೈಸೂರು,ಆ.2(ಪಿಎಂ)–ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ಓದಿದರೆ ಇಡೀ ಜಗತ್ತಿನ ಎಲ್ಲಾ ಜ್ಞಾನ ಶಾಖೆಗಳನ್ನು ಓದಿದಂತೆ. ವಿಶೇಷವಾಗಿ ವಿದ್ಯಾರ್ಥಿಗಳು ಅಂಬೇಡ್ಕರರ ವಿಚಾರಗಳನ್ನು ಅಧ್ಯಯನ ಮಾಡಬೇಕೆಂದು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಸಿದ್ಧಾಶ್ರಮ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದ ವತಿಯಿಂದ ಬುಧವಾರ ವಿಭಾಗದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮದಿನಾಚರಣೆಯಲ್ಲಿ 'ಇತಿಹಾಸ ಸಂಘ' ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರ ಅಂಬೇಡ್ಕರ್ ವಿಚಾರಧಾರೆಗಳನ್ನು ಕನ್ನಡದಲ್ಲಿ ಪ್ರಕಟಿಸಿದ್ದು, ವಿದ್ಯಾರ್ಥಿಗಳು ಅದನ್ನು ಓದಬೇಕು. ಅಂಬೇಡ್ಕರ್ ಅವರು ಶಾಲಾ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಅವಮಾನ ಅನುಭವಿಸಿದರು. ಈ ಎಲ್ಲವನ್ನು ಸಹಿಸಿಕೊಂಡು ವಿಶ್ವಜ್ಞಾನಿಯಾದರು ಎಂದು ಸ್ಮರಿಸಿದರು.

ಅಂಬೇಡ್ಕರ್ ಜನ್ಮದಿನಾಚರಣೆ ನಮಗೆ ಜಾಗೃತಿ ದಿನಾಚರಣೆಯಾಗಬೇಕು. ನಾವು ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭವಾಗಬೇಕು. 'ನಾನು ಮುನ್ನಡೆಸಿದ ಈ ವಿಮೋಚನ ರಥವನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ. ಆದರೆ ಹಿಂದಕ್ಕೆ ಮಾತ್ರ ತಳ್ಳಬೇಡಿ' ಎಂದು ಅಂಬೇಡ್ಕರ್ ಹೇಳಿದ್ದಾರೆ. ಆದರೆ ಇಂದು ನಾವು ರಥವನ್ನು ಹಿಂದಕ್ಕೆ ತಳ್ಳುವ ಪ್ರಕ್ರಿಯೆಯಲ್ಲಿ ನಿರತರಾಗಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ನಾವೆಲ್ಲರೂ ಅಂಬೇಡ್ಕರ್ ಆಗಲೇಬೇಕಿದೆ. ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಮಾಡಿದ್ದೇವೆ. ಆದರೆ ಈ ಸಂದರ್ಭದಲ್ಲೂ ಶೋಷಣೆ, ಅಸ್ಪೃಶ್ಯತೆ ಆಚರಣೆ ನಿಂತಿಲ್ಲ. ಸವಿದ್ಯೆ, ಸ್ವಾಭಿಮಾನ ಮತ್ತು ಶೀಲ ನನ್ನ ಮೂವರು ದೇವತೆಗಳು ಎಂದು ಅಂಬೇಡ್ಕರ್ ಹೇಳಿಕೊಂಡಿದ್ದಾರೆ. ಈ ಆದರ್ಶ ನಮ್ಮವೂ ಆಗಬೇಕು ಎಂದು ತಿಳಿಸಿದರು.

ಆಧುನಿಕ ಭಾರತದ ನಿರ್ಮಾತೃ: ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ವೈ.ಹೆಚ್.ನಾಯಕವಾಡಿ ಮಾತನಾಡಿ, ಅಂಬೇಡ್ಕರ್ ಮಹಾನಾಯಕರು. ಅವರ ಜೀವನ ಚರಿತ್ರೆ ಮನನ ಮಾಡಿಕೊಳ್ಳುವುದರಿಂದ ನಮ್ಮಲ್ಲಿ ಪ್ರೇರಣೆ ಉಂಟು ಮಾಡಲಿದೆ. ಅಂಬೇಡ್ಕರ್ ಆಧುನಿಕ ಭಾರತದ ನಿರ್ಮಾತೃ ಎಂದರು. 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಆರಂಭದಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯ ಪ್ರಖ್ಯಾತಿ ಹೊಂದಿತ್ತು. ಈ ವಿವಿಯಲ್ಲಿ ಪ್ರಾಧ್ಯಾಪಕರಾಗಿದ್ದವರು ಅಮೆರಿಕಾದ ನೀತಿಗಳ ರೂಪಕರಾಗಿದ್ದವರು. ಅಂಬೇಡ್ಕರ್ ಅವರ ಮೇಲೆ ಅವರ ಪ್ರಜಾಪ್ರಭುತ್ವದ ವಿಚಾರಧಾರೆಗಳು ಪ್ರಭಾವ ಉಂಟು ಮಾಡಿದ್ದವು. ಅಂದಿನ ಅಮೆರಿಕದ ನಾಗರಿಕ ಹೋರಾಟಗಳೂ ಅಂಬೇಡ್ಕರ್ ಅವರಲ್ಲಿ ಪರಿಣಾಮ ಬೀರಿದ್ದವು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಪ್ರೊ.ಪುರುಷೋತ್ತಮ ಬಿಳಿಮಲೆ ಉಪನ್ಯಾಸ ನೀಡಿದರು. ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಕೆ.ಸದಾಶಿವ, ಪ್ರೊ.ಸಿ.ಗುರುಸಿದ್ದಯ್ಯ, ಇತಿಹಾಸ ಸಂಘದ ಕಾರ್ಯದರ್ಶಿ ಜಿ.ಎನ್.ಕಿರಣ್, ಖಜಾಂಚಿ ಡಿ.ಅನುಪಮ ಮತ್ತಿತರರು ಹಾಜರಿದ್ದರು.

ಇತಿಹಾಸ ಸಂಘಕ್ಕೆ 128 ವರ್ಷಗಳ ಇತಿಹಾಸ

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೂ ಮೊದಲೇ 1894ರಲ್ಲಿ ಇತಿಹಾಸ ಸಂಘವು ಅಂದಿನ ಮಹಾರಾಜ ಕಾಲೇಜಿನಲ್ಲಿ ಸ್ಥಾಪನೆಯಾಯಿತು ಎಂದು ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ವೈ.ಹೆಚ್.ನಾಯಕವಾಡಿ ಹೇಳಿದರು.

ನಾವಿಂದು ಮರು ಚಾಲನೆ ನೀಡುತ್ತಿರುವ 'ಇತಿಹಾಸ ಸಂಘ'ಕ್ಕೆ ಅದರದೇ ಆದ ಇತಿಹಾಸವಿದೆ. ಇದಕ್ಕೆ ಶತಮಾನಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದ್ದು, 128 ವರ್ಷಗಳ ಹಿಂದೆ ಮಹಾರಾಜ ಕಾಲೇಜಿನಲ್ಲಿ ಸ್ಥಾಪನೆಯಾಯಿತು. ಅಂದು ಕಾಲೇಜಿನ ಮೊದಲ ಪ್ರಾಂಶುಪಾಲರು ಹಾಗೂ ಮೊದಲ ಇತಿಹಾಸ ಪ್ರಾಧ್ಯಾಪಕರೂ ಆಗಿದ್ದ ಥಾಮಸ್ ಡೆನ್ಹ್ಯಾಮ್ ಮೊದಲ ಅಧ್ಯಕ್ಷರಾಗಿದ್ದರು ಎಂದರು.

ಕೆ.ವಿ.ಪುಟ್ಟಪ್ಪನವರು (ಕುವೆಂಪು) ಮಹಾರಾಜ ಕಾಲೇಜಿನ ಪ್ರಾಂಶುಪಾಲರು ಆಗುವವರೆಗೂ ಈ ಭಾಗದ ವಿದ್ವತ್ ಲೋಕದ ಚುಕ್ಕಾಣಿ ಹಿಡಿದವರು ಇತಿಹಾಸ ಪ್ರಾಧ್ಯಾಪಕರು ಮತ್ತು ಇತಿಹಾಸ ಸಂಘ. ಥಾಮಸ್ ಡೆನ್ಹ್ಯಾಮ್ 1916ರವರೆಗೆ ಮಹಾರಾಜ ಕಾಲೇಜಿನ ಪ್ರಾಂಶುಪಾಲರು ಹಾಗೂ ಇತಿಹಾಸ ಸಂಘದ ಅಧ್ಯಕ್ಷರಾಗಿದ್ದರು. ಅವರ ಮನೆಯಲ್ಲಿ ಇತಿಹಾಸ ಸಂಘದ ಚಟುವಟಿಕೆಗಳು ನಡೆಯುತ್ತಿದ್ದವು. ಇತಿಹಾಸ ಕುರಿತು ಚರ್ಚೆ ಹಾಗೂ ಲೇಖನ ಪ್ರಕಟಣೆ ಸಂಬಂಧದ ಯೋಜನೆಗಳು ರೂಪುಗೊಳ್ಳುತ್ತಿದ್ದವು ಎಂದರು.

ಅಂದು ಇತಿಹಾಸ ಸಂಘದ ಕಾರ್ಯಕ್ರಮಗಳಲ್ಲಿ ಯುವರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಹ ಭಾಗವಹಿಸಿದ್ದರು. ಜಯಚಾಮರಾಜ ಒಡೆಯರ್ ಅವರು 1938ರಲ್ಲಿ ಇತಿಹಾಸ ಸಂಘದ ಅಧ್ಯಕ್ಷರಾಗಿದ್ದರು. ಇದೀಗ ಪುನರಾರಂಭಗೊಳ್ಳುತ್ತಿರುವ ಇತಿಹಾಸ ಸಂಘದಲ್ಲಿ ಕಾರ್ಯದರ್ಶಿ ಸೇರಿದಂತೆ ಪದಾಧಿಕಾರಿಗಳ ಜವಾಬ್ದಾರಿ ಹೆಚ್ಚಿದೆ. ಇತಿಹಾಸ ಅಧ್ಯಯನ ವಿಭಾಗದ ಮುಖ್ಯಸ್ಥರೇ ಸಂಘದ ಅಧ್ಯಕ್ಷರಾಗಿದ್ದರೂ ಉಳಿದ ಪದಾಧಿಕಾರಿಗಳ ಜವಾಬ್ದಾರಿ ಹೆಚ್ಚಿರುತ್ತದೆ. ವಿವಿಧ ಕಾರ್ಯಕ್ರಮಗಳ ಮೂಲಕ ಇತಿಹಾಸದ ಮೇಲೆ ಬೆಳಕು ಚೆಲ್ಲಬೇಕಾಗುತ್ತದೆ ಎಂದು ಸಂಶೋಧನಾ ವಿದ್ಯಾರ್ಥಿಗಳಿಗೆ ನಾಯಕವಾಡಿ ಸಲಹೆ ನೀಡಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರನ್ನು ಸಂಘದ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಪದಾಧಿಕಾರಿಗಳು, ಕಾರ್ಯಕರ್ತರು ಅಭಿನಂದಿಸಿ, ಶುಭ ಕೋರಿದರು.

ಆ.9ರಂದು ತಾಲೂಕುವಾರು ಲೋಕಾಯುಕ್ತ ಅಧಿಕಾರಿಗಳ ಭೇಟಿ

ಮೈಸೂರು,ಆ.2– ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಂಬಂಧಪಟ್ಟ ಸಾರ್ವಜನಿಕ ಸರ್ಕಾರಿ ಅಧಿಕಾರಿ ಅಥವಾ ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿ ಮಾಡಿದ ದೂರುಗಳನ್ನು, ನಮೂನೆ–1ರಲ್ಲಿ ಮತ್ತು ನಮೂನೆ–2ರಲ್ಲಿ ಪ್ರಮಾಣ ಪತ್ರಗಳನ್ನು, ಅಗತ್ಯ ದಾಖಲಾತಿಗಳನ್ನು ಸ್ವೀಕರಿಸುವ ಕಾರ್ಯಕ್ರಮವನ್ನು ತಾಲೂಕು ಮಟ್ಟದಲ್ಲಿ ಆ.9ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಟಿ.ನರಸೀಪುರ ತಾಲೂಕಿನ ತಾಲೂಕು ಪಂಚಾಯಿತಿ ಸಭಾಂಗಣ, ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಪ್ರವಾಸಿ ಮಂದಿರ ಹಾಗೂ ಮಡಿಕೇರಿ ಜಿಲ್ಲೆಯ ವಿರಾಜಪೇಟೆ ತಾಲೂಕಿನ ತಾಲೂಕು ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮಾಂತರದಲ್ಲಿ ಸೌಹಾರ್ದ ಸಹಕಾರ ಚಳವಳಿ ವಿಸ್ತರಿಸಬೇಕು

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ.ನಂಜನಗೌಡ



ಮೈಸೂರು, ಆ.2 (ಪಿಎಂ)– ಗ್ರಾಮಾಂತರ ಪ್ರದೇಶದಲ್ಲೂ ಸೌಹಾರ್ದ ಸಹಕಾರ ಚಳವಳಿಯನ್ನು ಪರಿಣಾಮಕಾರಿಯಾಗಿ ವಿಸ್ತರಿಸಬೇಕಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ.ನಂಜನಗೌಡ ಹೇಳಿದರು.

ಮೈಸೂರಿನ ದಿವಾನ್ಸ್ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ವತಿಯಿಂದ ಹಮ್ಮಿಕೊಂಡಿದ್ದ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅನೇಕ ಸವಾಲುಗಳು ನಮ್ಮ ಮುಂದಿವೆ. ಗ್ರಾಮಾಂತರ ಮಟ್ಟದಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಿಸಲು ಸಾಧ್ಯವಾಗಿಲ್ಲ. ಮೈಸೂರು ವಿಭಾಗದಲ್ಲಿ ಗ್ರಾಮಾಂತರ ಮಾತ್ರವಲ್ಲ, ನಗರ ಪ್ರದೇಶದಲ್ಲೂ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಗಳು ಹೆಚ್ಚು ಸ್ಥಾಪನೆಯಾಗಿಲ್ಲ. ಬೆಳಗಾವಿ ವಿಭಾಗದಲ್ಲಿ 2,500 ಸಂಸ್ಥೆಗಳಿವೆ. ಆದರೆ ಮೈಸೂರು ವಿಭಾಗದಲ್ಲಿ ಕೇವಲ 477 ಸಂಸ್ಥೆಗಳಿವೆ. ಹಿಂದಿನ ವರ್ಷ ಇಡೀ ರಾಜ್ಯದಲ್ಲಿ ಸುಮಾರು 500 ಸಂಸ್ಥೆಗಳಷ್ಟೇ ಸ್ಥಾಪನೆಗೊಂಡಿವೆ. ಸೌಹಾರ್ದ ಸಹಕಾರಿ ಚಳವಳಿ ಸಂಘಟಿಸುವತ್ತ ಗಮನ ನೀಡಬೇಕಿದೆ ಎಂದು ಹೇಳಿದರು.


ರಾಜ್ಯದಲ್ಲಿ ಕಳೆದ 23 ವರ್ಷಗಳಲ್ಲಿ 6 ಸಾವಿರ ಸೌಹಾರ್ದ ಸಹಕಾರಿ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಈ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸಂಸ್ಥೆ ಕಟ್ಟಿ ಬೆಳೆಸಬಹುದು. ಆದರೆ ಅಧಿಕಾರಶಾಹಿಗಳು ಈ ಕ್ಷೇತ್ರದ ಬೆಳವಣಿಗೆಗೆ ಪೂರ್ಣ ಪ್ರಮಾಣದಲ್ಲಿ ಸ್ಪಂದಿಸುತ್ತಿಲ್ಲ ಎಂದರಲ್ಲದೆ, ನಾವು ಠೇವಣಿ ತೆಗೆದುಕೊಳ್ಳುವ ಜೊತೆಗೆ ಷೇರು ಬಂಡವಾಳವನ್ನು ಹೆಚ್ಚು ಮಾಡಿಕೊಳ್ಳಬೇಕು. ಷೇರು ಬಂಡವಾಳ ಕಡಿಮೆ ಮಾಡಿ, ಠೇವಣಿ ಹೆಚ್ಚು ತೆಗೆದುಕೊಂಡರೆ, ಅಸಮತೋಲನ ಉಂಟಾಗಲಿದೆ ಎಂದು ಸಲಹೆ ನೀಡಿದರು.

ಯಾರಾದರೂ ದೊಡ್ಡ ಮೊತ್ತದ ಠೇವಣಿದಾರರು ವಾಪಸು ಕೇಳಿದರೆ ನಮ್ಮ ಬಳಿ ಹಣ ಇಲ್ಲವಾದರೆ ಸಮಸ್ಯೆ ಎದುರಿಸಬೇಕಾಗುತ್ತದೆ. ಅನೇಕ ಸಂಸ್ಥೆಗಳು ಈ ತಪ್ಪು ಮಾಡುತ್ತಿವೆ. ಶೇ.20ರಿಂದ 30ರಷ್ಟು ಹಣ ಮೀಸಲಿಟ್ಟುಕೊಳ್ಳಬೇಕು. ನಿರ್ದೇಶಕರು ಹಾಗೂ ಅವರ ಸಂಬಂಧಿಕರ ಸಾಲದ ಮೊತ್ತವು ದುಡಿಯುವ ಬಂಡವಾಳದ ಶೇ.10ರಷ್ಟು ಮೀರಬಾರದು. ನಮ್ಮ ಬಳಿ 1 ಲಕ್ಷ ರೂ. ತೊಡಗಿಸಿದ ಬಂಡವಾಳ ಇದ್ದರೆ, ಅದರಲ್ಲಿ ಶೇ.10ರಷ್ಟು ಮಾತ್ರ ಸಾಲ ನೀಡಬೇಕು ಎಂದು ತಿಳಿಸಿದರು.

ಸಂಸ್ಥೆಗಳ ನಿರ್ದೇಶಕರು ಇತಿಮಿತಿಯಲ್ಲಿ ಸಾಲ ಪಡೆದು ಪ್ರಾಮಾಣಿಕವಾಗಿ ಮರುಪಾವತಿ ಮಾಡಬೇಕು. ಯಾವುದೇ ಕಾರಣಕ್ಕೂ ಸಾಲ ಬಾಕಿ ಉಳಿಯಬಾರದು. ನಾವು ಅಚ್ಚುಕಟ್ಟಾಗಿ ಸಂಸ್ಥೆಗಳನ್ನು ನಡೆಸಿಕೊಂಡು ಹೋದರೆ ಯಾವುದೇ ಸಮಸ್ಯೆ ಎದುರಾಗದು ಎಂದರು.

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಶಿಕ್ಷಣ ಮತ್ತು ಸಲಹಾ ಸಮಿತಿ ಸದಸ್ಯ ಹೆಚ್.ವಿ.ರಾಜೀವ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕ ಶಿವಕುಮಾರ ಬಿರಾದಾರ, ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕ ಜವಾಹರ ಮುಗ್ಗನವರ, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲಾ ಸಂಯೋಜಕ ಎಂ.ಚಂದ್ರಶೇಖರಯ್ಯ, ಮೈಸೂರು, ಕೊಡಗು ಹಾಗೂ ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣ ರಾವ್, ನಿರ್ದೇಶಕ ಹೆಚ್.ಎನ್.ನವೀನ್ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.8.2023 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಅಪೋಲೋ ಬಿಜಿಎಸ್ ಆಸ್ಪತ್ರೆ:** ಅಂಗದಾನ ಕುರಿತು ಅರಿವು ಮೂಡಿಸುವ ಅಭಿಯಾನ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಶ್ರೀ ದುರ್ಗಾ ಫೌಂಡೇಷನ್ ಟ್ರಸ್ಟ್, ಬ್ಯೂಟಿಷಿಯನ್ ಅಸೋಸಿಯೇಷನ್ ಶಿವಮೊಗ್ಗ:** ವಿಶ್ವ ಬ್ಯೂಟಿಷಿಯನ್ ದಿನದ ಅಂಗವಾಗಿ ಹಿರಿಯ ಬ್ಯೂಟಿಷಿಯನ್ ವೃತ್ತಿ ಸಾಧಕರಿಗೆ ಸನ್ಮಾನ ಹಾಗೂ ಶಾಲಾ ಮಕ್ಕಳಿಗೆ ಓದುವ ಸಾಮಗ್ರಿ ವಿತರಣೆ, ಮುಖ್ಯ ಅತಿಥಿಗಳು: ಮುಕ್ತ ವಿವಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಆರ್.ಹೆಚ್.ಪವಿತ್ರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗವಾಲ ಡಾ. ಶೋಭರಾಣಿ, ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷೆ ವೇದಾ ರೈ, ಶಿವಮೊಗ್ಗ ಬ್ಯೂಟಿಷಿಯನ್ ಅಸೋಸಿಯೇಷನ್ ಅಧ್ಯಕ್ಷೆ ಅಶ್ವಿನಿ ಪಿ.ಗೌಡ, ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಉಪಾಧ್ಯಕ್ಷೆ ಅಹಲ್ಯ, ಟ್ರಾಫಿಕ್ ವಾರ್ಡನ್ ಮಾಲಿನಿ ಆರ್.ಪಾಲಾಕ್ಷ, ಅಕ್ಕನ ಬಳಗ ಶಾಲೆ ಮುಖ್ಯೋಪಾಧ್ಯಾಯರಾದ ಸುಗುಣ, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ ಅವರಿಂದ ಅರಣ್ಯಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು– ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಯಜ್ಞಶಾಲೆ, ಮೈಸೂರು ಆಶ್ರಮದ ದತ್ತ ಸನ್ನಿಧಿ, ಶ್ರೀ ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್. ರವಿ ಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್.ಪ್ರಸನ್ನಾಕ್ಷಿ, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು –ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ.ಶಾಂತ ಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎನ್.ಭಾರತಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಪಿ.ನೀಲಾ, ಎಸ್.ಜಿ.ರಘುರಾಂ, ಡಾ. ರೋಹಿಣಿ ಮೋಹನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ಪುಟ್ಟಸಿದ್ದಯ್ಯ ಮತ್ತು ಸಂಗಡಿಗರು, 4.30 ಸಂಧ್ಯಾರಾಗ–ಹಿರಿಯ ರಂಗಭೂಮಿ ಕಲಾವಿದರಾದ ಕುಪ್ಪವೆಂಕಟರಾಂ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ಪ್ರಭುಸ್ವಾಮಿ ಮಳಿಮಠ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ನಿರ್ದೇಶಕರಾದ ಡಾ.ಎಸ್. ಗಾಂಧಿದಾಸ್ ಮತ್ತು ಹಿರಿಯ ವಿಜ್ಞಾನಿ ಡಾ.ಕೆ.ಬಿ. ಚಂದ್ರಶೇಖರ್, 8.00 ಸಂಸದ್ ಸಮೀಕ್ಷಾ, 8.15 ಯುವವಾಣಿ–ಯುವಪ್ರತಿಭೆ–ಶಾಸ್ತ್ರೀಯ ಸಂಗೀತ ಕಲಾವಿದೆ ಮಧುರಾ ಎಂ. ಅವರೊಂದಿಗೆ ಮಾತುಕತೆ, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

ಸದ್ಯದಲ್ಲೇ ಹೊಸ ಇಂಧನ ನೀತಿ ಜಾರಿ



ಬೆಂಗಳೂರು, ಆ.2– ಪ್ರಸರಣ ಮತ್ತು ವಿತರಣಾ ನಷ್ಟವನ್ನು ತಗ್ಗಿಸಲು ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ವಿಕೇಂದ್ರೀಕರಿಸಲು, ಇಂಧನ ಇಲಾಖೆಯು ಹೊಸ ಇಂಧನ ನೀತಿಯನ್ನು ರೂಪಿಸುತ್ತಿದೆ. ಅಲ್ಲಿ ನವೀಕರಿಸಬಹುದಾದ ಇಂಧನ, ಮೇಲಾಗಿ ಸೌರ ವಿದ್ಯುತ್ ಸಬ್‌ಸ್ಟೇಷನ್‌ಗಳ ಬಳಿ ಉತ್ಪಾದಿಸಲಾಗುತ್ತದೆ. ಸ್ಥಳೀಯವಾಗಿ ವಿತರಿಸಲು ಗ್ರಿಡ್‌ಗೆ ಸೇರಿಸಲಾಗುತ್ತದೆ.

ಎಂಜಿನಿಯರ್‌ಗಳು ಸೇರಿದಂತೆ ಇಲಾಖೆ ಅಧಿಕಾರಿಗಳಿಗೆ ನೀತಿ ಸಿದ್ಧಪಡಿಸುವ ಜವಾಬ್ದಾರಿ ನೀಡಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು. ಗ್ರಾಹಕರು ತಮ್ಮ ಆರ್ಥಿಕ ಹೊರೆ ಕಡಿಮೆ ಮಾಡಲು ಸಹಾಯ ಮಾಡುವುದು ಹೊಸ ನೀತಿಯ ಉದ್ದೇಶವಾಗಿದೆ. ಹಸಿರು ಶಕ್ತಿಯ ಎಲ್ಲಾ ಮೂಲಗಳು–ಸೌರ, ಗಾಳಿ ಮತ್ತು ಹೈಡ್ರೋಜನ್ ಬಳಕೆಗೆ ಆದ್ಯತೆ ನೀಡಲಾಗುತ್ತದೆ.

ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ವೆಚ್ಚ ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ವಿದ್ಯುತ್ ಉತ್ಪಾದಿಸಲು ಮತ್ತು ವಿದ್ಯುತ್ ಗ್ರಿಡ್‌ಗೆ ಹೆಚ್ಚುವರಿ ಶಕ್ತಿಯನ್ನು ಪೂರೈಸಲು ಕೈಗಾರಿಕೆಗಳು ಮತ್ತು ಇತರ ಹೆಚ್ಚಿನ ವಿದ್ಯುತ್ ಬಳಕೆ ಗ್ರಾಹಕರಿಗೆ ತಮ್ಮ ಆವರಣದಲ್ಲಿ ಸೌರ ಫಲಕಗಳನ್ನು ಸ್ಥಾಪಿಸಲು ಹೇಳಿದ್ದೇವೆ. ಆದಷ್ಟು ಬೇಗ ನೀತಿಯನ್ನು ಸಂಪುಟದ ಅನುಮೋದನೆಗೆ ಕಳುಹಿಸಲಾಗುವುದು ಎಂದು ಸಚಿವ ಜಾರ್ಜ್ ತಿಳಿಸಿದರು.

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಸಲಹೆಯಂತೆ ತುಮಕೂರು ಸಮೀಪದ ಪಾವಗಡದಲ್ಲಿ ಸೌರ ವಿದ್ಯುತ್ ಉತ್ಪಾದನೆಯನ್ನು 10 ಸಾವಿರ ಮೆಗಾ ವ್ಯಾಟ್ ಹೆಚ್ಚಿಸಬಹುದು. ಯೋಜನೆಗೆ ಜಮೀನು ಗುತ್ತಿಗೆ ನೀಡುವ ಕುರಿತು ರೈತರೊಂದಿಗೆ ಮಾತುಕತೆ ನಡೆಯುತ್ತಿದೆ. ಹಸಿರು ಇಂಧನ ಘಟಕಗಳನ್ನು ಸ್ಥಾಪಿಸಲು ಉಪಕೇಂದ್ರಗಳ ಸುತ್ತಲಿನ ಭೂಮಿಯನ್ನು ಸಹ ಗುತ್ತಿಗೆಗೆ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ಬಂಡೀಪುರದಲ್ಲಿ ಕಂಗೊಳಿಸುತ್ತಿದೆ ವನ್ಯಜೀವಿ ಸಂಪತ್ತು...








ಮುಂಗಾರು ಮಳೆಯಿಂದ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವನ್ಯಜೀವಿಗಳ ಕಲರವ ಪ್ರವಾಸಿಗರಿಗೆ ಮುದ ನೀಡುತ್ತಿದ್ದು, ಬುಧವಾರ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಭರಪೂರ ದರ್ಶನ ನೀಡಿವೆ. ಹೊಂಡದ ನೀರಲ್ಲಿ ತಾಪ ನೀಗಿಸಿಕೊಳ್ಳುತ್ತಿರುವ ಹುಲಿರಾಯ; ತನ್ನ ಕಂದನಿಗೆ ಹಾಲುಣಿಸುತ್ತಿರುವ ಆನೆ; ಸ್ವಚ್ಛಂದವಾಗಿ ವಿಹರಿಸುತ್ತಿರುವ ಜಿಂಕೆಯ ಹಿಂಡು; ಮರದ ಮೇಲೆ ಎಲೆಗಳ ನಡುವೆ ಇಣುಕುತ್ತಿರುವ 'ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ (ದೊಡ್ಡ ದಾಸಮಂಗಟ್ಟೆ)' ಪ್ರವಾಸಿಗರ ಕಣ್ಮನ ಸೆಳೆದಿವೆ. ಚಿತ್ರ: ಲಕ್ಷ್ಮಿ ನಾರಾಯಣ ಯಾದವ್

ಆ.6, ಸಚಿವ ಡಾ.ಮಹದೇವಪ್ಪರಿಗೆ ಮೈಸೂರಲ್ಲಿ ಅಭಿನಂದನಾ ಸಮಾರಂಭ



ಮೈಸೂರು,ಆ.2(ಜಿಎ)–ಶ್ರೀ ವಿಶ್ವಕರ್ಮ ವಿದ್ಯಾವರ್ಧಕ ಸಂಘದ ವತಿಯಿಂದ ಸಮಾಜ ಕಲ್ಯಾಣ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಆ.6ರಂದು ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಟಿ.ನಾಗರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಸರಸ್ವತಿಪುರಂನಲ್ಲಿರುವ ಸಂಘದ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಲಿದ್ದಾರೆ. ಶ್ರೀ ಶಿವಸುಜ್ಞಾನ ಮಹಾಸ್ವಾಮಿ ಸಾನ್ನಿಧ್ಯ ವಹಿಸಲಿದ್ದು, ಸಂಘದ ಅಧ್ಯಕ್ಷರಾದ ಎ.ಎನ್.ಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ ಮತ್ತು ಮಂಜೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪಾಲಿಕೆ ಸದಸ್ಯರಾದ ವೇದಾವತಿ, ರಮೇಶ್, ಛಾಯಾದೇವಿ ಮತ್ತು ಜೆ.ಗೋಪಿ ಆಗಮಿಸಲಿದ್ದಾರೆ.

ಈ ವೇಳೆ ಸಂಘದ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ವಿದ್ಯಾರ್ಥಿನಿಲಯದ ಕಟ್ಟಡವು ಶೇ.50ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದರಿಂದ ಸಚಿವರಿಗೆ ಸಂಘದ ವತಿಯಿಂದ ಅನುದಾನ ನೀಡುವಂತೆ ಮನವಿ ಸಲ್ಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎ.ಎನ್.ಸ್ವಾಮಿ, ಕಾರ್ಯದರ್ಶಿ ಬಿ.ನರಸಿಂಹಮೂರ್ತಿ, ಮಹಿಳಾ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್.ಸವಿತ, ನಿರ್ದೇಶಕ ಸಿ.ಹುಚ್ಚಪ್ಪಚಾರ್ ಉಪಸ್ಥಿತರಿದ್ದರು.

ನಿರ್ಬಂಧವಿದ್ದರೂ ಎಕ್ಸ್‌ಪ್ರೆಸ್ ವೇನಲ್ಲಿ ಬಂದು ತಡೆದ ಪೊಲೀಸರಿಗೆ ರೂಲ್ಸ್ ಪಾಠ ಮಾಡಿದ ಬೈಕ್ ಸವಾರ..!



ಮೈಸೂರು, ಆ.2(ಎಂಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ನಿರ್ಬಂಧದ ನಡುವೆಯೂ ಬೈಕ್‌ನಲ್ಲಿ ಬಂದ ಸವಾರರೊಬ್ಬರು ದಂಡ ಕಟ್ಟಲು ಹೈಡ್ರಾಮ ನಡೆಸಿದ್ದಾರೆ.

ಮಂಡ್ಯ ಸಮೀಪದ ಉಮ್ಮಡಹಳ್ಳಿ ಗೇಟ್ ಬಳಿ ಬುಧವಾರ ಮಧ್ಯಾಹ್ನ ಘಟನೆ ನಡೆದಿದ್ದು, ದಂಡ ಕಟ್ಟಲು ಒಪ್ಪದೆ, ಕಡೆಗೆ ದಂಡ ಪಾವತಿಸಿದ್ದಲ್ಲದೆ ಪೊಲೀಸರಿಗೆ ರೂಲ್ಸ್ ಪಾಠ ಹೇಳಲು ಹೋಗಿ ಕಕ್ಕಾಬಿಕ್ಕಿಯಾಗಿದ್ದಾರೆ. ಮದ್ದೂರಿನಿಂದ ಎಕ್ಸ್‌ಪ್ರೆಸ್ ವೇನಲ್ಲಿ ಹೆಲ್ಮೆಟ್ ಧರಿಸದೆ ಬುಲೆಟ್‌ನಲ್ಲಿ ಬಂದ ಅವರನ್ನು ಪೊಲೀಸರು ತಡೆದು ನಿಲ್ಲಿಸಿದ್ದಾರೆ. ಈ ವೇಳೆ ಎಕ್ಸ್‌ಪ್ರೆಸ್ ವೇನಲ್ಲಿ ಬೈಕ್, ಆಟೋ, ಟ್ರಾಕ್ಟರ್‌ಗಳಿಗೆ ಪ್ರವೇಶ ನಿರ್ಬಂಧಿಸಲಾಗಿದ್ದು, ನಿಯಮ ಉಲ್ಲಂಘನೆ ಹಿನ್ನೆಲೆ ದಂಡ ಕಟ್ಟಿ ಎಂಬ ಪೊಲೀಸರ ಮಾತಿಗೆ ಸಿಡಿಮಿಡಿಗೊಂಡ ಅವರು, ನನಗೆ ಗೊತ್ತಿಲ್ಲ, ನಾನು ದಂಡ ಕಟ್ಟಲ್ಲ. ನೀವು ಹೈವೇಗೆ ಹತ್ತುವಾಗ ಹತ್ತಬೇಡಿ ಅಂತಾ ಹೇಳಿಲ್ಲ. ಈಗ ದಂಡ ಕಟ್ಟಿ ಅಂತೀರಾ, ನಾನು ಕಟ್ಟಲ್ಲ. ನಂಗೆ ಹೊಸ ನಿಯಮ ಗೊತ್ತಿಲ್ಲ ಎಂದು ಪೊಲೀಸರಿಗೆ ಆವಾಜ್ ಹಾಕಿದ್ದಾರೆ.

ಕೂಡಲೇ ದಂಡ ವಿಧಿಸುತ್ತಿದ್ದ ಪೊಲೀಸರು ನೀವು ಎಕ್ಸ್‌ಪ್ರೆಸ್ ವೇ ಹತ್ತುವಾಗ ಕಾಣುವಂತೆ ಬೋರ್ಡ್ ಹಾಕಿದ್ದೇವೆ ನೋಡಿದ್ರಾ... ನಿನ್ನೆ ಮೊನ್ನೆಯಿಂದ ಟಿವಿ, ಪತ್ರಿಕೆಗಳಲ್ಲಿ ಸುದ್ದಿ ಬರ್ತಾ ಇದೆ. ನೀವ್ ನೋಡಿಲ್ವಾ ಎಂದಿದ್ದಾರೆ. ಅದಕ್ಕೆ ಬೈಕ್ ಸವಾರ, ನಾನು ಈ ಹೊಸ ರೂಲ್ಸ್ ಎಲ್ಲೂ ನೋಡಿಲ್ಲ, ನಾನು ದಂಡ ಕಟ್ಟಲ್ಲ ಎಂದು ಮೊಂಡು ವಾದ ಮಾಡಿದ್ದಾರೆ. ಇದಕ್ಕೆ ಸರಿಯಪ್ಪಾ ಹೊಸ ರೂಲ್ಸ್ ಗೊತ್ತಿಲ್ಲ ಅಂತೀಯಾ ಹೆಲ್ಮೆಟ್ ಯಾಕೆ ಹಾಕಿಲ್ಲ... ನಿಂಗೆ ಹೆಲ್ಮೆಟ್ ಹಾಕೋಬೇಕು ಅನ್ನೋ ಹಳೆ ರೂಲ್ಸ್ ಗೊತ್ತಿಲ್ವಾ? ಎಂಬ ಪೊಲೀಸರ ರಿವರ್ಸ್ ಪ್ರಶ್ನೆಗೆ ಕಕ್ಕಾಬಿಕ್ಕಿಯಾದ ಬೈಕ್ ಸವಾರ, ಕೊನೆಗೆ ದಂಡ ಕಟ್ಟಿದ್ದಾರೆ. ಬೈಕ್ ಸವಾರ ಕೂಗಾಟ ಶುರುವಾಗುತ್ತಿದ್ದಂತೆ ಜಮಾಯಿಸಿದ್ದ ಸಾರ್ವಜನಿಕರೂ ಪೊಲೀಸರು ನಮ್ಮ ಒಳ್ಳೆಯದಕ್ಕೆ ಹೇಳೋದು ಅಲ್ವಾ ಎಂದು ಬೈಕ್ ಸವಾರನಿಗೆ ಕ್ಲಾಸ್ ತೆಗೆದುಕೊಂಡರು. ಕಳೆದೊಂದು ತಿಂಗಳಿಂದಲೂ ಇದೇ ಸುದ್ದಿ. ಬೈಕ್, ಆಟೋ, ಟ್ರಾಕ್ಟರ್ ಸೇರಿದಂತೆ ಕೆಲ ವಾಹನಗಳಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶವಿಲ್ಲ ಎಂದು ಟಿವಿ ಚಾನೆಲ್, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇದೆ. ನಮಗಾಗಿಯೇ ಈ ರೂಲ್ಸ್ ಮಾಡಿರುವುದು ಎಂದು ಬುದ್ಧಿವಾದ ಹೇಳಿದ್ದಾರೆ.

211 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ಕೆಲವೇ ಗಂಟೆಯಲ್ಲಿ ಸರ್ಕಾರದಿಂದ ತಡೆ

ಬೆಂಗಳೂರು,ಆ.2– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ವರ್ಗಾವಣೆ ದಂಧೆಯನ್ನು ಆರಂಭಿಸಿದೆ ಎಂದು ವಿಪಕ್ಷಗಳಿಂದ ಗಂಭೀರ ಟೀಕೆಗೆ ಒಳಗಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ರಾಜ್ಯದ 211 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ಮಾಡಿದ್ದ ಸರ್ಕಾರ, ಈಗ 19 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ತಡೆಹಿಡಿದ ಆದೇಶ ವಿಪಕ್ಷಗಳ ಆರೋಪಕ್ಕೆ ಪುಷ್ಟಿ ನೀಡಿದಂತಾಗಿದೆ.

ನಿನ್ನೆ ವರ್ಗಾವಣೆಗೊಂಡಿದ್ದ ಕೆಲ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಗೆ ಸರ್ಕಾರ ತಡೆ ಹಿಡಿದಿದೆ. ಮಂಗಳವಾರ ರಾಜ್ಯಾದ್ಯಂತ 211 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ ಇಂದು ಬೆಳಗ್ಗೆ ಸರ್ಕಾರದಿಂದ ದಿಢೀರ್ ತಡೆ ಹಿಡಿಯಲಾಗಿದೆ. ವರ್ಗಾವಣೆ ಆದೇಶ ಬರುತ್ತಿದ್ದಂತೆ ಇಂದು ಚಾರ್ಜ್ ತೆಗೆದುಕೊಳ್ಳಲು ಮುಂದಾಗಿದ್ದ 11 ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಗೆ ಬೆಳ್ಳಂಬೆಳಗ್ಗೆ ತಡೆ ನೀಡಲಾಗಿದೆ. ವರ್ಗಾವಣೆ ಆದೇಶ ಬರ್ತಿದ್ದಂತೆ ಹಲವು ಬೆಳಗಾಗುವುದರೊಳಗೆ 11 ಇನ್ಸ್‌ಪೆಕ್ಟರ್‌ಗಳು ಹಾಗೂ ಮಧ್ಯಾಹ್ನದ ವೇಳೆ ಪುನಃ 8 ಇನ್ಸ್‌ಪೆಕ್ಟರ್ ಗಳು ಸೇರಿ ಒಟ್ಟು 19 ಪೊಲೀಸ್ ಇನ್ಸ್ ಪೆಕ್ಟರ್‌ಗಳ ವರ್ಗಾವಣೆಗೆ ತಡೆ ನೀಡಿ ಆದೇಶಿಸಿದೆ.



ಮೈಸೂರಿನ ವಾರ್ಡ್ ನಂ.4ರ ವ್ಯಾಪ್ತಿಯ ಲೋಕನಾಯಕನಗರದಲ್ಲಿ ಪಾಲಿಕೆ ಅನುದಾನದಲ್ಲಿ ನಿರ್ಮಿಸಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಸಮುದಾಯ ಭವನವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ನಗರಪಾಲಿಕೆ ಸದಸ್ಯ ಪೈ.ಶ್ರೀನಿವಾಸ್, ದೇವಸ್ಥಾನದ ಟ್ರಸ್ಟಿಗಳು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಖದೀಮನ ಸೆರೆ, 10 ಲಕ್ಷ ಮೌಲ್ಯದ ಮಾಲು ವಶ

ಮೈಸೂರು,ಆ.2(ಆರ್‌ಕೆ)–ಇಂಜಿನಿಯರಿಂಗ್ ಸರ್ವೀಸ್ ಸೆಂಟರ್‌ವೊಂದರ ಬಾಗಿಲು ಮುರಿದು ಲ್ಯಾಪ್‌ಟಾಪ್ ಸೇರಿದಂತೆ ಇತರ ವಸ್ತು ಕಳವು ಮಾಡಿದ್ದ ಆರೋಪಿಯನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಶಾಲನಗರ ತಾಲೂಕು, ಸಿದ್ದಾಪುರ ರಸ್ತೆ, ಬೆಟಗೇರಿಯ ಸಿಮೆಂಟ್ ಫ್ಯಾಕ್ಟರಿ ಬಳಿ ಜುಲೈ 30ರಂದು ಆರೋಪಿಯನ್ನು ಬಂಧಿಸಲಾಗಿದ್ದು, ಆತನಿಂದ ಕಳವು ಮಾಡಿದ್ದ ಮಹೀಂದ್ರ ಇಂಪೀರಿಯೋ ಗೂಡ್ಸ್ ವಾಹನ, ಹ್ಯಾಮರಿಂಗ್ ಮೆಷಿನ್, ವೆಲ್ಡಿಂಗ್ ಮೆಷಿನ್ ಹಾಗೂ ಲ್ಯಾಪ್ ಟಾಪ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜುಲೈ 29ರಂದು ರಾತ್ರಿ ಮೈಸೂರಿನ ಹುಣಸೂರು ರಸ್ತೆಯ ಬೆಳವಾಡಿ ಗೇಟ್‌ನಲ್ಲಿರುವ ಸುಷ್ಮಾ ಎಂಟರ್ ಪ್ರೈಸಸ್ ಬಾಗಿಲು ಮುರಿದು ಕಳವು ಮಾಡಿದ್ದ ಆರೋಪಿಯನ್ನು ವಿಚಾರಣೆಗೊಳಪಡಿಸಿದಾಗ ಆತನ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರು ಮತ್ತು ಪಾಂಡೇಶ್ವರ ಠಾಣೆಗಳಲ್ಲಿ ವಂಚನೆ ಪ್ರಕರಣ, ಹಾಸನ ಜಿಲ್ಲೆ, ಕೊಣನೂರು ಠಾಣೆಯಲ್ಲಿ ಕಳವು ಪ್ರಕರಣ ದಾಖಲಾಗಿರುವುದು ತಿಳಿಯಿತು. ಆತನಿಂದ 10 ಲಕ್ಷ ರೂ. ಮೌಲ್ಯದ ಮಾಲುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಅವರ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಇನ್ಸ್‌ಪೆಕ್ಟರ್ ಬಿ.ರವಿಶಂಕರ್, ಸಬ್ ಇನ್ಸ್‌ಪೆಕ್ಟರ್ ಅಶ್ವಿನಿ ಅನಂತಪುರ್, ಸಿಬ್ಬಂದಿಗಳಾದ ಶಂಕರ್, ಲೋಕೇಶ್, ಪ್ರದೀಪ್‌ಕುಮಾರ್, ತಿಲಕ್ ಕುಮಾರ್, ಅಣ್ಣಪ್ಪ ನಂದೀಶ, ಮಂಜುನಾಥ, ಸಂಜಯ್, ಕುಮಾರ್ ಪಾಲ್ಗೊಂಡಿದ್ದರು.

ಧರ್ಮಸೇನಾಗೆ ಎಂಎಲ್‌ಸಿ, ಸಂಪುಟ ದರ್ಜೆ ಸ್ಥಾನಮಾನ ಕಲ್ಪಿಸಿ



ಮೈಸೂರು,ಆ.2(ಜಿಎ)–ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ಅಥವಾ ಸಂಪುಟ ದರ್ಜೆಯ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಬೇಕೆಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ವಿಭಾಗದ ನಗರಾಧ್ಯಕ್ಷ ಕೆ.ರಮೇಶ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸೇನಾ ಅವರು 35 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ. ಎರಡು ಬಾರಿ ಪರಿಷತ್ ಸದಸ್ಯರಾಗಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ 12 ವರ್ಷ ಕಾರ್ಯನಿರ್ವಹಿಸಿದ ಅನುಭವವಿದೆ. ವಿಭಾಗದ ರಾಜ್ಯಾಧ್ಯಕ್ಷರಾಗಿಯು ಉತ್ತಮ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಪಕ್ಷವು ಅಧಿಕಾರಕ್ಕೆ ಬರುವಲ್ಲಿ ಪರಿಶಿಷ್ಟ ಜಾತಿ ವರ್ಗವು ಪ್ರಮುಖ ಪಾತ್ರ ವಹಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಧರ್ಮಸೇನಾ ಅವರಿಗೆ ಸೂಕ್ತ ಸ್ಥಾನಮಾನ ನೀಡಿ, ಸಮುದಾಯಕ್ಕೆ ಪ್ರಾತಿನಿಧ್ಯ ದೊರಕಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ವಿಭಾಗದ ರಾಜ್ಯ ಸಂಚಾಲಕಿ ಗೀತಾ ಬಾಯಿ ರಾಕೇಶ್ ಕುಮಾರ್, ನಗರ ಜಿಲ್ಲಾ ಉಪಾಧ್ಯಕ್ಷರಾದ ಜಗದೀಶ್‌ಕುಮಾರ್, ಶಿವರುದ್ರಪ್ಪ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಶೇಖರ್ ದೇವರಾಜ ಬ್ಲಾಕ್ ಅಧ್ಯಕ್ಷ ಮಹೇಶ್ ಇದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.2– ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ/ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ 2023–24ನೇ ಸಾಲಿಗೆ www.bcwd.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ bcwd.hostel@karnataka.gov.in ಅಥವಾ ಮೊ.ಸಂ: 8050370005 ಸಂಪರ್ಕಿಸಬಹುದು.

ಸರಗಳ್ಳನ ಸೆರೆ, ಆಭರಣ ವಶ

ಮೈಸೂರು,ಆ.2(ಆರ್‌ಕೆ)–ಮೈಸೂರಿನ ಹಳೆ ಕೆಸರೆಯ ಗಂಗಾನಗರದಲ್ಲಿ ಮಹಿಳೆ ಮೇಲೆ ಹಲ್ಲೆ ಮಾಡಿ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಯನ್ನು ಎನ್.ಆರ್.ಠಾಣೆ ಪೊಲೀಸರು ಬಂಧಿಸಿದ್ದಾರೆ. ಗಾರೆ ಕೆಲಸ ಮಾಡಿಕೊಂಡಿದ್ದ ವ್ಯಕ್ತಿಯು ಕಳೆದ ಮಾರ್ಚ್ 29ರಂದು ಮಹಿಳೆ ಚಿನ್ನದ ಸರ, ಓಲೆ, ಮಾಟಿಯನ್ನು ಎಗರಿಸಿದ್ದ ತನಿಖೆ ಕೈಗೊಂಡಿದ್ದ ಎನ್.ಆರ್. ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ 50,000 ರೂ. ಬೆಲೆಬಾಳುವ 9.5 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ಕೆ.ತಳವಾರ್, ಸಬ್‌ಇನ್ಸ್‌ಪೆಕ್ಟರ್ ಗಣೇಶ, ಸಿಬ್ಬಂದಿಗಳಾದ ಆರ್.ಆರ್.ಮಂಜುನಾಥ್, ಆದಂ, ಮೋಹನ್, ಸುನಿಲ್‌ಕುಮಾರ್, ದೊಡ್ಡೇಗೌಡ, ಈರೇಶ್ ಹಾಗೂ ಬಸವರಾಜು ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಟಿ.ಸಿ.ಕೃಷ್ಣೇಗೌಡ ನಿಧನ



ಮೈಸೂರು,ಆ.2–ಮೈಸೂರಿನ ತೊಣಚಿಕೊಪ್ಪಲು ಗ್ರಾಮದ ದಿವಂಗತ ಯಜಮಾನ್ ಚಿಕ್ಕೇಗೌಡರ ದ್ವಿತೀಯ ಪುತ್ರ, ಹಾಲಿ ಯಜಮಾನ್ ಸಿ.ಜವರಪ್ಪ ಅವರ ಕಿರಿಯ ಸಹೋದರ ಟಿ.ಸಿ.ಕೃಷ್ಣೇಗೌಡ (ಪಟೇಲ್) ಬುಧವಾರ ನಿಧನರಾದರು. 63 ವರ್ಷ ವಯೋಮಾನದ ಇವರು, ಪತ್ನಿ ಗಾಯತ್ರಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ(ಆ.3) ಮಧ್ಯಾಹ್ನ ತೊಣಚಿಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಕಗಳು ತಿಳಿಸಿವೆ.

ಕುಡಿತ ದ್ವೇಷಿಸಿ, ಜೀವನ ಪ್ರೀತಿಸಿ... ಉತ್ತಮ ಜೀವನಕ್ಕಾಗಿ ಮದ್ಯ ತ್ಯಜಿಸಿ

ಬಸವ ಮಾರ್ಗ ಫೌಂಡೇಷನ್ ವ್ಯಸನಮುಕ್ತ ದಿನಾಚರಣೆ ಜಾಗೃತಿ ಜಾಥಾದಲ್ಲಿ ಮೊಳಗಿದ ಘೋಷವಾಕ್ಯ

ಮೈಸೂರು,ಆ.2(ಪಿಎಂ)– ಕುಡಿತವನ್ನು ದ್ವೇಷಿಸಿ, ಜೀವನವನ್ನು ಪ್ರೀತಿಸಿ... ಮದ್ಯ ತ್ಯಜಿಸಿ, ಹಣ ಮತ್ತು ಭವಿಷ್ಯ ಉಳಿಸಿ... ಉತ್ತಮ ಜೀವನಕ್ಕಾಗಿ ಮದ್ಯ ಮುಕ್ತರಾಗಿರಿ.... ಎಂಬಿತ್ಯಾದಿ ಘೋಷವಾಕ್ಯಗಳ ಫಲಕಗಳನ್ನಿಡಿದು ಹೆಜ್ಜೆ ಹಾಕಿದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಮದ್ಯಪಾನದ ಅನಾಹುತಗಳ ಕುರಿತು ಜಾಗೃತಿ ಸಂದೇಶ ಸಾರಿದರು.

ಬಸವ ಮಾರ್ಗ ಫೌಂಡೇಷನ್ ವತಿಯಿಂದ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಡಾ.ಶ್ರೀ ಮಹಾಂತ ಶಿವಯೋಗಿ ಸ್ವಾಮೀಜಿ ಅವರ ಜನ್ಮದಿನ ಹಾಗೂ ವ್ಯಸನ ಮುಕ್ತ ದಿನಾಚರಣೆ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ನೂರಾರು ಮಂದಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳೊಂದಿಗೆ ಸಾರ್ವಜನಿಕರು ಮತ್ತು ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ, ಮದ್ಯಪಾನ ತ್ಯಜಿಸುವಂತೆ ಜಾಗೃತಿ ಮೂಡಿಸಿದರು.




ಮೈಸೂರು ನಗರದ ಹೆಬ್ಬಾಳಿನ ಅಭಿಷೇಕ್ ವೃತ್ತದಲ್ಲಿ ಆರಂಭಗೊಂಡ ಜಾಥಾವು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಹೆಬ್ಬಾಳು ಪೊಲೀಸ್ ಠಾಣೆ ಬಳಿ ಅಂತ್ಯಗೊಂಡಿತು. ಇದಕ್ಕೂ ಮುನ್ನ ಮೆರವಣಿಗೆಗೆ ಚಾಲನೆ ನೀಡಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ವಿ.ಜ್ಯೋತಿ ಮಾತನಾಡಿ, ಸರ್ಕಾರ ಮದ್ಯಪಾನ ತ್ಯಜಿಸುವಂತೆ ಅನೇಕ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುತ್ತಿದೆ. ಅದಕ್ಕೆ ಪೂರಕವಾಗಿ ಬಸವ ಮಾರ್ಗ ಫೌಂಡೇಷನ್ ಸಹ ಈ ರೀತಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಮಾಜದ ಪರಿವರ್ತನೆಗೆ ವಿಶಿಷ್ಟ ಕೊಡುಗೆಯಾಗಲಿದೆ ಎಂದು ತಿಳಿಸಿದರು.

ಎನ್‌ಆರ್ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಮಾತನಾಡಿ, ಮಾದಕ ವಸ್ತುಗಳ ಬಗ್ಗೆ ಯುವ ಜನತೆಯಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಇಡೀ ಸಮಾಜವನ್ನು ವ್ಯಸನಮುಕ್ತ ಸಮಾಜವನ್ನಾಗಿಸಬೇಕಿದೆ. ಇದರಿಂದ ಅಪರಾಧ ಪ್ರಮಾಣದಲ್ಲಿ ಇಳಿಕೆಯಾಗಲಿದೆ. ಫೌಂಡೇಷನ್‌ನ ಜಾಗೃತಿ ಕಾರ್ಯಕ್ರಮಗಳಿಗೆ ಪೊಲೀಸ್ ಇಲಾಖೆ ಸಹ ಕೈ ಜೋಡಿಸಲಿದೆ ಎಂದು ಭರವಸೆ ನೀಡಿದರು.

ನಗರಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಮಾತನಾಡಿ, ಕುಡಿತದ ಚಟಕ್ಕೆ ಬಲಿಯಾದವರು ತಮ್ಮ ಕುಟುಂಬದಿಂದ ಮಾತ್ರವಲ್ಲ, ಇಡೀ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಅಂತಹವರ ಮನಪರಿವರ್ತನೆ ಮಾಡಿ ಚಟದಿಂದ ದೂರ ಮಾಡುವ ಕೆಲಸವನ್ನು ಬಸವ ಮಾರ್ಗ ಫೌಂಡೇಷನ್ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಫೌಂಡೇಷನ್ ಅಧ್ಯಕ್ಷ ಸಿ.ಬಸವರಾಜು, ಯುವ ಮುಖಂಡ ರವಿ, ಹೆಬ್ಬಾಳು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್ ಮತ್ತಿತರರು ಹಾಜರಿದ್ದರು.

> “ಡಾ.ಮಹಾಂತ ಶಿವಯೋಗಿ ಸ್ವಾಮೀಜಿ ಅವರ ಜನ್ಮದಿನದ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಆಚರಣೆ ಮಾಡಲಾಗುತ್ತಿದೆ. ಕುಡಿತದ ಚಟಕ್ಕೆ ಬಲಿಯಾದವರ ಮನಪರಿವರ್ತನೆ ಮಾಡಿ, ಹೊಸ ಜೀವನ ಕಲ್ಪಿಸುವುದೇ ನಮ್ಮ ಫೌಂಡೇಷನ್‌ನ ಉದ್ದೇಶ. ಜೊತೆಗೆ ಈ ಬಗ್ಗೆ ನಿರಂತರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ.
>
> –ಸಿ.ಬಸವರಾಜು, ಅಧ್ಯಕ್ಷರು, ಬಸವ ಮಾರ್ಗ ಫೌಂಡೇಷನ್

ನಕ್ಕರೆ ಅದೇ ಸ್ವರ್ಗ

ಹುಡುಗ : ಇಲ್ಲಿಂದ ಬ್ಯಾಂಕ್ ಎಷ್ಟು ದೂರ ಇದೆ?
ಹುಡುಗಿ : ಎರಡು ಕಿಲೋಮೀಟರ್
ಹುಡುಗ : ನಡೆದು ಹೋಗುವುದೇ? ಅಥವಾ ಆಟೋದಲ್ಲಿ ಹೋಗಬಹುದೆ?
ಹುಡುಗಿ : ಸುಮ್ಮನೆ ನನ್ನ ಹಿಂದೆ ಸಾಲಿನಲ್ಲಿ ನಿಂತುಕೋ!

ಮೈಸೂರು ಮಿತ್ರ

ಗುರುವಾರ, 3 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಪ್ರಯತ್ನಿಸುವವರೆಗೂ ತಾವು ಏನು ಮಾಡಬಹುದೆಂದು ಯಾರಿಗೂ ತಿಳಿಯದು– –ಸೈರಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಪರದಾಡಿದಂತೆ

ನಿಮ್ಮ ಪತ್ರಗಳು

ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಲು ಶುಲ್ಕವೇ?

ಮಾನ್ಯರೆ,

ಪ್ರವಾಸಿಗರಿಗೆ ಮೈಸೂರು ನಗರವನ್ನು ವೀಕ್ಷಿಸುವುದೆಂದರೆ ಎಲ್ಲಿಲ್ಲದ ಸಂಭ್ರಮ.



ರಾಜ್ಯ ಹಾಗೂ ರಾಷ್ಟ್ರದ ನಾನಾ ಮೂಲೆಗಳಿಂದ ಬರುವ ಪ್ರವಾಸಿಗರು ಸಾಂಸ್ಕೃತಿಕ ನಗರದ ಮೇಲೆ ಅಭಿಮಾನ ಹಾಗೂ ಗೌರವ ಇಟ್ಟಿದ್ದಾರೆ. ಈ ಬಾರಿ ವಿಶೇಷ ಹಾಗೂ ಅದ್ಧೂರಿಯಾಗಿ ದಸರಾ ಆಚರಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಮೈಸೂರು ಹೆಚ್ಚು ಕಳೆಕಟ್ಟಿ ಜನಾಕರ್ಷಿಸುವುದರಿಂದ ನಾಡಹಬ್ಬಕ್ಕೆ ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಬರುವರು. ಆ ಮೂಲಕ ಪ್ರವಾಸೋದ್ಯಮದ ವಹಿವಾಟು ಭರ್ಜರಿಯಾಗಿ ನಡೆಯಲಿದೆ.

ಮೈಸೂರಿಗೆ ಭೇಟಿ ಕೊಟ್ಟವರು ಇಲ್ಲಿನ ಆತಿಥ್ಯ ಹಾಗೂ ಸೌಂದರ್ಯವನ್ನು ಕೊಂಡಾಡುವುದರ ಮೂಲಕ ವಿಶ್ವದಾದ್ಯಂತ ಒಳ್ಳೆಯ ಅಭಿಪ್ರಾಯವು ಇರುವುದಕ್ಕಿಂತಲೂ ಹೆಚ್ಚು ಹರಡಬೇಕಿದೆ. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ವಹಿಸಬೇಕು. ಇಲ್ಲಿನ ಗೈಡ್‌ಗಳಿಗೆ, ಟಾಂಗಾ ಗಾಡಿಯವರಿಗೆ, ಆಟೋ ಚಾಲಕರಿಗೆ ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ಮಾರ್ಗದರ್ಶನ ನೀಡಿ ಅವರನ್ನು ಉತ್ತೇಜಿಸುವ ಮೂಲಕ ಪ್ರವಾಸಿಗರನ್ನು ಆಕರ್ಷಿಸಬೇಕು. ಕೆಲವು ಕಡೆಗಳಲ್ಲಿ ಅನವಶ್ಯಕವಾಗಿ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಲು ಶುಲ್ಕ ವಿಧಿಸುವುದನ್ನು ತಡೆಯಬೇಕು. ಉದಾ: ಪಾರಂಪರಿಕ ಕಟ್ಟಡಗಳಾದ ಲಲಿತಮಹಲ್ ಹಾಗೂ ಜಗನ್ಮೋಹನ ಪ್ಯಾಲೇಸ್‌ಗಳನ್ನು ನೋಡಲು ಪ್ರವಾಸಿಗರು ಅಥವಾ ನಮ್ಮದೇ ಜಿಲ್ಲೆಯ ಜನರು ಗೇಟ್ ಬಳಿಯೇ ಶುಲ್ಕ ಕೊಟ್ಟು ವೀಕ್ಷಿಸಬೇಕು! ರಾಜಮಹಾರಾಜರು ಸಾರ್ವಜನಿಕರ ಹಣದಿಂದ ಕಟ್ಟಿಸಿದ್ದು ಅದೇ ಜನರಿಂದ ಹಣ ವಸೂಲಿ ಮಾಡುವುದಕ್ಕಾ? ನಗರದ ಹೆಸರನ್ನು ಕೆಡಿಸುವ ಇಂತಹ ವ್ಯವಹಾರಗಳು ನಿಲ್ಲಬೇಕಿದೆ. ಪ್ರವಾಸೋದ್ಯಮವನ್ನು ಯಾವೆಲ್ಲಾ ರೀತಿಯಿಂದ ಅಭಿವೃದ್ಧಿಗೊಳಿಸಬಹುದು ಎಂಬುದರ ಬಗ್ಗೆ ತಜ್ಞರ ಅಭಿಪ್ರಾಯ ಪಡೆದು ಕ್ರಮವಹಿಸಿದರೆ ಅರಮನೆ ನಗರಿ ಮೈಸೂರು ಭಾರತದ ನಂ.1 ಪ್ರವಾಸೋದ್ಯಮ ನಗರವಾಗುವುದು!

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ತಡೆಗೋಡೆ ಇಲ್ಲದ ಬೋಳಮಾರನಹಳ್ಳಿ ಕೆರೆ: ಗ್ರಾಮಸ್ಥರಲ್ಲಿ ಆತಂಕ

ಮಾನ್ಯರೆ,

ಮಂಡ್ಯ ಜಿಲ್ಲೆ ಕಿಕ್ಕೇರಿ ಹೋಬಳಿ ಗಡಿಭಾಗದ ಬೋಳಮಾರನಹಳ್ಳಿ ಕೆರೆ ಏರಿ ಹಾಗೂ ಗ್ರಾಮದಲ್ಲಿ ಹಾದು ಹೋಗುವ ಹೇಮಾವತಿ ನಾಲೆಗೆ ತಡೆ ಗೋಡೆ ಇಲ್ಲದೆ ರೈತರು, ನಿತ್ಯ ಜೀವ ಭಯದಿಂದ ಓಡಾಡಬೇಕಿದೆ.



ಕೆರೆ 95 ಎಕರೆ ವಿಸ್ತಾರವಿದ್ದು, ಕೆರೆ ತುಂಬಿದರೆ ಸರೋವರದಂತೆ ಕಾಣಲಿದೆ. ಗ್ರಾಮದಿಂದ ಪರಸ್ಥಳಕ್ಕೆ ಹೋಗಲು ಕೆರೆ ಏರಿ ಬಿಟ್ಟು ಪರ್ಯಾಯ ಮಾರ್ಗವಿಲ್ಲದೆ ಕೆರೆ ಏರಿಯೇ ಸಂಪರ್ಕ ರಸ್ತೆಯಾಗಿದೆ. ಏರಿ ಮೇಲೆ ನಿತ್ಯ ಆನೆಗೊಳ, ಚನ್ನರಾಯಪಟ್ಟಣ, ಕಿಕ್ಕೇರಿ, ಚಿನ್ನೇನಹಳ್ಳಿ, ಮಾದಾಪುರ ಮತ್ತಿತರ ಗ್ರಾಮಗಳಿಗೆ ರೈತರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾಗಬೇಕಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಬೈಸಿಕಲ್‌ನಲ್ಲಿ ತೆರಳಬೇಕಿದ್ದು ಪೋಷಕರು ತಮ್ಮ ಮಕ್ಕಳನ್ನು ಕಳಿಸಲು ದಿಗಿಲು ಪಡುವಂತಾಗಿದೆ. ಉಂಡುಬತ್ತಿ, ಪಾಂಡವಪುರ, ಶ್ರೀರಂಗಪಟ್ಟಣದ ನಾಲೆ ಬಳಿ ನಡೆದ ಪ್ರಕರಣದಂತೆ ತಮ್ಮಲ್ಲಿ ನಡೆದರೆ ಏನು ಗತಿ ಎನ್ನುವುದು ಇಲ್ಲಿಯ ನಾಗರಿಕರ ಆತಂಕವಾಗಿದೆ. ಇತ್ತ ಅಧಿಕಾರಿಗಳು, ಜನಪ್ರತಿನಿಧಿಗಳು ಜೀವರಕ್ಷಣೆಗಾಗಿ ಕೆರೆ ಏರಿಗೆ ತಡೆಗೋಡೆ ನಿರ್ಮಾಣಕ್ಕೆ ಮುಂದಾಗದಿರುವುದು ಗ್ರಾಮಸ್ಥರ ಕೆಂಗಣ್ಣಿಗೆ ಗುರಿಯಾಗಿದೆ.

ಕೆರೆ ಏರಿ ಸುಮಾರು 1ಕಿ.ಮೀ.ನಷ್ಟು ಉದ್ದವಿದ್ದು ತಡೆಗೋಡೆ ಕಾಣದೆ ನಿತ್ಯ ಒಂದಲ್ಲ ಒಂದು ಅವಘಡ ಸಂಭವಿಸುವಂತಾಗಿದೆ. ರೈತರು ಎತ್ತಿನಗಾಡಿಯ ಮೂಲಕ ಜಮೀನುಗಳಿಗೆ ತೆರಳುವಾಗ ಸಾಕಷ್ಟು ಬಾರಿ ತೊಂದರೆಯಾಗಿದೆ. ದ್ವಿಚಕ್ರ ವಾಹನ ಸವಾರರು ಸಾಕಷ್ಟು ಬಾರಿ ಕೆರೆಗೆ ಉರುಳಿ ಕಷ್ಟಪಟ್ಟು ಜೀವ ರಕ್ಷಿಸಿಕೊಂಡಿದ್ದಾರೆ. ಎದುರು ಬದುರು ವಾಹನಗಳು ಬಂದಾಗ ಪಾದಚಾರಿಗಳು, ವಾಹನ ಸವಾರರು ಚಲಿಸಲು ದೊಡ್ಡ ಸರ್ಕಸ್ ಮಾಡಬೇಕಿದೆ. ಏರಿಯ ಇಕ್ಕೆಲಗಳಲ್ಲಿ ಗಿಡಗಂಟಿ, ಜೊಂಡು, ಮುಳ್ಳಿನಗಿಡ ಬೆಳೆದು ಮತ್ತಷ್ಟು ಏರಿಯ ರಸ್ತೆಯನ್ನು ಕಿರಿದು ಮಾಡಿವೆ. ಪೊದೆಯಂತೆ ಏರಿಯ ಇಕ್ಕೆಲಗಳಲ್ಲಿ ಗಿಡಗಂಟಿ ಬೆಳೆದ ಪರಿಣಾಮ ಏರಿಯ ಬದಿಯಲ್ಲಿ ಓಡಾಡಲು ವಿಷಜಂತುಗಳ ಭಯ ಕಾಡುತ್ತಿದೆ.

ತುರ್ತು ತಡೆಗೋಡೆ ನಿರ್ಮಿಸಿ ಸುಲಲಿತವಾಗಿ ರೈತರು, ವಾಹನ ಸವಾರರು, ವಿದ್ಯಾರ್ಥಿಗಳು ಪರಸ್ಥಳಕ್ಕೆ, ಜಮೀನುಗಳಿಗೆ ತೆರಳಲು ವ್ಯವಸ್ಥೆ ಮಾಡಬೇಕು ಎಂದು ಸಾಕಷ್ಟು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಲಾಯಿತು. ಇನ್ನಾದರೂ ಇತ್ತ ಗಮನಹರಿಸಿ ತಡೆಗೋಡೆ ನಿರ್ಮಿಸಿಕೊಟ್ಟು ಗ್ರಾಮಸ್ಥರು ಪ್ರಾಣ ಭಯಪಡದೆ ಸುಲಲಿತವಾಗಿ ಓಡಾಡಲು ತಡೆಗೋಡೆ ನಿರ್ಮಿಸಿಕೊಡಲಿ.


–ಶೇಖರ್, ಬೋಳಮಾರನಹಳ್ಳಿ

ದೊಡ್ಡ ಮೋರಿ ಹೂಳೆತ್ತಿ

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ ಕೆ.ಆರ್.ಮೊಹಲ್ಲಾ ವ್ಯಾಪ್ತಿಗೆ ಬರುವ ರಾಜಕಾಲುವೆಯನ್ನು ಹೂಳು ತೆಗೆದು ಸ್ವಚ್ಛಗೊಳಿಸಿ ಆನಂತರ ಇಕ್ಕೆಲಗಳಲ್ಲಿ ತಡೆಗೋಡೆ ನಿರ್ಮಿಸುವ ಕಾರ್ಯ ಅತ್ಯಂತ ತುರ್ತಾಗಿ ಆಗಬೇಕಿದೆ.

ಎಸ್.ಡಿ.ಎಂ ಮಹಿಳಾ ಕಾಲೇಜು,ಸಿಕೆಸಿ ಶಾಲೆ, ಮೈಸೂರು ಮಕ್ಕಳ ಕೂಟ, ಶಾರದಾ ವಿಲಾಸ ವಿದ್ಯಾಸಂಸ್ಥೆಗಳು, ಮಾಧ್ವಾ ಹಾಸ್ಟೆಲ್, ಬೆಟ್ಟದಪುರ ಸಂಕೇತಿ ಹಾಸ್ಟೆಲ್, ಹೊಯ್ಸಳ ಕರ್ನಾಟಕ ಬಾಲಕರ ವಿದ್ಯಾರ್ಥಿ ನಿಲಯ (ನೂತನ), ಕಾಳಿದಾಸ ಹಾಸ್ಟೆಲ್, ಶ್ರೀರಾಮ ಅರಸು ಮಂಡಲಿ, ಪಶುವೈದ್ಯ ಆಸ್ಪತ್ರೆ, ತುಳಸೀದಾಸ ಆಸ್ಪತ್ರೆ, ರೇಷ್ಮೆ ಇಲಾಖೆ ವಸತಿ ಗೃಹ, ಬೇಸ್ ಕಾಲೇಜು ಸೇರಿದಂತೆ ಅನೇಕ ವಿದ್ಯಾ ಸಂಸ್ಥೆಗಳು ಇದರ ತಟದಲ್ಲಿವೆ. ಇಲ್ಲಿ ಸಾರ್ವಜನಿಕರು, ಫುಟ್‌ಪಾತ್ ವ್ಯಾಪಾರಿಗಳು ಬಿಸಾಡುವ ತ್ಯಾಜ್ಯದಿಂದ ಹರಿಯುವ ನೀರು ನಿಧಾನಗತಿಯಲ್ಲಿ ಹರಿದು ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಇನ್ನು ಅಕ್ಕಪಕ್ಕದಲ್ಲಿರುವ ರಸ್ತೆಯಲ್ಲಿ ಗಿಡಗಂಟಿಗಳು ಬೆಳೆದಿವೆ. ಹೆಚ್ಚಿನ ಮಳೆ ಬಂದಾಗ ಮಣ್ಣಿನ ಸವಕಳಿಯಾಗುವುದರಿಂದ ಇಕ್ಕೆಲಗಳಲ್ಲಿ ತಡೆಗೋಡೆ ನಿರ್ಮಿಸಿ ಈ ತೊಂದರೆಗಳಿಂದ ಸಾರ್ವಜನಿಕರು, ವಿದ್ಯಾರ್ಥಿಗಳನ್ನು ಪಾರುಮಾಡಬೇಕೆಂದು ಪಾಲಿಕೆಯ ಅಧಿಕಾರಿಗಳಲ್ಲಿ ಮನವಿ. –ಜಯಸಿಂಹ ಎನ್.ಶ್ರೀಧರ್, ಮೈಸೂರು.




ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

ಕಸ್ಟಡಿ

ವೀಡಿಯೋ ಮಾಡಿದ ಮೇಲೆ ಫಾರ್ವರ್ಡ್ ಮಾಡದೇ ಇದ್ದಾರೆಯೇ...?


ಜೂಜು ಅಡ್ಡೆಯಲ್ಲಿ ಒಬ್ಬ ಕೂತಿದ್ದಾನೆ ಅಂದ್ರೆ ಆಡೋಕೆ ತಾನೇ ಬಂದಿರೋದು. ತನ್ನ ಜೋಬಲ್ಲಿರೋ ದುಡ್ಡನ್ನ ಆಡೋದಿಕ್ಕೆ ತೆಗೆಯೋಲ್ಲಾ ಅಂತ ಏನು ಗ್ಯಾರಂಟಿ. ಹೀಗೆ ಕೇಳಿ ನನ್ನನ್ನು ತಪ್ಪಿತಸ್ಥನಂತೆ ಜಗ್ಗಿದ್ದರು ಅಂದಿನ ACP ರಾಜೇಂದ್ರಕುಮಾರ್.





ಎಸಿಪಿ ರಾಜೇಂದ್ರ ಕುಮಾರ್





ಆವತ್ತು ACP ಕರೆದು, 'ತಗೋಳ್ರೀ ಈ ಸರ್ಚ್ ವಾರಂಟನ್ನ, ತಕ್ಷಣ ಹೋಗಿ ರೈಡ್ ಮಾಡಿ ಎಲ್ಲರನ್ನೂ ಒದ್ದು ಎಳಕೊಂಡು ಬನ್ನಿ' ಅಂದರು. ಲಾಡ್ಜೊಂದರಲ್ಲಿ ಹಣ ಬಾಜಿ ಕಟ್ಟಿ ಜೂಜಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ತಕ್ಷಣ ರೈಡ್ ಮಾಡಬೇಕು. ಅದು ಲಷ್ಕರ್ ಠಾಣಾ ಸರಹದ್ದಿನಲ್ಲಿದ್ದ ಪ್ರತಿಷ್ಠಿತ ಲಾಡ್ಜ್. ಹೋಗುವ ಮೊದಲು ಸರ್ಚ್ ವಾರಂಟ್ ಬೇಕೇ ಬೇಕು. ಮಾಮೂಲಿ ಹೋಟೆಲಾದರೆ ಮೊದಲು ಹೋಗಿ ರೈಡ್ ಮಾಡಿ ಆನಂತರ ವಾರಂಟ್ ಪಡೆದುಕೊಳ್ಳುವ ಪದ್ಧತಿಯೂ ಇತ್ತು. ಪ್ರತಿಷ್ಠಿತರು ಎಂದರೆ ಸಾಮಾನ್ಯವೇ, ವಾರಂಟಿಲ್ಲದೆ ಬರಿಗೈಲಿ ಹೋದರೆ ಬಟ್ಟೆ ಬಿಚ್ಚಿಸುತ್ತೇವೆ ಎಂದೆಲ್ಲಾ ಕುಣಿದಾಡುತ್ತಾರೆ!.

ಸಿಬ್ಬಂದಿಯನ್ನು ಜೊತೆ ಮಾಡಿಕೊಂಡು ದಿಢೀರನೆ ಆ ಹೋಟೆಲನ್ನು ಸುತ್ತುವರೆದೆ. ಹೋಟೆಲಿನ ನಿರ್ದಿಷ್ಟ ರೂಮಿನ ನಂಬರು, ಚಕ್ಕುಬಂದಿ ಎಲ್ಲವೂ ವಾರಂಟಿನಲ್ಲಿ ನಮೂದಾಗಿತ್ತು. ನಾನು ನುಗ್ಗಿದ್ದು ನೋಡಿ ಹೋಟೆಲ್ ಸಿಬ್ಬಂದಿಯೆಲ್ಲಾ ಗಾಬರಿ ಬಿದ್ದು ಓಡಿಬಂದರು.

ಸಿನಿಮಾದಲ್ಲಿ ಕೇಳುವಂತೆ 'ವಾರಂಟಿದೆಯಾ?' ಎಂದು ಕೇಳಿದ್ದರೆ ಫಟೀರನೆ ಕೆನ್ನೆಗೆ ಬಾರಿಸಿ 'ಇದೇ ಕಣ್ಲಾ ವಾರಂಟು' ಎಂದು ಹಸ್ತ ತೋರಿಸುವವನಿದ್ದೆ. ಬಂದವರೆಲ್ಲಾ ನನ್ನ ಪಕ್ಕ ನಿಶ್ಚೇಚಿತರಾಗಿ ನಿಂತುಕೊಂಡರು. ಒಳಗಿನಿಂದ ಬೋಲ್ಟ್ ಹಾಕಿತ್ತು. ಮೃದುವಾದ ದನಿಯಲ್ಲಿ ವೆಯ್ಟರ್‌ನಂತೆ ಬಾಗಿಲು ತಟ್ಟಿದೆ.

'ಯಾರಪ್ಪಾ? ಏನೂ ಬೇಡ. ಇದ್ರೆ ಫೋನ್ ಮಾಡ್ತೀವಿ' ಅತ್ತ ಆಢ್ಯತೆಯ ದನಿ ಕೇಳಿ ಬಂತು.

'ಯೇಯ್ ಯಾರ್‍ರೀ ಅದು, ಬಾಗಿಲು ತೆಗೀರಿ' ಗುಟುರು ಹಾಕಿದೆ. ಒಳಗಿನಿಂದ ಸದ್ದೇ ಬರಲಿಲ್ಲ. ಇನ್ನೆರಡು ಬಾರಿ ಕೂಗಿ ಬಾಗಿಲು ದಬದಬ ಬಡಿದೆ. ನಿಧಾನವಾಗಿ ಬಾಗಿಲು ತೆರೆಯಿತು. ಮಂಚದ ಮೇಲೆ ನಾಲ್ಕು ಜನ ಕುಳಿತಿದ್ದಾರೆ. ಉಳಿದ ಮೂವರು ಪಕ್ಕದ ಸೋಫಾದಲ್ಲಿ ಕೂತಿದ್ದಾರೆ. ಒಬ್ಬಾತ ಗಾಢ ನಿದ್ದೆಯಲ್ಲಿ ಪವಡಿಸಿದ್ದಾನೆ. ಪೊಲೀಸ್ ಫೋಟೋಗ್ರಾಫರ್ ತಕ್ಷಣ ಕ್ಲಿಕ್ಕಿಸಿದ. ಆಗ 'ಎಲೆಕ್ಷನ್ ಬಗ್ಗೆ ಮಾತಾಡೋಕೆ ಮೀಟಿಂಗ್ ಸೇರಿದ್ದೆವು' ಎಂದ ಒಬ್ಬ.

'ಎಲ್ರೂ ಹೇಗೇಗೆ ಕೂತಿದ್ದೀರೋ ಹಾಗೇ ಇರಿ. ಅತ್ತಿತ್ತ ಮಿಸುಕಿದರೆ ಗೂಸಾ ಬೀಳುತ್ತೆ ಹುಷಾರ್!'

ಪೊಲೀಸರು ಒಬ್ಬೊಬ್ಬರನ್ನೂ ಝಡತಿ ಮಾಡಿ, ಒಬ್ಬೊಬ್ಬರ ಕತ್ತಿನ ಸರ, ವಾಚು, ಉಂಗುರ, ಜೇಬಲ್ಲಿದ್ದ ಪರ್ಸುಗಳನ್ನೆಲ್ಲಾ ಮಂಚದ ಮೇಲೆ ಹಾಕಿದರು. ಒಬ್ಬೊಬ್ಬರ ವಸ್ತುಗಳನ್ನೂ ಆಗಿಂದಾಗಲೇ ಕರ್ಚೀಫಿನಲ್ಲಿ ಗಂಟು ಕಟ್ಟಿ ಅವರವರ ಹೆಸರಿನ ಚೀಟಿ ಅಂಟಿಸಿದೆವು.

ಯಾರೊಬ್ಬರೂ ಕಮಕ್ ಕಿಮಕ್ ಅನ್ನಲಿಲ್ಲ. ತಪ್ಪಿತಸ್ಥ ಭಾವದಲ್ಲಿ ಪೆಚ್ಚಾಗಿ ನಿಂತಿದ್ದರು. ಕೆಲವರು ಥರ ಥರ ನಡುಗುತ್ತಿದ್ದರು. ಸೋಫಾದಲ್ಲಿ ಕೂತಿದ್ದ ವ್ಯಕ್ತಿಯೊಬ್ಬನನ್ನು ತಪಾಸಣೆ ಮಾಡಿದಾಗ ಪ್ಯಾಂಟಿನ ಒಳಜೇಬಿನಲ್ಲಿ ಇಪ್ಪತ್ತು ಸಾವಿರ ಮತ್ತು ಉಳಿದವರ ಜೇಬಿನಲ್ಲಿ ಏಳು ಸಾವಿರ ನಗದು ಸಿಕ್ಕಿತು. ಸಾರ್... ಸಾರ್... ಅವರು ಮಾತ್ರ ಇಸ್ಪೀಟ್ ಆಡ್ತಿರಲಿಲ್ಲ. ಇವ್ರು ಬಸುರಾಜುರನ್ನು ಮಾತಾಡಿಸಲು ಬಂದಿದ್ದರು. ನಮ್ಮದು ಬೇಕಾದ್ರೆ ಹೇಳಿ ತಪ್ಪಾಗಿದೆ ಒಪ್ಪಿಕೋತೀವಿ' ಎಂದು ತೆಪ್ಪಗೆ ನಿಂತಿದ್ದ ಎಲ್ಲರೂ ಅಂದರು.

ಅದು ನಿಜವಿರಬಹುದೆಂದು ಆ ಕ್ಷಣಕ್ಕೆ ಅನ್ನಿಸಿತು. ಆದರೂ ದಂಡಿನಲ್ಲಿ ಸೋದರ ಮಾವನೇ! ಆತನದ್ದನ್ನೂ ಕಟ್ಟಿಸಿ ಲೇಬಲ್ ಹಾಕಿಸಿದೆ. ಬೆಡ್ ಷೀಟೆಲ್ಲಿ ಎಂದರೆ ಯಾರಿಂದಲೂ ಉತ್ತರವೇ ಇಲ್ಲ. ಮಂಚದಡಿ ಹಾಕಿದ್ದು ಕಾಣಿಸಿತು. ಜೋಡಿಸಿದ್ದ ಮಂಚಗಳನ್ನು ಅಗಲಿಸಿ ಬೆಡ್‌ಷೀಟನ್ನು ತೆಗೆದು ನೋಡಿದರೆ ಒಂದೂವರೆ ಲಕ್ಷಕ್ಕೂ ಮೀರಿದ ಹಣ, ಇಸ್ಪೀಟು ಎಲೆಗಳು ಸಿಕ್ಕವು. ಅವರನ್ನೇ ಕೇಳಿ ಒಬ್ಬೊಬ್ಬನಿಗೂ ಸೇರಿದ್ದ ಹಣವೆಷ್ಟು ಎಂಬುದನ್ನು ಲೆಕ್ಕ ಹಾಕಿಸಿ ಮಹಜರ್ ಬರೆಸಿದೆ. ಮೊದಲೇ ಕರೆದೊಯ್ದಿದ್ದ ಪಂಚಾಯತಿದಾರರು ಎಲ್ಲಕ್ಕೂ ಸಾಕ್ಷಿಯಾಗಿದ್ದರು.

ವಿಚಾರಿಸಿ ನೋಡಿದರೆ ಒಬ್ಬೊಬ್ಬರೂ ದೊಡ್ಡ ಕುಳಗಳೇ. ಪ್ರಭಾವಿಗಳೇ. ಯುಗಾದಿಯ ಮಾರನೇ ದಿನದ ವರ್ಷ ತೊಡಕು ಎಂದು ಎಲ್ಲರೂ ಜೂಜಾಟಕ್ಕೆ ಸೇರಿದ್ದರು. ಯಾರೂ ನಿತ್ಯದ ಜೂಜುಕೋರರಲ್ಲ. ಗಂಗೆ ಬಾರೆ ಗೌರಿ ಬಾರೆ ಎಂದು ಎಲ್ಲರಿಗೂ ಫೋನ್ ಮಾಡಿ ಆಹ್ವಾನಿಸಿದ್ದಾರೆ. ಎಲ್ಲರೂ ಮಧ್ಯಾಹ್ನದ ಹಬ್ಬದೂಟ, ನಿದ್ದೆ ಮುಗಿಸಿ ಮೋಜಿಗಾಗಿ ಸೇರಿದ್ದಾರೆ. ಕರೆದವರ ಪೈಕಿ ಯಾವುದೋ ಅತೃಪ್ತ ಆತ್ಮ, ACPಯವರಿಗೆ ಕರೆ ಮಾಡಿ ಮಾಹಿತಿ ಕೊಟ್ಟಿದೆ. 'ಏನೋ ವರ್ಷಕ್ಕೊಂದು ಹಬ್ಬದ ದಿನ ಅಂತ ಸೇರಿದ್ದೋ, ತಪ್ಪಾಯ್ತು' ಎಂದು ಕೈಕಾಲು ಹಿಡಿದು ಬೇಡಿಕೊಂಡರು. ಹೋಟೆಲಿನ ಮಾಲೀಕ ಮತ್ತಿತರ ಪ್ರತಿಷ್ಠಿತರೂ ಬಂದು ಕೇಳಿಕೊಂಡರು.

ಸರ್ಚ್ ವಾರಂಟಿನ ಮೇಲೆ ಬಂದು ರೈಡ್ ಮಾಡಿದ್ದೇನೆ. I'm really helpless?.' ಅಂದೆ. ಅವರ ಗೋಗರೆತ ನಿಲ್ಲಲಿಲ್ಲ.

'ತಪ್ಪು ಅಂತ ಆದ್ಮೇಲೆ ಬೇಡಿ ಹಾಕ್ಕಂಡು ರೋಡಲ್ಲಿ ಕರೆದುಕೊಂಡು ಹೋಗ್ಬೇಕಾಗುತ್ತೆ. ಏನೂ ಮಾಡೋದಿಕ್ಕೆ ಆಗೋದಿಲ್ಲ' ಪಟಾಕಿ ಹಾರಿಸಿದೆ. ಅವರೆಲ್ಲ ಹೌಹಾರಿ ಬಿದ್ದರು.

'ಹಾಗೆ ಮಾಡಿದ್ರೆ ನಾವು ವಿಷಾನೋ, ನೇಣೋ ಹಾಕ್ಕಂಬೇಕಾಗುತ್ತೆ. ಹಂಗೆ ಮಾಡ್ಬೇಡಿ ಸಾರ್' ಎಂದು ಅಂಗಲಾಚಿದರು. ಇದು ನಿರೀಕ್ಷಿತ ಸೀನರಿ. ಅದಕ್ಕಾಗೇ ಬೇಡಿ ಹಾಕ್ಕಂಡು ಮೆರವಣಿಗೆ ಮಾಡ್ತೀನಿ ಎಂದಿದ್ದೆ.

ಕೊನೆಗೆ ಅವರೆಲ್ಲರ ಮಾತಿಗೆ ಬೆಲೆ ಕೊಟ್ಟವನಂತೆ, 'ಆಯ್ತು ಬೇಡಿ ಗೀಡಿ ಹಾಕೋದಿಲ್ಲ. ಮಹಜರೆಲ್ಲಾ ಮುಗಿಯೋ ತನಕ co operate ಮಾಡಿ. ಆನಂತರ ಹೇಗೋ ಕೇಸು ಮುಗಿಸಿಕೊಳ್ಳಿ, ಮಧ್ಯದಲ್ಲಿ ಯಾವನಾದ್ರೂ ತಲೆಹರಟೆ ಮಾಡಿದ್ರೆ ಗ್ರಾಚಾರ ಬಿಡಿಸಿ ಬಿಡ್ತೇನೆ ಹುಷಾರ್!' ಎಂಬ ಎಚ್ಚರಿಕೆ ಕೊಟ್ಟೆ. ಯಾರೊಬ್ಬರೂ ತಪ್ಪಿ ಕೂಡ ಮಾತಾಡಲಿಲ್ಲ. ಕೈಮುಗಿದುಕೊಂಡು ತೆಪ್ಪಗೆ ನಿಂತಿದ್ದರು. ನನ್ನ ಆರ್ಭಟ ನೋಡಿ ಎಲ್ಲಿ ಈ ಕೇಡಿಗ ಬೇಡಿ ಹಾಕ್ಕಂಡು ಊರೆಲ್ಲಾ ಮೆರವಣಿಗೆ ಮಾಡ್ತಾನೋ ಎಂದು ಎಲ್ಲರೂ ಚಿಂತಿತರಾಗಿದ್ದರು. ಇದೇ ಎಲ್ಲಾ ಮರ್ಯಾದಸ್ಥರ ಸಮಸ್ಯೆ. ಕಾನೂನು ಕಟ್ಟಳೆ ಎಂದು ಹೆದರುವವರ ಆತಂಕ. ನಾಚಿಕೆಗೆಟ್ಟ ಪಂಟರ್‌ಗಳಾಗಿದ್ದಿದ್ದರೆ ಅವರ ನಡವಳಿಕೆಯೇ ಬೇರೆ. ಮೂರೂ ಬಿಟ್ಟೋನು ಊರಿಗೇ ದೊಡ್ಡೋನು ಅಲ್ವಾ....

ಮಹಜರಿನಲ್ಲಿ ಇಪ್ಪತ್ತೇಳು ಸಾವಿರ ಸಿಕ್ಕವನ ಹಣ, ಒಡವೆ, ತಂದಿದ್ದ ವಾಹನ ಎಲ್ಲವನ್ನೂ ಬರೆಸಲು ಮುಂದಾದೆ. 'ಸಾರ್... ಸಾರ್... ಅವರು ಖಂಡಿತವಾಗಿಯೂ ಆಟ ಆಡ್ತಿರಲಿಲ್ಲ. ನಾವುಗಳು ಆಡ್ತಿದ್ದೋ. ನಮ್ಮ ಮೇಲೆ ಕೇಸು ನೀವು ಹಾಕ್ಕಳಿ. ಆದ್ರೆ ಅವರು ಮಾತಾ ಡಿಸೋಕೆ ಅಂತ ಬಂದಿದ್ರು,ಆಟದಲ್ಲಿ ಇರಲೇ ಇಲ್ಲ. ಅವರನ್ನು ದಯವಿಟ್ಟು ಸೇರಿಸಬೇಡಿ' ಎಂದು ಒಕ್ಕೊರಲಿನಿಂದ ಕೇಳಿಕೊಂಡರು. ಹೋಟೆಲಿನ ಸಿಬ್ಬಂದಿ ಕೂಡ ಆತ ಕೊನೇಲಿ ಬಂದಿದ್ದು ಅಂತ ಹೇಳಿದ.

ಆತನ ಫೋಟೋಗಳನ್ನು ಉಳಿದವರೊಂದಿಗೆ ತೆಗೆದಾಗಿದೆ. ಈಗ ಕೈಬಿಟ್ಟರೆ ನಾಳೆ ಅದೇ ದೊಡ್ಡ ವಿವಾದಕ್ಕೆ ಕಾರಣವಾಗುತ್ತದೆ. ಇಂತಹ ಪ್ರತಿಷ್ಠಿತರು ಸಿಕ್ಕಿಬಿದ್ದಾಗ ಮಿಣ್ಣಗಿರುತ್ತಾರೆ. ಠಾಣೆಯಿಂದ ಹೊರಬಂದ ಮೇಲೆ ಇಲ್ಲದ ಅವತಾರ ತೆಗೆದು, allegations ಮಾಡುತ್ತಾರೆ. ಹಾಗೆಂದು ನಿರಪರಾಧಿಯೊಬ್ಬನನ್ನು ಸಿಕ್ಕಿಸಲು ಮನಸ್ಸಾಗಲಿಲ್ಲ. ಅವನ ಹೆಸರನ್ನು ಕೈಬಿಟ್ಟೆ ಉಳಿದೆಲ್ಲರ ಹೆಸರು, ದುಡ್ಡು ಅವರುಗಳು ತಂದಿದ್ದ ವಾಹನಗಳು, ಹೋಟೆಲಿನ ಮಂಚ, ಬೆಡ್‌ಷೀಟು ಹೀಗೆ ಸಮಸ್ತವನ್ನೂ ಸೀಜ್ ಮಾಡಿದೆ. ಒಳಾಂಗಣದ ಜೂಜಾಟವೆಂದರೆ ಪಣಕ್ಕಿಟ್ಟಿದ್ದ ಹಣವನ್ನು ಮಾತ್ರ ಸೀಝ್ ಮಾಡಿದರೆ ರೈಡಿನ ಬಿಗಿ ಹೋಗಿ ತೀರ ಸಾಮಾನ್ಯ ಕೇಸು ಅನ್ನಿಸಿಬಿಡುತ್ತದೆ.

ಅಷ್ಟರಲ್ಲಾಗಲೇ ಹತ್ತಾರು ರಾಜಕಾರಣಿಗಳು, ಕಾರ್ಪೊರೇಟರುಗಳು ಬಂದು ಸಹಾಯ ಮಾಡುವಂತೆ ಗೋಗರೆದರು. ವಾರಂಟನ್ನು ತೋರಿಸಿ ಎಲ್ಲರಿಗೂ ಒಂದೇ ಉತ್ತರ.' I'm really helpless! ಇಲ್ದಿದ್ರೆ ಹಬ್ಬ ಅಂತ ನಾನೇ ಕಳಿಸಿಕೊಡುತ್ತಿದ್ದೆ' ಎಂಬ ತುಪ್ಪ ಸವರುವ ಮಾತು.

ಎಸಿಪಿಯವರಿಗೆ ವಾರಂಟು, ಮಹಜರು, ನನ್ನ ರಿಪೋರ್ಟು ಎಲ್ಲವನ್ನೂ ಒಪ್ಪಿಸಿದೆ. ಇಪ್ಪತ್ತೇಳು ಸಾವಿರದ ಪ್ರಸಂಗವನ್ನೂ ಹೇಳಿದೆ. ಹಸನ್ಮುಖರಾಗಿದ್ದ ಎಸಿಪಿ ರಾಜೇಂದ್ರಕುಮಾರ್ ಒಮ್ಮೆಗೇ ಸಿಡಿದುಬಿದ್ದರು.

'ಯೇ ಮಿಸ್ಟರ್, ಏನ್ ಮಾತಾಡ್ತಾ ಇದ್ದೀರಿ ನೀವು' ಜೂಜಿನ ಅಡ್ಡೆಯಲ್ಲಿದ್ದೋನು ಆಡ್ತಿರಲಿಲ್ಲ ಅಂತ ಹೆಂಗೆ ತೀರ್ಮಾನಕ್ಕೆ ಬಂದ್ರಿ. ಜೂಜಿನ ಅಡ್ಡೆಯಲ್ಲಿ ಕೂತಿದ್ದ ಅಂದ್ರೆ ಆಡೋಕೆ ಬಂದಿದ್ದ ಅಂತ ತಾನೇ. ಹಣ ಜೇಬಲ್ಲಿತ್ತು ಅಂದ್ರೆ ಆಡೋದಿಕ್ಕೆ ತೆಗೆಯೋದಿಲ್ಲ ಅಂತನಾ. ಬಾಳೆಹಣ್ಣಿನ ಸಿಪ್ಪೆ ಸುಲಿದಿರೋ ಕೋತಿ ತಿನ್ನೋದಿಲ್ಲಾಂದ್ರೆ ಏನರ್ಥ' ಎಂದು ಗುದುರಿಸಿಬಿಟ್ಟರು.

ತಪ್ಪಿತಸ್ಥನಂತೆ ನಿಂತೆ. ಏನೋ ಸವರಣೆ ಮಾತಾಡಲು ಹೋದೆ. 'ಯೇ ಮಿಸ್ಟರ್ ಬಾಯ್ಮುಚ್ರೀ ಸಾಕು. I suspect your bonafide' ಮುಲಾಜಿಡದ ಮಾತು.

'ನಾನು ಏನೂಂತ ತಮಗೇ ಗೊತ್ತು. ನೀವೇ ಹೀಗಂದ್ರೆ ಹೇಗೆ ಸಾರ್' ಹಳೆಯ ವಿಶ್ವಾಸ ಜ್ಞಾಪಿಸಲು ಹೋದೆ.

'ಅವೆಲ್ಲಾ ಮಾತು ಬೇಡ್ರೀ. ನಾನೇನು ನಿಮ್ಮತ್ರ ನೆಂಟಸ್ತಿಕೆ ಮಾಡಬೇಕಾಗಿಲ್ಲ. ಡ್ಯೂಟಿ ವಿಚಾರ ಕೇಳ್ತಾ ಇದ್ದೇನೆ. ಯಾಕೆ ಸೀಜ಼್ ಮಾಡ್ಲಿಲ್ಲ ಅದನ್ನ ಹೇಳಿ. you owe an explanation for that.' ಎಂದವರೇ ಮಹಜರನ್ನು ಪುನಃ ಹೊಸದಾಗಿ ಬರೆಸಿ ಆ ಹಣವನ್ನೂ ಸೀಜ್ ಮಾಡಿಸಿದರು. ಪಂಚಾಯಿತರ ಸಹಿಯನ್ನೂ ಹಾಕಿಸಿದರು. ಇವೆಲ್ಲ ಮುಗಿಯುವುದರೊಳಗೆ ರಾತ್ರಿ ಎರಡು ಗಂಟೆ ಮೀರಿತ್ತು. ಅಂದಿನ ಅಧಿಕಾರಿಗಳ ಉಸ್ತುವಾರಿ ಅಷ್ಟು ಕಟುವಾಗಿದ್ದರಿಂದಲೇ ಪೊಲೀಸರ ಬಿಗಿ ಜಬರ್ದಸ್ತಾಗಿತ್ತು.

*****

ಇದೆಲ್ಲ ಏಕೆ ನೆನಪಾಯಿತೆಂದರೆ, ಉಡುಪಿ ವೀಡಿಯೋ ಪ್ರಕರಣವನ್ನು ಅನೇಕರು ಕುಶಾಮತ್ತಿಗಾಗಿ ತೆಗೆದದ್ದು. ಆ ಹುಡುಗಿಯರು ಅದನ್ನು ಯಾರಿಗೂ ಕಳಿಸುವ ಉದ್ದೇಶ ಹೊಂದಿರಲಿಲ್ಲ ಎಂಬ ತೇಲಿಕೆ ಮಾತಾಡುತ್ತಿದ್ದಾರೆ. ಮಕ್ಕಳ ಹುಡುಗಾಟಿಕೆಯನ್ನು ದೊಡ್ಡದು ಮಾಡುವುದು ಬೇಡ. ಕೋಮು ಬಣ್ಣ ಬಳಿಯುವುದು ಬೇಡ ಎಂದೆಲ್ಲ ಆರೋಪಿತೆಯರ ಬಗ್ಗೆ ಕರುಣೆ ಸೂಸಿ ಮಾತಾಡುತ್ತಿದ್ದಾರೆ.

ಈ ಪ್ರಕರಣವನ್ನು ಗಂಭೀರವಾಗಿಯೇ ತೆಗೆದುಕೊಳ್ಳಬೇಕು. ಮಹಿಳೆಯೊಬ್ಬಳ ಅರಿವಿಗೆ ಬಾರದಂತೆ ಅವಳ ಖಾಸಗಿ ಚಟುವಟಿಕೆ, ಅಂಗಾಂಗಗಳನ್ನು ಚಿತ್ರೀಕರಿಸುವುದು ಗುರುತರ ಕ್ರಿಮಿನಲ್ ಅಪರಾಧ. IPCಯ 354 ಸಿ ಪ್ರಕಾರ ಶಿಕ್ಷಾರ್ಹ. ಮೂರರಿಂದ ಐದು ವರ್ಷದವರೆಗೂ ಶಿಕ್ಷೆ ಮತ್ತು ದಂಡ ವಿಧಿಸಬಹುದು.

ಈ ಕೃತ್ಯವನ್ನು ಲಘುವಾಗಿ ನೋಡಲಾಗದು. ಹಾಗಿದ್ದರೆ ಕಾನೂನಿಗೇನು ಬೆಲೆ?

ಇಂತಹ ವೀಡಿಯೋ ಮಾಡಿದ ಮೇಲೆ ಫಾರ್ವರ್ಡ್ ಮಾಡೋಲ್ಲ ಎಂಬುದಕ್ಕೆ ಗ್ಯಾರಂಟಿಯೇನು?. ಜೂಜುಕಟ್ಟೆಯಲ್ಲಿ ಕುಳಿತವನು ಜೇಬಿನ ಹಣ ತೆಗೆಯದೆ ಇರುವನೇ? ಸಿಪ್ಪೆ ಸುಲಿದ ಬಾಳೆ ಹಣ್ಣನ್ನು ಕೈಯ್ಯಲ್ಲಿ ಹಿಡಿದಿರುವ ಮಂಗ ಬಾಯಿಗಿಡದೆ ಬಿಟ್ಟೀತೇ?

*****

ನಿನ್ನೆ ಮೊನ್ನೆಯಿಂದ ಹೊಸ ರಾಗ ಶುರುವಾಗಿದೆ. ಆ ಮೂರೂ ಮೊಬೈಲುಗಳಲ್ಲಿ ಏನೇನೂ ಇರಲಿಲ್ಲವೆಂಬ ಕತೆ!. ಶಾಲೆಯವರೇ ಮೊಬೈಲ್ ನೋಡಿ ಅವರ ಮಟ್ಟದಲ್ಲಿ ವಾರ್ನ್ ಮಾಡಿದ್ದಾರೆ ಅಂದರೆ ಮೊಬೈಲುಗಳಲ್ಲಿ ಆಕ್ಷೇಪಾರ್ಹ ಅಶ್ಲೀಲ ಭಾಗಗಳಿದ್ದವು ಎಂಬುದು 100% ಸತ್ಯ. ಅವನ್ನು ಅಳಿಸಿದ್ದರೂ ರಿಟ್ರೀವ್ ಮಾಡಬಹುದು.

ಈಗ ನೋಡಿದರೆ ಆ ಹುಡುಗಿಯರಿಂದ ವಶಪಡಿಸಿಕೊಂಡ ಮೊಬೈಲುಗಳಲ್ಲಿ ಏನೇನೂ ಇಲ್ಲವಂತೆ!

ಅಂದರೆ ಪೊಲೀಸರನ್ನು ದಾರಿ ತಪ್ಪಿಸಲು ಬೇರೆಯದೇ ಮೊಬೈಲ್ ಸೆಟ್‌ಗಳನ್ನು ಕೊಟ್ಟಿದ್ದಾರೆ ಎಂಬುದು ಸ್ಪಷ್ಟ. ಅಪರಾಧಿಗಳು ಪೊಲೀಸರಿಗೇ ಚಳ್ಳೆಹಣ್ಣು ತಿನ್ನಿಸುವಂತಾದರೆ? ಸಾಕ್ಷ್ಯಗಳನ್ನು ನಾಶ ಮಾಡಿದ್ದಾರೆ ಎಂದು ಮತ್ತೊಂದು ಸೆಕ್ಷನ್ ಜಡಿದು ತನಿಖೆ ಮಾಡುವುದು ಅಗತ್ಯ.

CRIMINALS ARE CRIMINALS ONLY SHOW NO MERCY ON THEM

*****

ಜೈಲು ಅಧಿಕಾರಿಗಳಿಗೆ ಸ್ಯಾಂಟ್ರೋ ರವಿ ಕಿರುಕುಳ ಆರೋಪ; ಬೆಂಗಳೂರು ಜೈಲಿಗೆ ಸ್ಥಳಾಂತರಿಸಲು ಕೋರ್ಟ್‌ಗೆ ಮನವಿ

ಮೈಸೂರು, ಆ.2– ವೇಶ್ಯಾವಾಟಿಕೆ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿದ್ದ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ಜೈಲಿನಲ್ಲಿ ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿದ್ದು, ಇದರಿಂದ ರೋಸಿ ಹೋಗಿರುವ ಜೈಲಿನ ಮುಖ್ಯ ಅಧೀಕ್ಷಕಿ ಕೆ.ಸಿ. ದಿವ್ಯಶ್ರೀ ಅವರು ಈತನನ್ನು ಬೆಂಗಳೂರು ಜೈಲಿಗೆ ವರ್ಗಾವಣೆ ಮಾಡಲು ಅನುಮತಿ ನೀಡಬೇಕೆಂದು ಮೈಸೂರಿನ 6ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರನ್ನು ಕೋರಿದ್ದಾರೆ.

ಈ ಸಂಬಂಧ ದಿವ್ಯಶ್ರೀಯವರು ಏಪ್ರಿಲ್ 13 ಮತ್ತು ಮೇ 22ರಂದು ನ್ಯಾಯಾಧೀಶರಿಗೆ ಪತ್ರ ಬರೆದಿದ್ದಾರೆ. ಮಹಿಳೆಯೋರ್ವರು ನೀಡಿದ ದೂರಿನ ಮೇರೆಗೆ ವಿಜಯನಗರ ಠಾಣೆ ಪೊಲೀಸರು ಕಳೆದ ಜನವರಿ 14ರಂದು ಸ್ಯಾಂಟ್ರೋ ರವಿಯನ್ನು ಬಂಧಿಸಿ, ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರು ಜೈಲಿಗೆ ಬಿಟ್ಟಿದ್ದರು. ಈತ ಹಲವು ಹಿರಿಯ ಅಧಿಕಾರಿಗಳ ವರ್ಗಾವಣೆ ಹಾಗೂ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸಿರುವ ಬಗ್ಗೆ ಮಾಧ್ಯಮದಲ್ಲಿ ಪ್ರಸಾರವಾಗಿದ್ದ ಹಿನ್ನೆಲೆಯಲ್ಲಿ ಸದರಿ ಪ್ರಕರಣದ ಸೂಕ್ಷ್ಮತೆಯನ್ನು ಅರಿತು ಸ್ಯಾಂಟ್ರೋ ರವಿಯನ್ನು ಜೈಲಿನಲ್ಲಿ ಪ್ರತ್ಯೇಕ ಕೊಠಡಿಯಲ್ಲಿರಿಸಿ ದಿನದ 24 ಗಂಟೆಯೂ ಆ ಕೊಠಡಿಗೆ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿ ನಿಗಾ ವಹಿಸಲಾಗುತ್ತಿದೆ ಎಂದು ದಿವ್ಯಶ್ರೀ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.



ಈ ಮಧ್ಯೆ ಸ್ಯಾಂಟ್ರೋ ರವಿ ಇಚ್ಛೆಸಿದಲ್ಲಿ ಇತರ ಬಂಧಿಗಳೊಡನೆ ಮಾತನಾಡಲು ಹಾಗೂ ಜೈಲಿನ ಆವರಣದಲ್ಲಿ ಓಡಾಡಲು ಅನುಮತಿ ನೀಡುವಂತೆಯೂ, ಈತ ಈ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಂಡರೆ ಅದನ್ನು ವಜಾಗೊಳಿಸಲಾಗುವುದು ಎಂದು ಫೆಬ್ರವರಿ 21ರಂದು ನ್ಯಾಯಾಲಯ ನೀಡಿರುವ ಆದೇಶದ ಪತ್ರದಲ್ಲಿ ಉಲ್ಲೇಖಿಸಿರುವ ದಿವ್ಯಶ್ರೀಯವರು ಆದೇಶದಂತೆ ಸ್ಯಾಂಟ್ರೋ ರವಿಯನ್ನು ಜೈಲಿನೊಳಗೆ ಓಡಾಡಲು ಹಾಗೂ ಇತರ ಬಂಧಿಗಳೊಂದಿಗೆ ಬೆರೆಯಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸ್ಯಾಂಟ್ರೋ ರವಿ ಜೈಲಿನ ಸಿಬ್ಬಂದಿಯನ್ನು ವಿನಾಕಾರಣ ನಿಂದಿಸುತ್ತಾನೆ ಹಾಗೂ ಸಹ ಬಂಧಿ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ತಿಳಿಸಿರುವ ಅವರು, ಏಪ್ರಿಲ್ 5ರಂದು ಈತನನ್ನು ನ್ಯಾಯಾಲಯಕ್ಕೆ ಕರೆತಂದ ವೇಳೆ ರಾಮ್‌ಜೀ ಕಾನ್‌ಜೀ ಬಾಯ್ ತುಕಾಡಿಯಾ ಎಂಬ ಸಹ ಬಂಧಿ ಮೇಲೆ ನ್ಯಾಯಾಲಯದ ಮುಂದೆಯೇ ಹಲ್ಲೆ ನಡೆಸಿದ್ದಾನೆ. ಬಾಯ್ ತುಕಾಡಿಯಾನನ್ನು ನೋಡಲು ಬಂದಿದ್ದ ಆತನ ತಾಯಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಏಪ್ರಿಲ್ 12ರಂದು ಜೈಲಿನ ವೀಕ್ಷಕರಾದ ರಾಘವೇಂದ್ರ ನಂದಿ, ಹೆಚ್. ವಿವೇಕ್ ಮತ್ತು ಶಿವಾನಂದ ಕೋಕಲೆ ಅವರು ಸ್ಯಾಂಟ್ರೋ ರವಿ ಇದ್ದ ಕೊಠಡಿಗೆ ಬೀಗ ಹಾಕಲು ಹೋದಾಗ ಹಾಗೂ ಕೊಠಡಿಯನ್ನು ತಪಾಸಣೆ ಮಾಡುವ ವೇಳೆ ಸಹಕರಿಸದೇ ಅವರನ್ನು ಏಕವಚನದಲ್ಲಿ ನಿಂದಿಸಿದ್ದಾನೆ. ಅಲ್ಲದೇ ತನ್ನ ಕೊಠಡಿಯೊಳಗೆ ಬರಬೇಕಾದರೆ ಶೂಗಳನ್ನು ಬಿಚ್ಚಿಟ್ಟು ಬರಬೇಕು. ನೀವು ಜುಜುಬಿ ವೀಕ್ಷಕರಷ್ಟೇ ಎಂದು ನಿಂದಿಸಿದ್ದಾನೆ. ಈತನ ವರ್ತನೆಗಳು ಸಿಬ್ಬಂದಿ ಧರಿಸಿದ್ದ ಭದ್ರತಾ ಉಪಕರಣವಾದ ಬಾಡಿವೋರ್ನ್ ಕ್ಯಾಮರಾದಲ್ಲಿ ಸೆರೆಯಾಗಿದೆ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಸ್ಯಾಂಟ್ರೋ ರವಿ ಸಕ್ಕರೆ ಖಾಯಿಲೆ ರೋಗಿಯಾಗಿದ್ದು, ಈತನಿಗೆ ಸಮಯಕ್ಕೆ ಸರಿಯಾಗಿ ಜೈಲಿನಲ್ಲಿ ಔಷಧಿ ನೀಡಲಾಗುತ್ತಿದೆ. ಜೈಲಿನ ಆಸ್ಪತ್ರೆ ವಿಭಾಗದ ಸಹಾಯಕರಾದ ಮಧು ಅವರು ಏಪ್ರಿಲ್ 12 ಮತ್ತು 13ರಂದು ಔಷಧಿ ನೀಡಲು ಆತನ ಕೊಠಡಿಗೆ ಹೋದಾಗ ಅವರನ್ನು ಏಕವಚನದಲ್ಲಿ ಮಾತನಾಡಿ ಔಷಧಿ ಪಡೆಯಲು ನಿರಾಕರಿಸಿದ್ದಾನೆ. ಈ ಸಂಬಂಧ ಜೈಲಿನ ಚಾರ್ಜ್ ಪುಸ್ತಕದಲ್ಲಿ ನಮೂದಿಸಲಾಗಿದೆ.

ಜೈಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗು ಸಿಬ್ಬಂದಿಗೆ ಸ್ಯಾಂಟ್ರೋ ರವಿ ಮುಜುಗರ ಉಂಟುಮಾಡುತ್ತಿರುವುದರ ಜೊತೆಗೆ ಇತರ ಬಂಧಿಗಳನ್ನು ಪ್ರಚೋದಿಸುತ್ತಿದ್ದಾನೆ. ಇದರಿಂದ ಜೈಲಿನ ಉತ್ತಮ ಆಡಳಿತಕ್ಕೆ ಧಕ್ಕೆಯುಂಟಾಗುತ್ತಿದೆ ಎಂದು ಪತ್ರದಲ್ಲಿ ವಿವರಿಸಿರುವ ಅವರು, ಸ್ಯಾಂಟ್ರೋ ರವಿಗೆ ಸೌಲಭ್ಯಗಳನ್ನು ತೆರವುಗೊಳಿಸಬೇಕು ಹಾಗೂ ಆಡಳಿತದ ಹಿತದೃಷ್ಟಿಯಿಂದ ಈತನನ್ನು ಬೆಂಗಳೂರು ಜೈಲಿಗೆ ವರ್ಗಾಯಿಸಲು ಅನುಮತಿ ನೀಡಬೇಕು ಎಂದು ನ್ಯಾಯಾಧೀಶರನ್ನು ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

HOUSE FOR RENT / LEASE
Independent 2 BHK House for RENT / Lease at K.B.L Layout Bannur Road, Mysore
9945614686

ತಕ್ಷಣ ಬೇಕಾಗಿದ್ದಾರೆ
ಹೋಟೆಲ್, ಮೇಟಗಳ್ಳಿ ಮತ್ತು ಒಂಟಿಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು, ಸಂಬಳ: 17000+W/o (8hrs)
9880727819
9620667819

1) 20x30 ಸೈಟು, ಕೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ –23 ಲಕ್ಷ
2) 20x30 Ground, 1st Floor ಮನೆ ದಟ್ಟಗಳ್ಳಿ – 55 ಲಕ್ಷ
3) 20x30 ಡ್ಯೂಪ್ಲೆಕ್ಸ್ ಹೊಸ ಮನೆ 3 Bedroom, Italian Kitchen & Fully Furnished ದಟ್ಟಗಳ್ಳಿ –75 ಲಕ್ಷ, ಮೈಸೂರಿನ ಎಲ್ಲಾ ಬಡಾವಣೆಗಳಲ್ಲಿ ಸೈಟು ಮತ್ತು ಮನೆ ಮಾರಾಟ ಹಾಗೂ ಕೊಳ್ಳುವವರು ಸಂಪರ್ಕಿಸಿ.
9945042875

NEW BUNGALOW FOR RENT
Only Vegetarians in Sriramapura 2nd Stage, 2400 Sft., large basement parking+2 floors with balconies, 3 bedrooms, with attached bathrooms, semi furnished, spacious rooms.
Contact: 9902441998
Brokers Excuse

WANTED
Business Development Executive for Educational Institution in Mysore (M/F with 1 year exp in Marketing). English fluency and owning a two wheeler is must.
8277636287
9243078482

SITE FOR SALE
60X40 Feet East Facing at Ahad City Mysuru. 6 Km from Satellite bustand Mahadevapura Road Beautiful Layout Gated Community UGD Electricity Water Multiple Gardens. Best Price Rs.1800 Per Sqft
9901231117

KITCHEN INTERIORS
₹95,000/-
www.ssbuildmart.com
ISO 9001:2015 Certified Company Depot
SS Build Mart
Talk to our Design Team
9901291267 / 9845426862

HOUSE FOR SALE
30X40, West Face Site, North Face Door, Newly Constructed G+2, Dattagalli, Somanathanagar, Mysore
9900251194

ಹೋಟೆಲ್ ಮಾರಾಟಕ್ಕಿದೆ
ಸುಸಜ್ಜಿತವಾದ ಹೋಟೆಲ್ ಹಿನಕಲ್ ಫ್ಲೈಓವರ್ ಬಳಿ ರಿಂಗ್ ರಸ್ತೆಯಲ್ಲಿ ಮಾರಾಟಕ್ಕಿದೆ
Price : 3 Lakhs
9844040983

ಬೇಕಾಗಿದ್ದಾರೆ
Tele Calling ಕೆಲಸಕ್ಕೆ ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 8000 – 12000
ಸಂಪರ್ಕಿಸಿ:
8792140484

GSS Property Mall
VERIFIED PROPERTIES IN MYSORE
BUYING & SELLING PROPERTIES IN MYSURU
VISIT OUR WEBSITE: WWW.GSSPROPERTYMALL.COM
96868-25025

ARAS HOMES PVT LTD
Trusted Mark
• Civil Engineers • Builders

3 BHK DUPLEX House From 82 Lakhs with Interiors
• Concrete Road
• Underground Drainage
• Underground Electricity
• Attached to Highway
• Near Infosys, L&T
• Gated Community
• 9538003006 • 0821-4525966

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿಯೊಂದಿಗೆ ನರ್ಸಿಂಗ್ ಸೌಲಭ್ಯವಿದೆ. ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

ಶ್ರೀ ಗೌರಿಶಂಕರ ಟ್ರಾವೆಲ್ಸ್
28-8-2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾ ವೈದ್ಯನಾಥ್.
24-9-2023 (13 ದಿನ): ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ದೆಹಲಿ, ಆಗ್ರಾ.
28-10-2023 (4 ದಿನ): ದೆಹಲಿ, ಮಥುರಾ, ಬೃಂದಾವನ, ಆಗ್ರಾ, ಜೈಪುರ.
ವಿಮಾನ / ವಿ.ಬಸ್ / ಊಟ / ರೂ.
Mob: 9620002114

SITE FOR SALE
3 KM From Mysore Place, City Busstand 40x73 East Facing 40 Feet Road, Gayathripuram, Mysore
9743231122

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ವರ್ಷದೊಳಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 + ESI+PF. ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲೆಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ-06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502, 9108100117

GSS 25 YEARS
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP
• FULLY DEVELOPED • UNDER DEVELOPED • PLAN SANCTIONED
96868-25025

AFFIDAVIT
I, Sreenivasa B.S., residing at S.Koppalu, Ravanduru Post, Periyapatna Taluk, Ravandur, Mysuru-571108, declare that my correct name is Sreenivasa B.S. (Aadhaar Card No. 2503 4415 7121 and Pan Card CLHPS3743L). But at the time of issuing my Kotak Mahindra Bank Account No. 218010127794 my name was mentioned as B.S. Srinivasa. I declare this in front of Notary that Sreenivasa B.S. and B.S. Srinivasa both names belong to my name and same one person.
Sd/- Sreenivasa B.S.

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services (Opp. Kuvempu School), S.S. Puram
93421-25252

ಬೇಕಾಗಿದ್ದಾರೆ
ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು ಮತ್ತು ಕ್ಯಾಷಿಯರ್‌ಗಳು, ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತವಾಗಿ ನೀಡಲಾಗುವುದು. ಶ್ರೀ ರಾಯಲ್ ವಾರಿಯರ್ ಬೇಕರಿ ಅಂಡ್ ಫುಡ್ ಸ್ವೀಟ್ಸ್, 2ನೇ ಹಂತ, ಎಂ.ಬ್ಲಾಕ್, ಬಸ್ ಡಿಪೋ ಹತ್ತಿರ.
8310331609
9019876412

ಬೇಕಾಗಿದ್ದಾರೆ
ಮೈಸೂರಿನ ಕೂರ್ಗಳ್ಳಿ ಕೈಗಾರಿಕೆ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವಯೋಮಿತಿಯು 50 ವರ್ಷದೊಳಗೆ ಹಾಗೂ ವಿದ್ಯಾಭ್ಯಾಸ 10ನೇ ತರಗತಿ ಉತ್ತಮ ವೇತನ ಹಾಗೂ ಪಿಎಫ್ ಹಾಗೂ ಈಎಸ್ಐ ಇರುತ್ತದೆ.
6363765969
8792815411

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಅಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ:–15,200/- to 86,000/-
9740733021, 9535028750

ಮಹಿಳೆಯರಿಗಾಗಿ ಪೇಯಿಂಗ್ ಗೆಸ್ಟ್ ಸೌಲಭ್ಯ
ವಿದ್ಯಾರ್ಥಿನಿಯರಿಗೆ ಮತ್ತು ಉದ್ಯೋಗಸ್ಥ ಮಹಿಳೆಯರಿಗಾಗಿ ಮೈಸೂರಿನ ವಿದ್ಯಾರಣ್ಯಪುರಂ ನಲ್ಲಿ ವೈಫೈ, ಸೆಕ್ಯೂರಿಟಿ ಹಾಗು ಶುಚಿಯಾದ ಊಟದೊಂದಿಗೆ ಕೈಗೆಟುಕುವ ಬೆಲೆಯಲ್ಲಿ ಪಿ.ಜಿ. ಸೌಲಭ್ಯ ದೊರೆಯುತ್ತದೆ.
ಸಂಪರ್ಕಿಸಿ: 95915 47239

---

3 ಬೆಡ್ರೂಮ್ ಹೊಸ ಮನೆ ಮಾರಾಟಕ್ಕಿದೆ
20x30 ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ,
Price - 79 Lakhs
ಮಾಲೀಕರು ಸಂಪರ್ಕಿಸಿ:
6361295132

HOUSE FOR RENT
2 BHK, 1350 Sqft, Semi Furnished, 24x7 Cauvery Water, Lift, 24x7 Security Available
Address: Flat No. 301, 3rd Floor, 'B' Block, Maitry Apartments, 1st main, Saraswatipuram, Mysore-570009
9113651831
Brokers Execuse

Sump & Tank Solar & Cleaning Water Level Controller Service
Mob: 8880558064

Sudarshan Saur
SOLAR WATER HEATER
ATTRACTIVE OFFER

ಸೇಲ್ಸ್ ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

WANTED
ಹೆಲ್ಪರ್ಸ್ ಹುಡುಗರು
ಬಿಐಐ ಎಲೆಕ್ಟ್ರಿಕಲ್ಸ್ ಅದವರಿಗೆ ಆದ್ಯತೆ ದ್ವಿಚಕ್ರ ವಾಹನ ಹೊಂದಿರಬೇಕು ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಬೇಕಾಗಿದ್ದಾರೆ / Jobs
Fresher / Experience ಇರುವ ಮದ್ದೂರು, ಮಂಡ್ಯ, ಚನ್ನಪಟ್ಟಣ, ರಾಮನಗರಕ್ಕೆ Relationship Officer & Manager ಹುದ್ದೆಗೆ PUC/Degree ಆಗಿರುವವರು
ಸಂಪರ್ಕಿಸಿ: ಆರ್.ಮಹೇಶ್‌ಕುಮಾರ್
8306993771
9686062014
ಆವಾಸ್ ಫೈನಾನ್ಶಿಯರ್ಸ್ ಲಿ., ಮದ್ದೂರು

ಮನೆ ಭೋಗ್ಯಕ್ಕಿದೆ
Ground Floor 1 BHK, 30x40 ದಟ್ಟಗಳ್ಳಿ ಅಯ್ಯಗ್ಯನಹುಂಡಿ
9845124678
8073951557

Document Lost
I, M.S. Rashmi, W/o M. Srikanth, #919/2A-77, 2nd Main, 8th Cross, K.B. Extension, Davanagere have lost original (1) House tax receipt, (2) House Completion Report (CR) from MUDA property No. #1641, R.T. Nagara, Mysuru. Finders please contact:
Mob: 9448965854

ಕಳೆದಿದೆ
ಶ್ರೀಯುತ ಆನಂದ ವೇಲು ಎಂ., S/o K. ಮುರುಗೇಶ, ಇವರ ಸ್ವತ್ತು ನಂ. 158, EWS, ಗಂಗೋತ್ರಿ ಲೇಔಟ್, HUDCO, ಮೈಸೂರು, ಇದಕ್ಕೆ ಸಂಬಂಧಿಸಿದ ಮೂಲ ಮಂಜೂರಾತಿ ಪತ್ರ ಮತ್ತು ಖಾತೆ ಕಂದಾಯ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಈ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸುವುದು.
Mob: 9972576841

DOCUMENT LOST
I, Tajunnisa, No. 174, Nazarbad, Gayathripuram, Mysore-570 019, lost my house document & allotment letter No. 398, Nazarbad, Gayathripuram. Lost place: Udayagiri. Finders please contact
Mob: 9113569867

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್ ಕೆ.ಎಸ್. ಪಟ್ಟಾರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಖ್ಯಾತಿಯ ಕೇರಳದ ಸುಪ್ರಸಿದ್ಧ ಕೊಳ್ಳೇಗಾಲದ ಜ್ಯೋತಿಷ್ಯರು ಅಘೋರ ಕಬ್ಬಿಣದಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ, ಸಮಸ್ಯೆ, ಶತ್ರುದೋಷ, ವ್ಯಾಪಾರ, ಆಸ್ತಿ, ಉದ್ಯೋಗ ನಿಮ್ಮ ಸಮಸ್ಯೆಗಳಿಗೆ ಸ್ಪಂದನೆಯೇ ಪರಿಹಾರ ಶತಸಿದ್ಧ.
ವಿಳಾಸ: ಶ್ರೀ ಆಂಜನೇಯ ಜ್ಯೋತಿಷ್ಯ ಮಂದಿರ, ಭಾರತಿನಗರ, ಬೃಂದಾವನ ಬಡಾವಣೆ, ಮೈಸೂರು–570006

MATCH MAKERS, BRIDE / GROOMS
ವಧು/ವರರ ಮದುವೆ ಮಾಹಿತಿ ಸಂಸ್ಥೆ
ಎಲ್ಲಾ ಜಾತಿಯ Govt Job, Private/ಸ್ವಂತ Factory, / ಪ್ರಗತಿ ಪರರು / ವಕೀಲ್, ಇಂಜಿನಿಯರ್ ಎಲ್ಲಾ ರೀತಿಯ ವಧುವರರು ಮತ್ತು ವೈದ್ಯರುಗಳು, ವಿಧುರರು, ವಿಧವೆಯರು, ಮರುಮದುವೆ ... "ಜಾತ್ಯಾತೀತ" ... "ಬಡವರ ವಧುವರರಿಗೆ ಉಚಿತ ಮದುವೆ / ಉದ್ಯೋಗ/ವಸತಿ/ ಉಚಿತ
7975728012

ಉದ್ಯೋಗಾವಕಾಶ
ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಅಡುಗೆಯವರು (ಮಹಿಳೆಯರು) ರೋಗಿಗಳು ಹಾಗೂ ವೃದ್ಧರನ್ನ ಆರೈಕೆ ಮಾಡಲು ಯುವಕ/ಯುವತಿಯರು ಹಾಗೂ ಡ್ರೈವರ್‌ಗಳು ಬೇಕಾಗಿದ್ದಾರೆ.
6366141518
8050699742

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ AWBM ಕಂಪನಿಯಲ್ಲಿ ಖಾಲಿ ಇರುವ 224 ಪರ್ಮನೆಂಟ್ ಹುದ್ದೆಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ. (ನೇರ ಸಂದರ್ಶನದ ಮೂಲಕ ನೇಮಕಾತಿ) ವಿದ್ಯಾರ್ಹತೆ: SSLC, PUC, ITI, Diploma, Any Degree Etc. ವಯೋಮಿತಿ : 18 to 34 Years, ತಿಂಗಳಿಗೆ : 24000–30500 (ಉಚಿತ ಊಟ-ವಸತಿ ಸೌಲಭ್ಯ) ಕರೆ ಮಾಡಿ:
9900163228, 7349699460

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಆರಾಧಕರ ವಂಶದವರು ಸ್ತ್ರೀ ಪುರುಷ ಪ್ರೇಮ, ದಾಂಪತ್ಯ, ಸಂತಾನ, ಶತ್ರು, ದೋಷ, ಸಾಲ ಬಾಧೆ, ವಿದ್ಯಾ ... ಮಾಂತ್ರಿಕ ಶಕ್ತಿಯಿಂದ ... ಪರಿಹಾರ ...
ವಿಳಾಸ: ... ಸರ್ಕಲ್ ಬಸ್ ಸ್ಟಾಪ್, ಮೈಸೂರು–1

100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

COMMERCIAL
(131x47) 80 Feet Road @ BRAHMIN'S LAYOUT (Total 3000 sq.ft.) MUDA APPROVED (Near Srirampura Ring Road), Mysore. Rs. 60 Lakhs.
95388-39926

WANTED
SERVICE ENGINEER
B.E /Diploma / ITI / Mechanical
Kent RO Water purifier Authorised Service Center/Home Appliances
Telecaller / Office Work -Female
9900237315
9845963421

SHOP FOR RENT
1st Floor - 10 sq. No. 1555, Vijayanagar 2nd Stage, HT Double Road, Mysore (above Honda Point Shop). Contact:
9538280996

100% Job
ಮೈಸೂರಿನ ಪ್ರಮುಖ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 15,000 ರಿಂದ 39,000/- (ESI+PF+OT) ಸೇರಿ. ಕರೆ ಮಾಡಿ ಆಧ್ಯತ
9008603466, 9035143190

ಟೆಲಿಕಾಲರ್ ಬೇಕಾಗಿದ್ದಾರೆ
ಹುಡುಗಿಯರು ಮತ್ತು ಮಹಿಳೆಯರು ಟೆಲಿಕಾಲಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಕುವೆಂಪುನಗರ ಡಿಪೋ ಹತ್ತಿರ, ಮೈಸೂರು
8861732326
8277512141

HOUSE FOR RENT
Duplex, 6 bedroom (attached bathroom), hall, kitchen, verandah, car parking at No. 135, Vijayanagar 3rd Stage, 'C' Block. 35 Sqs. Mysore Contact:
9538280996

ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ ಹುಡುಗರು – 4
(ಹೋಟೆಲ್ ಉದ್ಯಮದಲ್ಲಿ ಅನುಭವವಿರಬೇಕು). ಸಂಪರ್ಕಿಸಿ:
9620274630, 9886577795

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8000 ರಿಂದ 10,000 ವರೆಗೆ, ಸಮಯ ಬೆಳಗ್ಗೆ 9.30 ರಿಂದ ರಾತ್ರಿ 9 ರವರೆಗೆ, ಸ್ಥಳ: ಅಗ್ರಹಾರ, ಮೈಸೂರು. ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:
9986311444, 9986322444

WANTED
MEN for work at Pharma Office. Age limit: 18 to 35 years. Qualification: Basic & Computer. Salary: Rs. 7000. Interview date: 6th Aug. 2023. Address: SRI VINAYAKA ENTERPRISES, #K-21, 1st Floor, Raghavendra Swamy Temple, Opp. Road, K.R. Mohalla, Mysore-04. Contact:
8217380747

Commercial Space for Rent
In prime area, 1600 sq.feet at Kuvempunagar, Nrupathunga Road, ideal for all kinds of showroom, medical store, clinic, provision store, hotel etc.,
9448047419, 8861377771

ಹೋಂ ನರ್ಸ್
ವೃದ್ಧರನ್ನು ಮತ್ತು ಹಾಸಿಗೆ ಹಿಡಿದ ರೋಗಿಗಳನ್ನು ಅವರ ಮನೆಯಲ್ಲಿಯೇ ಉಳಿದುಕೊಂಡು ಆರೈಕೆ ಮಾಡುವ ಅನುಭವವಿರುವ ಹೋಂ ನರ್ಸ್ ಲಭ್ಯವಿದ್ದಾರೆ.
8861042384

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಮುಖ ಕಂಪನಿ ಆಫೀಸ್ ಮತ್ತು ಶೋರೂಂಗಳಿಗೆ 7th, 10th, PUC, ITI, Diploma, Any Degree Pass /Fail ಆದ ಯುವಕ ಯುವತಿಯರು: Telephone Athender, Receptionist, Billing, Cashier, Backend Department, Quality, Production Helper Labelling Maintence ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,200 ರಿಂದ 43,200/- (ESI+PF+OT) ಸೇರಿ. ಕರೆ ಮಾಡಿ ಆಧ್ಯತ
9036548905, 6364103418

ನಿವೃತ್ತ ನೌಕರರಿಗೆ ಉದ್ಯೋಗ ಅವಕಾಶದ ಸಮಿನಾರ್
ವಿಶ್ವಾಸಾರ್ಹ ಬ್ಯಾಂಕ್ ಸಹಾಯ ಸಂಸ್ಥೆಯಲ್ಲಿ ಉದ್ಯೋಗ ಅವಕಾಶ ಸೆಮಿನಾರ್ ... with Fixed Salary +PF+ESI+Other Incentives with Flexible Time. ವಿದ್ಯಾರ್ಹತೆ SSLC & Above, Any Degree, Age : 30 Year to 66 Year. ಸೆಮಿನಾರ್ ನಡೆಯುವ ಸ್ಥಳ: ... ಮೈಸೂರು. ಸಮಯ 11 ಗಂಟೆ, ದಿನಾಂಕ 05-08-2023 ...
9449068132, 7022034200

WANTED
Receptionist / Front Desk 2 nos. (Girls), Nursing / OT Technician 2 Nos., GNM (Preference OT Experience) Attender 1 no.
For Reputed Hospital
9482142207
ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು ವಾರ್ಡ್ ಬಾಯ್ಸ್ ಬೇಕಾಗಿದ್ದಾರೆ.
8884286123, 8884286321

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಹಾಯ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಆಧಾರಿತ ಸೆಮಿನಾರ್ ... Benefits : Fixed Salary + PF + ESI + ಇತರೆ ಭತ್ಯೆಗಳು ... 1) ಫೋಟೋ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಸ್ಥಳ, ದಿನಾಂಕ ...
7795039992

NISARGA ENTERPRISES LOAN OFFICE
MOB: 8296400433
9880436288
New Start of Business Loan Industrial Loan, Machinery Loan, Garments Loan, Business Loan, Home Loan, Home Mortgage Loan, Site Mortgage Loan, Personal Loan 12,000/- Salary above

HOUSE FOR RENT
KRS Main Road Gokulam, Mysuru
9900237315

ಸಿದ್ಧ ಸಮಾಧಿ ಯೋಗ ಶಿಬಿರ
(ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ ಮತ್ತು ವ್ಯಕ್ತಿತ್ವ ವಿಕಾಸ)
ಮಾನಸಿಕ ಒತ್ತಡಗಳ ನಿವಾರಣೆಗಾಗಿ ಹಾಗೂ ಉತ್ತಮ ಆರೋಗ್ಯಕ್ಕೆ ಪರಿಚಯ ಹಾಗೂ ತರಗತಿಗಳು ಪ್ರಾರಂಭ: ದಿನಾಂಕ: 6–08–23 ಭಾನುವಾರದಿಂದ ಸಂಜೆ 6.30ಕ್ಕೆ ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಅಂಬೇಡ್ಕರ್ ರಸ್ತೆ, ಕುವೆಂಪುನಗರ, ಮೈಸೂರು
9448458050
8618762110

FOR SALE
Buy & Sell site, house, land
1) 20x30,Duplex House Ramakrishnanagara
2) 14/100 In Ramavilas Road Near
3) 30x40 Duplex and Ground first House Srirampura
4) 12/36 G+2 House Kuvempu Nagar
5) 30x40, 16 lakhs H D Kote Road near Defence Apartment
Prakruthi Properties
9538690359, 9035990359

ಗೋಡೌನ್ ಬಾಡಿಗೆಗೆ
50x30 = 1500 sqft (ನೆಲ ಮಹಡಿ) ಮತ್ತು 3BHK ಮನೆ ಭೋಗ್ಯ (ಮೊದಲನೇ ಮಹಡಿ)
1176/77, 2ನೇ ಕ್ರಾಸ್, ಪಟೇಲ್ ಸ್ಟ್ರೀಟ್, ಮಂಡಿಮೊಹಲ್ಲಾ, ಮೈಸೂರು ಹೆಗ್ಗುರುತು : ಶ್ರೀ ನಾಗರಾಜ ಥಿಯೇಟರ್ (ಶ್ರೀ ಟಾಕೀಸ್)
9036080350
9900112050

ಪರ್ಮನೆಂಟ್ ಜಾಬ್
ಸರ್ಕಾರದಿಂದ ಮಾನ್ಯತೆ ಪಡೆದಿರುವ ಚಂದಗೀರ ಹೆರ್ಬ್ ಆಯಿಲ್ ಕಂಪನಿಯಲ್ಲಿ ಕೆಲಸ ಮಾಡಲು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Any Degree ಸಂಬಳ ESI & PF ಜೊತೆಗೆ ತಿಂಗಳಿಗೆ 15,000 ವಯೋಮಿತಿ 18 ರಿಂದ 40 ವರ್ಷ
8105942917
7892180248

ಭೋಗ್ಯಕ್ಕೆ ಮನೆ ಇದೆ
ಗೋಕುಲಂ, 1ನೇ ಹಂತ, 5ನೇ ಕ್ರಾಸ್‌ನಲ್ಲಿರುವ ನಂ.45, ಪೂರ್ವ ದಿಕ್ಕಿನ ಮನೆ ಭೋಗ್ಯಕ್ಕೆ ಖಾಲಿ ಇದೆ.
6364678424

ಟೀಮ್ ಲೀಡರ್ ಮತ್ತು ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ, ಇಂಗ್ಲಿಷ್, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000 ರಿಂದ 11000 ರವರೆಗೆ
8150005111

ಬೇಕಾಗಿದ್ದಾರೆ
ಅಡುಗೆ ಮತ್ತು ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸ್ಥಳ: ಬನ್ನಿಮಂಟಪ ಮೈಸೂರು
9036951272

ಜ್ಞಾನಜ್ಯೋತಿ ವಿದ್ಯಾ ಸಂಸ್ಥೆ (ರಿ.)
ಕುರುವಿನಹಳ್ಳಿ
ಶಿಕ್ಷಕಿಯರು ಬೇಕಾಗಿದ್ದಾರೆ
English - 4 * Spoken English -3
Science -4 * Maths -4
B.Sc., B.Ed. - 3 * Hindi-2 * NTC-3
7019219346
9686558859, 9448478779

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ. BENAKA-ITI, College, Near Cauvery Circle, Dr. Rajkumar Road, Raghvendra Nagar, Mysore
9342123467
9141756695

IMMEDIATE OPENINGS
Wanted for Transport Co Male & Female for Marketing & Office Staff Drivers & Loadmen
8197011377

ಸೈಟುಗಳು ಮಾರಾಟಕ್ಕಿವೆ
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರಸ್ತೆ ಮತ್ತು ಹೊಸ ಮನೆ ಮಾರಾಟಕ್ಕಿದೆ, ಮೈಸೂರು
8050345574

ಕಳೆದಿದೆ
ಟಿ.ಪಿ.ಮಾದಪ್ಪ S/o ಲೇಟ್ ಪೀರಪ್ಪ No.29 ನಂಜುಂಡಸ್ವಾಮಿ, ಲೇಡೀಸ್ ದೇವಿರಮ್ಮನಹಳ್ಳಿ ಬಡಾವಣೆ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆಯ ದೇವಿರಮ್ಮನಹಳ್ಳಿ ಗ್ರಾಮದ ನಿವೇಶನದ ಹಕ್ಕು ಕ್ರಯಪತ್ರ ದಸ್ತಾವೇಜು ನಂ. NJG-1-07231-2016-17 ಒ.ಡಿ. ನಂ NJGD178 ದಿನಾಂಕ: 06–02–2017 ಕಳೆದು ಹೋಗಿರುತ್ತದೆ ಸಿಕ್ಕಿದಲ್ಲಿ ಸಂಪರ್ಕಿಸಿ:
9900879534

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಸ್ವತಃ ಪರಿಶೀಲಿಸಿ ಮುಂದುವರೆಯಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿಯಾಗಿರುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ನಾಲೆ, ಕೆರೆಗಳ ತಡೆಗೋಡೆ ನಿರ್ಮಾಣ, ನಿರ್ವಹಣೆಗೆ ಸಮಿತಿ ರಚನೆ

ಮಂಡ್ಯ, ಆ.2– ಮಂಡ್ಯ ತಾಲೂಕು ತಿಬ್ಬನಹಳ್ಳಿ ಬಳಿ ವಿಶ್ವೇಶ್ವರಯ್ಯ ನಾಲೆಗೆ ಇತ್ತೀಚೆಗೆ ಕಾರು ಮಗುಚಿ ಬಿದ್ದು, ಶಿವಳ್ಳಿ ಗ್ರಾಮದ ವ್ಯಕ್ತಿ ಮೃತಪಟ್ಟಿದ್ದರು. ಇದಾದ ಎರಡು ದಿನಗಳಲ್ಲಿ ಮತ್ತೆ ನಾಲ್ವರು ಮಹಿಳೆಯರು, ಶ್ರೀರಂಗಪಟ್ಟಣ ತಾಲೂಕು ಗಾಮನಹಳ್ಳಿ ಗ್ರಾಮದ ಹೊರಹೊಲಯದ ತುರುಗನೂರು ಗ್ರಾಂಟ್‌ನ ವಿಶ್ವೇಶ್ವರಯ್ಯ, ಉಪ ನಾಲೆಗೆ ಕಾರು ಉರುಳಿ ಬಿದ್ದು, ಶನಿವಾರ ರಾತ್ರಿ ನಾಲ್ವರು ಮೃತಪಟ್ಟಿರುತ್ತಾರೆ.

ಪದೇ ಪದೆ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ತಡೆಗೋಡೆ ಇಲ್ಲದೇ ಇರುವ ನಾಲೆಗಳು / ಕೆರೆಗಳು ಅಪಾಯಕರ ದುಸ್ಥಿತಿಗೆ ಕಾರಣವಾಗುತ್ತಿರುತ್ತವೆ. ಆದಕಾರಣ, ಮಂಡ್ಯ ಜಿಲ್ಲೆಯ ವಿವಿಧ ಇಲಾಖೆಗಳು ಒಟ್ಟಾಗಿ ಸೇರಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನಾಲೆಗಳು ಹಾಗೂ ಕೆರೆಗಳ ಬದಿಗಳು ತಂಡ / ಕ್ರಾಶ್ ಬಾರಿಯರ್‌ಗಳನ್ನು ನಿರ್ಮಿಸುವ / ನಿರ್ವಹಣೆ ಮಾಡುವ ಸಮಿತಿ ರಚಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಮಂಡ್ಯ ತಾಲೂಕಿಗೆ ಸಂಬಂಧಿಸಿದಂತೆ ಮಂಡ್ಯ ಉಪ-ವಿಭಾಗದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಳವಳ್ಳಿ ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.



ಮದ್ದೂರು ತಾಲೂಕಿಗೆ ಸಂಬಂಧಿಸಿದಂತೆ ಮದ್ದೂರು ಉಪ–ವಿಭಾಗದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಳವಳ್ಳಿ ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಮಳವಳ್ಳಿ ತಾಲೂಕಿಗೆ ಸಂಬಂಧಿಸಿದಂತೆ ಮಳವಳ್ಳಿ ಉಪ-ವಿಭಾಗದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಳವಳ್ಳಿ ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯದರ್ಶಿಗಳಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಳವಳ್ಳಿ ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ನಾಗಮಂಗಲ ತಾಲೂಕಿಗೆ ಸಂಬಂಧಿಸಿದಂತೆ ನಾಗಮಂಗಲ ಉಪ–ವಿಭಾಗದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಬೆಳ್ಳೂರು ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಕೆ.ಆರ್.ಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಕೆ.ಆರ್.ಪೇಟೆ ಉಪ–ವಿಭಾಗದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಬೆಳ್ಳೂರು ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಶ್ರೀರಂಗಪಟ್ಟಣ ತಾಲೂಕಿಗೆ ಸಂಬಂಧಿಸಿದಂತೆ ಶ್ರೀರಂಗಪಟ್ಟಣ ಉಪ–ವಿಭಾಗದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೈಸೂರು ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಪಾಂಡವಪುರ ತಾಲೂಕಿಗೆ ಸಂಬಂಧಿಸಿದಂತೆ ಪಾಂಡವಪುರ ಉಪ–ವಿಭಾಗದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾರ್ಯದರ್ಶಿಗಳಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೈಸೂರು ರಾಷ್ಟ್ರೀಯ ಹೆದ್ದಾರಿ, ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರುಗಳು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಮಂಡ್ಯ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಅಧೀನದಲ್ಲಿರುವ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನಾಲೆಗಳು ಹಾಗೂ ಕೆರೆಗಳ ಬದಿಗಳಲ್ಲಿ ಈಗಾಗಲೇ ನಿರ್ಮಿಸಿರುವ ತಡೆಗೋಡೆ/ಕ್ರಾಶ್ ಬಾರಿಯರ್‌ಗಳ ಹಾಗೂ ಪ್ರಸ್ತುತ ನಿರ್ಮಿಸುವ/ ನಿರ್ವಹಣೆ ಮಾಡಬೇಕಾಗಿರುವ ವಿವರಗಳನ್ನು ಹಾಗೂ ಅತಿ ಅವಶ್ಯವಾಗಿ ಕ್ರಿಯಾ ಯೋಜನೆ ವಿವರಗಳೊಂದಿಗೆ ಸದರಿ ಸಮಿತಿಯ ಮುಂದೆ ಮಂಡಿಸಿ ನಾಲೆಗಳು/ ಕೆರೆಗಳು ಅಪಾಯಕಾರಿ ದುಸ್ಥಿತಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ಕೇ ದಿನಕ್ಕೆ ಕೈ ಕೊಟ್ಟ ಎಕ್ಸ್‌ಪ್ರೆಸ್ ವೇ ಸ್ಪೀಡ್ ಡಿಟೆಕ್ಟರ್

ಮಂಡ್ಯ,ಆ.2– ಮಂಡ್ಯದ ಉಮ್ಮಡಹಳ್ಳಿ ಗೇಟ್ ಬಳಿ ಎಕ್ಸ್‌ಪ್ರೆಸ್‌ವೇನಲ್ಲಿ ಅಳವಡಿಸಿರುವ ಸ್ಪೀಡ್ ಡಿಟೆಕ್ಟರ್ ಕೇವಲ ನಾಲ್ಕೇ ದಿನಕ್ಕೆ ಕೈಕೊಟ್ಟಿದೆ.

ವಾಹನಗಳ ವೇಗ ಮಿತಿ ಕಡಿವಾಣಕ್ಕೆ ಸ್ಪೀಡ್ ಡಿಟೆಕ್ಟರ್ ಅನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅಳವಡಿಸಿದ್ದು, ವಾಹನಗಳ ವೇಗವನ್ನು ಸೆರೆಹಿಡಿಯುತ್ತಿದ್ದ ಕ್ಯಾಮರಾ ಹಾಗೂ ಸ್ಪೀಡ್ ಡಿಟೆಕ್ಟರ್‌ಗೆ ಜುಲೈ 29ರಂದು ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದ್ದರು. ಆದರೆ ಸೋಲಾರ್‌ನಿಂದ ಕಾರ್ಯನಿರ್ವಹಿಸುವ ಸ್ಪೀಡ್ ಡಿಟೆಕ್ಟರ್ ಕೆಟ್ಟುನಿಂತಿದೆ.

ದಂಡ ಪ್ರಯೋಗ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಆಗಸ್ಟ್ 1ರಿಂದ ಜಾರಿಗೆ ಬಂದಿರುವ ದ್ವಿಚಕ್ರ, ತ್ರಿಚಕ್ರ ವಾಹನ ಸಂಚಾರ ನಿಷೇಧ ನಿಯಮವನ್ನು ಪಾಲಿಸದಿದ್ದವರಿಗೆ ಬುಧವಾರ ಪೊಲೀಸರು ದಂಡ ಪ್ರಯೋಗ ಮಾಡಿದರು.

ಆಗಸ್ಟ್ 1ರಿಂದಲೇ ನಿಯಮ ಜಾರಿಗೆ ಬಂದಿದ್ದರೂ ಕೆಲವರಿಗೆ ಗೊತ್ತಿಲ್ಲದ ಕಾರಣ ಎಕ್ಸಿಟ್ ಹಾಗೂ ಎಂಟ್ರಿ ಪಾಯಿಂಟ್‌ನಲ್ಲಿ ಬಂದವರಿಗೆ ಬುದ್ಧಿವಾದ ಹೇಳಿ ಸರ್ವೀಸ್ ರಸ್ತೆಗೆ ಕಳುಹಿಸಲಾಗುತ್ತಿತ್ತು. ಆದರೆ ಎರಡನೇ ದಿನವಾದ ಇಂದು ನಿಯಮವನ್ನು ಪಾಲಿಸದ ವಾಹನ ಸವಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಂಡ ಮಂಡ್ಯ ಪೊಲೀಸರು, ದಂಡ ವಿಧಿಸುತ್ತಿದ್ದ ದೃಶ್ಯ ಕಂಡು ಬಂತು.

ನಿನ್ನೆ ಹೊಸ ರೂಲ್ಸ್ ಬಗ್ಗೆ ಜಾಗೃತಿ ಮೂಡಿಸಿದ್ದರೂ ಇಂದು ಸಹ ನಿರ್ಬಂಧದ ನಡುವೆಯೂ ನಿಯಮ ಪಾಲಿಸದವರಿಗೆ 500 ರೂಪಾಯಿ ದಂಡ ವಿಧಿಸಿದರು. ಇದನ್ನು ಗಮನಿಸಿದ ಕೆಲ ವಾಹನ ಸವಾರರು



ಸರ್ವೀಸ್ ರಸ್ತೆಯತ್ತ ಮುಖ ಮಾಡಿದರೆ, ಪೊಲೀಸರ ನಿಯಮ ಲೆಕ್ಕಿಸದೇ ರಸ್ತೆಗೆ ಬಂದು ಕೆಲವರು ದಂಡ ಕಟ್ಟಿದರು.

ಪೊಲೀಸರಿಗೆ ವಾಹನ ಸವಾರನ ಕಿರಿಕಿರಿ: ದಂಡ ವಸೂಲಿ ಮಾಡುತ್ತಿದ್ದ ವೇಳೆ ಉಮ್ಮಡಹಳ್ಳಿ ಗೇಟ್ ಬಳಿ ಬೈಕ್ ಸವಾರನೊಬ್ಬ ಹೆಲ್ಮೆಟ್ ಧರಿಸದೇ ಎಕ್ಸ್‌ಪ್ರೆಸ್‌ವೇನಲ್ಲಿ ಬಂದ ಪರಿಣಾಮ ಪೊಲೀಸರು ಅಡ್ಡಗಟ್ಟಿ ದಂಡ ಕಟ್ಟುವಂತೆ ಕೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬೈಕ್ ಸವಾರ ಇಲ್ಲಿ ಬರಬಾರದಂತ ನನಗೆ ಗೊತ್ತಿಲ್ಲ, ನಾನು ದಂಡ ಕಟ್ಟಲ್ಲ. ನೀವು ಹೈವೇ ಪ್ರವೇಶಿಸುವಾಗ ತಡೆದಿಲ್ಲ. ಈಗ ದಂಡ ಕಟ್ಟಿ ಅಂತೀರಾ, ನಾನು ಕಟ್ಟಲ್ಲ ಎಂದು ಕಿರಿಕಿರಿ ತೆಗೆದಿದ್ದಾನೆ. ಈತ ಪೊಲೀಸರಿಗೆ ಅವಾಜ್ ಹಾಕಿದಾಗ, ತಿರುಗಿಬಿದ್ದ ಪೊಲೀಸರು ನೀವು ಹೈವೇ ಪ್ರವೇಶಿಸುವ ಸ್ಥಳದಲ್ಲಿ ಬೋರ್ಡ್ ಹಾಕಿದ್ದೇವೆ ನೋಡಿದ್ರಾ? ನಿನ್ನೆ ಮೊನ್ನೆಯಿಂದ ಟಿವಿಯಲ್ಲಿ ಬರುತ್ತಿದೆ ನೋಡಿಲ್ವಾ ಎಂದು ಪ್ರಶ್ನಿಸಿದರು. ನಾನು ಈ ಹೊಸ ರೂಲ್ಸ್ ಎಲ್ಲೂ ನೋಡಿಲ್ಲ ನಾನು ದಂಡ ಕಟ್ಟಲ್ಲ ಎಂದು ಬೈಕ್ ಸವಾರ ಮೊಂಡುವಾದ ಮಾಡಿದ್ದಾನೆ.

ಆದರೆ ಬಿಡದ ಪೊಲೀಸರು ಹೊಸ ರೂಲ್ಸ್ ಗೊತ್ತಿಲ್ಲ ಅಂತೀಯಾ ಹೆಲ್ಮೆಟ್ ಯಾಕೆ ಹಾಕಿಲ್ಲ. ನಿನಗೆ ಹೆಲ್ಮೆಟ್ ಹಾಕೋ ಹಳೆ ರೂಲ್ಸ್ ಗೊತ್ತಿಲ್ವಾ ಎಂದು ಪ್ರಶ್ನಿಸಿದರು. ಪೊಲೀಸರ ರಿವರ್ಸ್ ಪ್ರಶ್ನೆಗೆ ಕಕ್ಕಾಬಿಕ್ಕಿಯಾದ ಬೈಕ್ ಸವಾರ ಮಂಕಾಗಿ ದಂಡ ಕಟ್ಟಿ ಅಲ್ಲಿಂದ ತೆರಳಿದ.

ರೈತನ ಮೇಲೆ ಚಿರತೆ ದಾಳಿ

ಹಲಗೂರು, ಆ.2– ಚಿರತೆ ದಾಳಿಯಿಂದ ರೈತ ಗಂಭೀರವಾಗಿ ಗಾಯಗೊಂಡ ಘಟನೆ ಹಲಗೂರು ಸಮೀಪದ ಬಸಾಪುರ ಗ್ರಾಮದಲ್ಲಿ ತಡರಾತ್ರಿ ಸಂಭವಿಸಿದೆ.

ಘಟನೆಯಲ್ಲಿ ವಳಗೆರೆದೊಡ್ಡಿ ಗ್ರಾಮದ ನಾಗೇಂದ್ರ ಎಂಬುವವರು ಗಾಯಗೊಂಡಿದ್ದು, ಬಸಾಪುರ ಬಳಿಯ ಜಮೀನಿನಲ್ಲಿ ರಾತ್ರಿ 10 ಗಂಟೆಯ ಆಸುಪಾಸಿನಲ್ಲಿ ಬೆಳೆಗೆ ನೀರು ಹಾಯಿಸಲು ಎಲೆಕ್ಟ್ರಿಕ್ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಚಿರತೆ ಇವರ ಮೇಲೆ ದಾಳಿ ಮಾಡಿದೆ.

ನಾಗೇಂದ್ರಗೆ ಹಣೆ ಹಾಗೂ ತಲೆಯ ಭಾಗದಲ್ಲಿ ಚಿರತೆ ತರಚಿರುವ ಗಾಯವಾಗಿದ್ದು, ಬೈಕ್‌ನಿಂದ ಬಿದ್ದ ಪರಿಣಾಮ ಬಲಗಾಲು ಮತ್ತು ಬಲಗೈಗೆ ಗಂಭೀರ ಪ್ರಮಾಣದ ಗಾಯವಾಗಿದೆ. ಗಾಯಾಳು ನಾಗೇಂದ್ರ ಮಾತನಾಡಿ, ಈ ವ್ಯಾಪ್ತಿಯಲ್ಲಿ ಹಲವು ದಿನಗಳಿಂದಲೂ ಚಿರತೆ ದಾಳಿ ಮಾಡುತ್ತಿದೆ. ನಮ್ಮ ಗ್ರಾಮದ ಬೋಮ್ಮೇಗೌಡರ ಜಮೀನಿನಲ್ಲಿ ನಿರಂತರವಾಗಿ ಚಿರತೆ ಬರುತ್ತಿದೆ. ಕೆಲ ದಿನದ ಹಿಂದೆ ಅವರು ಸಾಕಿದ ನಾಯಿಯನ್ನು ಚಿರತೆ ಹೊತ್ತೊಯ್ದಿತ್ತು. ಅರಣ್ಯ ಇಲಾಖೆ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು.

ಮುಕ್ತ ವಿವಿ ಪ್ರವೇಶಾತಿ ಪ್ರಚಾರ ಆಂದೋಲನಕ್ಕೆ ಚಾಲನೆ



ಮಂಡ್ಯ, ಆ.2– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಪ್ರಚಾರ ಆಂದೋಲನಕ್ಕೆ ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಮುಕ್ತ ವಿವಿ ಶೈಕ್ಷಣಿಕ ವಂಚಿತರು, ಸಮಾಜದ ಕೆಳಸ್ತರದಲ್ಲಿರುವವರು, ಶೋಷಿತರು, ವೃದ್ಧರು, ಮಹಿಳೆಯರು ಮತ್ತು ಅಂಗವಿಕಲರಿಗೆ, ಶಿಕ್ಷಣ ನೀಡುವ ಮುಖಾಂತರ ಶೈಕ್ಷಣಿಕ ಕಾಮಧೇನು ಎನಿಸಿಕೊಂಡಿದೆ. ಸಾಂಪ್ರದಾಯಿಕ ವಿ.ವಿಗಳಿಗೆ ಸರಿಸಮಾನವಾಗಿ ತಾಂತ್ರಿಕತೆಯ ಜೊತೆಯಲ್ಲಿ ಪ್ರವೇಶಾತಿ ನೀಡುತ್ತಿರುವ ವಿವಿಯು, ಅತ್ಯಂತ ಕಡಿಮೆ ದರದಲ್ಲಿ ನೀಡುತ್ತಿರುವ ಶೈಕ್ಷಣಿಕ ಸವಲತ್ತನ್ನು ಜಿಲ್ಲೆಯ ಪ್ರತಿಯೊಬ್ಬರು ಸದ್ಬಳಕೆ ಮಾಡಿಕೊಳ್ಳಬೇಕೆಂಬ ಕರೆ ನೀಡಿದರು.

ಮಂಡ್ಯ ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಮಿಲನ ಮಾತನಾಡಿ, ಮುಕ್ತ ವಿವಿ ದೇಶದ ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅಗ್ರಪಂಕ್ತಿಯಲ್ಲಿದ್ದು, ಶೈಕ್ಷಣಿಕ ಸ್ಪರ್ಧೆಯಲ್ಲಿ ತಾಂತ್ರಿಕ ಸವಲತ್ತುಗಳನ್ನು ನೀಡುವ ಮೂಲಕ ಸಾಂಪ್ರದಾಯಿಕ ಶಿಕ್ಷಣಕ್ಕೆ ಸೆಡ್ಡು ಹೊಡೆದು ನಿಂತಿದೆ ಎಂದರು. ಪ್ರಾದೇಶಿಕ ಕೇಂದ್ರವು ಸೇರಿದಂತೆ, ನಗರದ ಹಲವು ಪ್ರಮುಖ ಸ್ಥಳಗಳಲ್ಲಿ ವಾಹನದ ಮೂಲಕ ಎಲ್‌ಇಡಿ ಪರದೆಯಲ್ಲಿ ಶೈಕ್ಷಣಿಕ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಪ್ರಚಾರ ಆಂದೋಲನ ಸಂಯೋಜಕರಾದ ಸಿದ್ದೇಗೌಡ, ರೋಟರಿ ಕ್ಲಬ್‌ನ ಅಧ್ಯಕ್ಷರಾದ ಶ್ರೀಮತಿ ಅನುಪಮಾ ಉಪಸ್ಥಿತರಿದ್ದರು.

ಬ್ಯಾಲದಕೆರೆ ಮಹಿಳಾ ಡೈರಿ ಅಧ್ಯಕ್ಷೆಯಾಗಿ ಪ್ರೇಮಾ ದ್ಯಾವೇಗೌಡ



ಕೆ.ಆರ್.ಪೇಟೆ, ಆ.2– ತಾಲೂಕಿನ ಶೀಳನೆರೆ ಹೋಬಳಿಯ ಬ್ಯಾಲದಕೆರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪ್ರೇಮ ದ್ಯಾವೇಗೌಡ, ಉಪಾಧ್ಯಕ್ಷರಾಗಿ ಸುಜಾತ ಮಂಜೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಆಡಳಿತ ಮಂಡಳಿಯ ನಿರ್ದೇಶಕರಾಗಿ ವಿನೋಧ ವೆಂಕಟೇಶ್, ಯಶೋಧ ಸತೀಶ್, ಭಾಗ್ಯ ಜಯರಾಂ, ಸುಶೀಲ ಮಂಜೇಗೌಡ, ಸುಧಾ ವೆಂಕಟೇಶ್, ಲಕ್ಷ್ಮಮ್ಮ ಚನ್ನೇಗೌಡ, ಸುಧಾ ವೆಂಕಟೇಶ್, ಜಿ.ಕೆ.ವಿನೋದ ಲೋಕೇಶ್ ನಾಗಮ್ಮಬೆಟ್ಟಯ್ಯ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಎಸ್.ಮುಕ್ತ, ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಶೋಭಾ ಶಶಿಧರ್ ಕಾರ್ಯನಿರ್ವಹಣೆ ಮಾಡಿದರು.

ನೂತನ ಅಧ್ಯಕ್ಷರು–ಉಪಾಧ್ಯಕ್ಷರು ಹಾಗೂ ನಿರ್ದೇಶಕರನ್ನು ಗ್ರಾಮದ ಮುಖಂಡರಾದ ಗ್ರಾ.ಪಂ.ಮಾಜಿ ಅಧ್ಯಕ್ಷರಾದ ಪಾಪೇಗೌಡ, ಮಾಜಿ ಗ್ರಾ.ಪಂ. ಸದಸ್ಯರಾದ ನಂಜೇಗೌಡ, ದೇವೇಗೌಡ, ಗ್ರಾ.ಪಂ.ಸದಸ್ಯರಾದ ಅಶೋಕ್, ಮುಖಂಡರಾದ ಬಿ.ಪಿ.ಕೃಷ್ಣೇಗೌಡ, ಬಿ.ಪಿ.ಅಣ್ಣಯ್ಯ, ಬಿ.ಪಿ.ಮರೀಗೌಡ, ಬಿ.ಸಿ. ಮಂಜೇಗೌಡ, ರಾಧಾಕೃಷ್ಣ, ಬಿ.ಕೆ. ಕುಮಾರ್, ಬಿ.ಎನ್.ಮಂಜೇಗೌಡ, ಬಿ.ಬಿ. ಶಿವಕುಮಾರ್, ಕಿರಣ್.ಬಿ.ಎಂ, ಶ್ರೀನಿವಾಸ್, ಚನ್ನೇಗೌಡ, ಸಂಘದ ಸಿ.ಇ.ಓ ಶೋಭಾ, ಹಾಲು ಪರೀಕ್ಷಕಿ ಆಶಾ ರಮೇಶ್ ಸೇರಿದಂತೆ ಗ್ರಾಮದ ಮುಖಂಡರು, ಸಂಘದ ಷೇರುದಾರರು ಅಭಿನಂದಿಸಿದರು.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಒಂದನೇ ಪುಟದಿಂದ

ಕರ್ನಾಟಕದಲ್ಲಿ ನಾವು 20 ಸ್ಥಾನ ಗೆಲ್ಲಲೇಬೇಕಿದೆ

ವಿಧಾನಸಭೆ ಚುನಾವಣೆಯಲ್ಲೂ ಬಳಕೆ ಮಾಡಲಾಗುವುದು. ಕರ್ನಾಟಕ ಸರ್ಕಾರ ನಮಗೆ ಮಾಡೆಲ್ ಆಗಬೇಕು. ಬರುವ ಜನವರಿ 2024ರ ವೇಳೆಗೆ ನಾವು ಮಾಡಿರುವ ಎಲ್ಲಾ ಘೋಷಣೆಗಳು ಪ್ರತಿ ಕುಟುಂಬಕ್ಕೆ ತಲುಪಬೇಕು. ಇದರಿಂದ ನಮಗೆ ಲೋಕಸಭೆ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಲು ಸಾಧ್ಯವಾ ಗುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಕಿ–ಅಂಶ ಗಳನ್ನು ಆಧಾರವಾಗಿಟ್ಟುಕೊಂಡು ನಿಮಗೆ 20 ಸ್ಥಾನದ ಗುರಿ ನೀಡಿದ್ದೇವೆ. ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಲು ಶ್ರಮಿಸಿದ ಚುನಾಣಾ ಮಾಂತ್ರಿಕ ಸುನಿಲ್ ಕನಿಗೋಲ್ ಲೋಕಸಭೆ ಚುನಾ ವಣೆಗೂ ನಿಮಗೆ ಸಹಾಯ ಮಾಡಲಿದ್ದಾರೆ. ಅವರು ಈಗಾಗಲೇ ತಂತ್ರ ಗಾರಿಕೆಯಲ್ಲಿ ನಿರತರಾಗಿದ್ದಾರೆ.

ಅವರು ನೀಡುವ ಸಲಹೆ–ಸೂಚನೆಗಳನ್ನು ಚಾಚೂತಪ್ಪದೆ ಪಾಲಿಸಿ ಎಂದು ಸಭೆಯಲ್ಲಿದ್ದ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ರಾಜ್ಯ ನಾಯಕ ರಿಗೆ ಸಲಹೆ ಮಾಡಿದ್ದಾರೆ. ಅಧಿಕಾರ ದೊರೆಯಿತೆಂದು ಕೇಂದ್ರ ಸ್ಥಾನದಲ್ಲಿ ಬಿಡಾರ ಹೂಡುವುದು ಬೇಡ. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಗ್ಯಾರಂಟಿ ಯೋಜನೆ ಯಾವ ರೀತಿ ಅನುಷ್ಠಾನಗೊಳ್ಳುತ್ತದೆ. ಅವು ಜನರಿಗೆ ತಲುಪುತ್ತಿವೆಯೆ ಹಾಗೂ ಮತದಾರರ ಸಮಸ್ಯೆಗಳಿಗೆ ಸ್ಥಳೀಯವಾಗಿ ಸ್ಪಂದಿಸಿ ಕೆಲಸ ಮಾಡಿ ಕೊಡಿ ಎಂದು ಹೇಳಿದ್ದಾರೆ. ನಿಮ್ಮ ಮೇಲೆ ಈಗ ಜವಾಬ್ದಾರಿ ಹೆಚ್ಚಿದೆ. ನಿಮ್ಮಲ್ಲಿ ಕೆಲವರು ಕರ್ನಾಟಕಕ್ಕೆ ಸೀಮಿತ ನಾಯಕರಲ್ಲ. ರಾಷ್ಟ್ರಮಟ್ಟದ ಸೇವೆಗೂ ನಿಮ್ಮ ಅಗತ್ಯವಿದ್ದು, ಸಹಕಾರ ನೀಡಬೇಕು. ಬಿಜೆಪಿ ತೊರೆದು ಚುನಾವಣಾ ಸಂದರ್ಭದಲ್ಲಿ ಪಕ್ಷ ಸೇರಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಸೇರಿದಂತೆ ನಮ್ಮನ್ನು ನಂಬಿ ಬಂದವರನ್ನು ಕುಟುಂಬದ ಸದಸ್ಯರಂತೆ ನೋಡಿಕೊಳ್ಳಿ ಎಂದು ಅವರ ಸಮ್ಮುಖದಲ್ಲೇ ಖರ್ಗೆ, ರಾಜ್ಯ ನಾಯಕರಿಗೆ ಕಿವಿ ಮಾತು ಹೇಳಿದ್ದಾರೆ. ಅಷ್ಟೇ ಅಲ್ಲ, ನಮ್ಮನ್ನು ನಂಬಿ ಬಂದಿರುವ ನಿಮ್ಮನ್ನು ಕೈಬಿಡುವುದಿಲ್ಲ. ಮುಂದೆ ಪಕ್ಷದಲ್ಲಿ ನಿಮಗೆ ಉಜ್ವಲ ಭವಿಷ್ಯವಿದೆ. ನೀವು ಹಿರಿಯರಿದ್ದು, ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಸಲಹೆ ಸೂಚನೆಗಳನ್ನು ಕಾಲ ಕಾಲಕ್ಕೆ ನೀಡ ಬಹುದು ಎಂದಿದ್ದಾರೆ. ಲೋಕಸಭಾ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಸಂದರ್ಭದಲ್ಲಿ ನೀವು ನೀಡುವ ಸಲಹೆ–ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಹೇಳಿದ್ದಾರೆ. ಶಾಸಕರ ಸಲಹೆ–ಸೂಚನೆಗಳನ್ನು ಕಡೆಗಣಿಸಬೇಡಿ ಹಾಗೂ ಅವರನ್ನು ಅಗೌರವದಿಂದ ಕಾಣಬೇಡಿ ಎಂದು ಖರ್ಗೆ ಮತ್ತು ರಾಹುಲ್, ರಾಜ್ಯ ನಾಯಕರಿಗೆ ಕಿವಿಮಾತು ಹೇಳಿದ್ದಾರೆ. ಬಿಜೆಪಿಯ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿ, ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ನಮ್ಮನ್ನು ಹೆಜ್ಜೆ ಹೆಜ್ಜೆಗೂ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ನೀವು ಸದಾ ಜಾಗ್ರತೆಯಿಂದ ಕಾರ್ಯನಿರ್ವಹಿಸಿ ಎಂಬ ಹಿತೋಪದೇಶ ಮಾಡಿದ್ದಾರೆ.

ಮುಂಬರುವ ಚುನಾವಣೆಯಲ್ಲಿ 20 ಸ್ಥಾನವನ್ನು ಕರ್ನಾಟಕದಲ್ಲಿ ಗೆಲ್ಲಲೇಬೇಕು ಎಂದು ಗುರಿ ನಿಗದಿ ಮಾಡಿರುವ ವರಿಷ್ಠರು, ವರ್ಚಸ್ವಿ, ಪ್ರಭಾವಿ ಹಾಗೂ ಜಾತಿ ಆಧಾರದ ಮೇಲೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ರಾಜ್ಯ ನಾಯಕರ ಸಲಹೆಯನ್ನು ಸಭೆಯಲ್ಲಿ ಪಡೆದಿದ್ದಾರೆ.

ನಿಮ್ಮ ವಿರುದ್ಧ ಸೆಣಸುತ್ತೇವೆ

ಅಲ್ಲವೇ ಎಂದು ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರದ್ದೇ ಯೋಜನೆಯಾಗಿರುವ ರೈತರ ಖಾತೆಗೆ ವಾರ್ಷಿಕ ಆರು ಸಾವಿರ ರೂಪಾಯಿಗಳನ್ನು ಜಮೆ ಮಾಡುವ ಕಿಸಾನ್ ಸಮ್ಮಾನ್ ಯೋಜನೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?

ನಾನು ಐದು ಕಿಲೋ ಅಕ್ಕಿಯನ್ನು ಹೆಚ್ಚುವರಿಯಾಗಿ ನೀಡಿದರೆ ಅದರಿಂದ ರಾಜ್ಯದ ಖಜಾನೆ ಬರಿದಾಗಲಿದೆ ಎನ್ನುವುದು ನಿಮ್ಮ ಅಭಿಪ್ರಾಯವಾಗಿದ್ದರೆ, ಐದು ಕಿಲೋ ಅಕ್ಕಿಯನ್ನು ಉಚಿತವಾಗಿ ನೀಡುವ ಪಿಎಂ ಗರೀಬ್ ಅನ್ನ ಕಲ್ಯಾಣ ಯೋಜನೆಯನ್ನು ಯಾವ ಗುಂಪಿಗೆ ಸೇರಿಸುತ್ತೀರಿ. ಉಚಿತ ಸ್ವರೂಪದ ಎಂಟು ಯೋಜನೆಗಳನ್ನು ಕೇಂದ್ರ ಸರ್ಕಾರ ಅಂದಾಜು 1.25 ಲಕ್ಷ ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸುತ್ತಿದೆ. ಉಚಿತ ಯೋಜನೆಗಳನ್ನು ವಿರೋಧಿಸುತ್ತಿರುವ ನೀವು ಈ ಯೋಜನೆಗಳನ್ನು ಹೇಗೆ ಸಮರ್ಥಿಸುತ್ತೀರಿ. ಡಬಲ್ ಎಂಜಿನ್ ಸರ್ಕಾರದ ಜನವಿರೋಧಿ ಆಡಳಿತದಿಂದ ಬೇಸತ್ತು ಹೋಗಿರುವ ಕರ್ನಾಟಕದ ಜನತೆ ನಮ್ಮ ಗ್ಯಾರಂಟಿ ಯೋಜನೆಗಳಿಗೆ ಜನಾದೇಶವನ್ನು ನೀಡಿ ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ನುಡಿದಂತೆ ನಡೆಯುವ ಬದ್ಧತೆ ಹೊಂದಿರುವ ನಾವು ಕೊಟ್ಟ ಭಾಷೆಯನ್ನು ಉಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದಿದ್ದಾರೆ.

4.35 ಲಕ್ಷ ರೂ. ಜಪ್ತಿ

ಹಾಗೂ ಸಿಡಿಆರ್ ಸುಳಿವಿನ ಬೆನ್ನತ್ತಿದಾಗ ಕೃತ್ಯ ಎಸಗಿದ್ದ ಐವರನ್ನು ಜುಲೈ 31 ರಂದು ಪತ್ತೆ ಮಾಡಿ ಬಂಧಿಸಿದ್ದರು. ಅವರೆಲ್ಲರೂ ಸೆಕ್ಯೂರಿಟಿ ಸಂಸ್ಥೆಯೊಂದರಲ್ಲಿ ಗಾರ್ಡ್‌ಗಳಾಗಿದ್ದವರು ಎಂದು ವಿಚಾರಣೆ ವೇಳೆ ತಿಳಿದು ಬಂದಿತು.

ಆ ಪೈಕಿ ಓರ್ವ ಈ ಹಿಂದೆ ದರಸಗುಪ್ಪೆ ಎಸ್‌ಎಸ್‌ಸಿ ಪ್ರೈವೇಟ್ ಲಿಮಿಟೆಡ್‌ನಲ್ಲೇ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದವನಾಗಿದ್ದು, ಪ್ರತೀ ದಿನ ತುಳಸೀದಾಸ್ ಅವರು ದೊಡ್ಡ ಮೊತ್ತದ ಹಣವನ್ನು ಬ್ಯಾಂಕ್‌ಗೆ ಜಮೆ ಮಾಡುತ್ತಾರೆ ಎಂಬುದನ್ನು ಅರಿತಿದ್ದ ಈತ ಈ ಸಂಸ್ಥೆಯಲ್ಲಿ ಕೆಲಸ ಬಿಟ್ಟ ನಂತರ ತನಗೆ ಪರಿಚಯವಿದ್ದ ಇತರ ನಾಲ್ವರು ಸೆಕ್ಯೂರಿಟಿ ಗಾರ್ಡ್‌ಗಳೊಡಗೂಡಿ ಈ ಕೃತ್ಯವೆಸಗಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದೆ. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗದರ್ಶನದಲ್ಲಿ ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಮೇಲುಸ್ತುವಾರಿಯಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಸಿ.ಕೀರ್ತಿ, ಅಂಬಮ್ಮ, ಸಿಬ್ಬಂದಿಗಳಾದ ಮಲ್ಲಿಕಾರ್ಜುನಪ್ಪ, ರವಿಕುಮಾರ್, ರಾಘವೇಂದ್ರ ಹರೀಶ್, ಮಹೇಶ್, ಹೊಸಮನಿ, ವೆಂಕಟೇಶ್, ಲಿಖಿತ್, ಸುನಿಲ್, ಎಂ. ಚಂದ್ರಶೇಖರ್, ನಾಗರಾಜು, ಮೋಹನ್ ಹಾಗೂ ಆಶಾ ಅವರು ಪಾಲ್ಗೊಂಡಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	113.45 ಅಡಿ
ಒಳಹರಿವು	4129 ಕ್ಯುಸೆಕ್
ಹೊರಹರಿವು	3193 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2283.46 ಅಡಿ
ಒಳ ಹರಿವು	6010 ಕ್ಯುಸೆಕ್
ಹೊರ ಹರಿವು	5538 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2858.02 ಅಡಿ
ಒಳ ಹರಿವು	4028 ಕ್ಯುಸೆಕ್
ಹೊರ ಹರಿವು	2000 ಕ್ಯುಸೆಕ್

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ 'ಕಕ್ಕಡ ಪದ್‌ನೆಟ್' ಅರ್ಥಪೂರ್ಣ ಆಚರಣೆ

ಗದ್ದೆಗಳಲ್ಲಿ ಸಸಿ ನಾಟಿ, 7 ಸುತ್ತು ಗುಂಡು ಹಾರಿಸಿ ಪ್ರಾರ್ಥನೆ ಸಲ್ಲಿಕೆ, ಪ್ರತಿಜ್ಞಾವಿಧಿ ಸ್ವೀಕಾರ



ಕೊಡವರ ಬೇಡಿಕೆ ಈಡೇರಿಸಲು ಆಗ್ರಹ, ಕೆಲವು ನಿರ್ಣಯಗಳ ಅಂಗೀಕಾರ

ಮಡಿಕೇರಿ, ಆ.2– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ 28ನೇ ವರ್ಷದ 'ಕಕ್ಕಡ ಪದ್‌ನೆಟ್' ಅನ್ನು ಅರ್ಥಪೂರ್ಣವಾಗಿ ಆಚರಿಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅಧ್ಯಕ್ಷತೆಯಲ್ಲಿ ಮಡಿಕೇರಿ ಸಮೀಪ ಕ್ಯಾಪಿಟಲ್ ವಿಲೇಜ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮುಖ ನಿರ್ಣಯಗಳನ್ನು ಮಂಡಿಸಲಾಯಿತು.

ಕೊಡವ ಜನಾಂಗಕ್ಕೆ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ, ಸ್ವಯಂ ಆಡಳಿತ, ಎಸ್‌ಟಿ ಟ್ಯಾಗ್ ಮತ್ತು ಕೋವಿ ಹಕ್ಕಿನ ಕುರಿತು ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯನ್ನು ಸಲ್ಲಿಸಿದ ಅರ್ಥ ಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಡಾ. ಸುಬ್ರಮಣಿಯನ್ ಸ್ವಾಮಿ ಅವರನ್ನು ಅಭಿನಂದಿಸಲು ಮತ್ತು ಸ್ವಾಮಿ ಅವರ ಜನ್ಮದಿನದಂದು ಕೊಡವ ಸಮೂಹವನ್ನು ಜಾಗೃತಿಗೊಳಿಸಲು ಸುದೀರ್ಘ ಪಾದಯಾತ್ರೆಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಸ್ವಾಮಿ ಅವರ ಜನ್ಮ ದಿನವಾದ ಸೆ.15ರಂದು ಯೋಗಕ್ಷೇಮಕ್ಕಾಗಿ ತಲಕಾವೇರಿ ಹಾಗೂ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದ ನಂತರ ಪಾದಯಾತ್ರೆ ಆರಂಭಿಸಲು ನಿರ್ಧರಿಸಲಾಯಿತು.

ರಾಜ್ಯದ ದಾಖಲೆಯಲ್ಲಿ ಜಾನಪದ 'ಕೊಡವ' ನಾಮಕರಣದ ಪುನರುಜ್ಜೀವನಕ್ಕಾಗಿ ಸಿಎನ್‌ಸಿ ಹೆಮ್ಮೆ ವ್ಯಕ್ತಪಡಿಸಿತು. ಶಾಸ್ತ್ರೀಯ ಕೊಡವ ನಾಮಕರಣವು ಕೊಡವ ಹೆಗ್ಗುರುತನ್ನು ಮತ್ತು ಸ್ವಾಭಿಮಾನವನ್ನು ಗಟ್ಟಿಗೊಳಿಸುವುದಲ್ಲದೆ, ಕೊಡವ ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಸ್ವಯಂ ನಿರ್ಣಯ ಆಳ್ವಿಕೆ ಮತ್ತು ಕೊಡವ ಜನಾಂಗಕ್ಕೆ ಸಂಬಂಧಿಸಿದ ಎಲ್ಲಾ 9 ಜನಾಂಗೀಯ ಹಕ್ಕುಗಳನ್ನು ನಿರ್ಧರಿಸುವ ಹೆಬ್ಬಾಗಿಲಾಗಿದೆ ಎಂದು ಎನ್.ಯು.ನಾಚಪ್ಪ ಹೇಳಿದರು.

'ಕೊಡವ' ಎಂಬುದಾಗಿ ಶಾಸನ ಬದ್ಧವಾಗಿ ಸ್ಥಿರೀಕರಣಗೊಳಿಸಲು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರ ಸಮಯೋಚಿತ ಮಧ್ಯಸ್ಥಿಕೆಯೊಂದಿಗೆ ಸಿಎನ್‌ಸಿ ಕೊಡವ ನ್ಯಾಷನಲ್ ಕೌನ್ಸಿಲ್‌ನ ಸುದೀರ್ಘ ವರ್ಷಗಳ ಹಕ್ಕೊತ್ತಾಯದ ಮೇರೆಗೆ ಸಿದ್ದರಾಮಯ್ಯ ಸರ್ಕಾರ ಶಾಸನಬದ್ಧವಾಗಿ ಅಂಗೀಕರಿಸಿದೆ. ಇದನ್ನು ಕಾರ್ಯಗತಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ಹೇಳಿದರು.

ಅಧಿಕೃತ ದಾಖಲೆಗಳ ಆಧಾರದ ಮೇಲೆ ನಿಜವಾದ ವರದಿಯನ್ನು ಸಲ್ಲಿಸಿದ ಅಂದಿನ ಹಿಂದುಳಿದ ಆಯೋಗಗಳ ಅಧ್ಯಕ್ಷ ಡಾ.ಸಿ.ಎಸ್. ದ್ವಾರಕಾನಾಥ್, ಸಿಎನ್‌ಸಿ ಅಧ್ಯಕ್ಷರ ಪರ ವಾದಿಸಿದ ಬಲ್ಲಚಂಡ ಬೋಳ್ಳಿಯಪ್ಪ ವಿಷಯವನ್ನು ಮುಂದುವರೆಸಿದ ಹಿಂದುಳಿದ ವರ್ಗಗಳ ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಕೊಡವರ ಪರ ಮಹತ್ವದ ತೀರ್ಪು ನೀಡಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ಸಿಎನ್‌ಸಿ ಸ್ವಯಂಸೇವಕರು, ಒಡನಾಡಿಗಳು, ಹಿತೈಷಿಗಳು ಹಾಗೂ ಬೆಂಬಲಿಗರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಬಳಿಕ ಕ್ಯಾಪಿಟಲ್ ವಿಲೇಜ್‌ನ ಗದ್ದೆಗಳಲ್ಲಿ ಸಸಿಗಳನ್ನು ನಾಟಿ ಮಾಡುವ ಮೊದಲು ಗಾಳಿಯಲ್ಲಿ 7 ಸುತ್ತು ಗುಂಡು ಹಾರಿಸಲಾಯಿತು. ಗ್ರಾಮದ 'ಮಂದ್'ನಲ್ಲಿ ಧಾರ್ಮಿಕ ಪ್ರಾರ್ಥನೆ ಸಲ್ಲಿಸಲಾಯಿತು. ಬಂದೂಕು ಮತ್ತು ಭತ್ತದ ಸಸಿಗಳೊಂದಿಗೆ ಮೆರವಣಿಗೆ ಸಾಂಪ್ರದಾಯಿಕ ದುಡಿಕೊಟ್ಟ್‌ಪಾಟ್ ಮೂಲಕ ಭತ್ತದ ಗದ್ದೆಗೆ ಸಾಗಿ ನಾಟಿ ಮಾಡಲಾಯಿತು. ಕೊಡವ, ಕೊಡವತಿಯರು ಸಿಎನ್‌ಸಿಯ ನ್ಯಾಯಸಮ್ಮತ ಸಾಂವಿಧಾನಿಕ ಬೇಡಿಕೆಗಳ ಪರ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಕಕ್ಕಡ ಹಬ್ಬದ ಕೊಡವ ಸಾಂಪ್ರದಾಯಿಕ ಖಾದ್ಯಗಳನ್ನು ಸವಿದು ಸಂಭ್ರಮಿಸಿದರು.

ಸಿಎನ್‌ಸಿ ಪ್ರಮುಖರಾದ ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ ಕಾಳಪ್ಪ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಪಟ್ಟಮಾಡ ಲಲಿತಾ, ಬೊಪ್ಪಂಡ ಬೊಳ್ಳಮ ನಾಣಯ್ಯ, ಅರೆಯಡ ಸವಿತಾ ಗಿರೀಶ್, ಬೊಟ್ಟಂಗಡ ಸವಿತಾ ಗಿರೀಶ್, ಚೋಳಪಂಡ ಜ್ಯೋತಿ ನಾಣಯ್ಯ, ನಂದಿನೆರವಂಡ ನಿಶಾ ಅಚ್ಚಯ್ಯ, ನಂದೇಟಿರ ಕವಿತಾ ರವಿ, ಕೂಪದಿರ ಪುಷ್ಪ ಮುತ್ತಪ್ಪ, ಅಜ್ಜಿನಿಕಂಡ ಇನಿತಾ ಮಾಚಯ್ಯ, ನಂದಿನೆರವಂಡ ಬೀನ ಅಯ್ಯಣ್ಣ, ಚಾಮೇರ ದಿನೇಶ್, ಅಜ್ಜಮಕ್ಕಡ ವಿನು, ಕುಕ್ಕೇರ ಜಯ, ಚೆಯ್ಯಂಡ ಸತ್ಯ, ಐಲಪಂಡ ಮಿಟ್ಟು ಮತ್ತಿತರ ಪ್ರಮುಖರು ಪಾಲ್ಗೊಂಡಿದ್ದರು.

ಸೋಮವಾರಪೇಟೆ ಆಸ್ಟ್ರೋಟರ್ಫ್ ಮೈದಾನಕ್ಕೆ ಗ್ರಹಣ

ದಶಕ ಉರುಳಿದರೂ ಮುಗಿಯದ ಕಾಮಗಾರಿ, ಸ್ಥಳೀಯರ ಆಕ್ರೋಶ



ಮಡಿಕೇರಿ, ಆ.2– ಸೋಮವಾರಪೇಟೆಯ ಜೂನಿಯರ್ ಕಾಲೇಜಿನ ಆಸ್ಟ್ರೋಟರ್ಫ್ ಕಾಮಗಾರಿಗೆ ಗ್ರಹಣ ಹಿಡಿದಿದ್ದು, ದಶಕ ಉರುಳಿದರೂ ಕಾಮಗಾರಿ ಪೂರ್ಣಗೊಳ್ಳದ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಕ್ರೀಡೆ ಹಾಕಿಯಲ್ಲಿ ಕೊಡಗಿನ ಸೋಮವಾರಪೇಟೆ ಬಹುದೊಡ್ಡ ಹೆಸರು ಗಳಿಸಿದೆ. ಈ ತಾಲೂಕಿನ ಬಿ.ಪಿ ಗೋವಿಂದ, ಅರ್ಜುನ್ ಹಾಲಪ್ಪ, ಎಸ್.ವಿ. ಸುನಿಲ್, ಭಾರತ ತಂಡದ ನಾಯಕರಾಗಿದ್ದವರು. ಆದರೆ ವಿಪರ್ಯಾಸ ಎಂದರೆ ಈ ಪ್ರತಿಭೆಗಳು ಆಡಿ ಬೆಳೆದ ಕ್ರೀಡಾಂಗಣದ ಆಸ್ಟ್ರೋಟರ್ಫ್ ಕಾಮಗಾರಿ ಮಾತ್ರ ಕಳೆದ 11 ವರ್ಷಗಳಿಂದ ಕುಂಟುತ್ತಲೇ ಸಾಗಿದೆ.

ಸೋ.ಪೇಟೆಯ ಜೂನಿಯರ್ ಕಾಲೇಜಿನ ಮೈದಾನದಲ್ಲಿ ಆಸ್ಟ್ರೋಟರ್ಫ್ ಮೈದಾನ ಕಾಮಗಾರಿ ಆರಂಭಕ್ಕೂ ಮುನ್ನ ಆಸ್ಟ್ರೋಟರ್ಫ್ ಮೈದಾನವನ್ನು ಬಳಗುಂದ ಸರಕಾರಿ ಶಾಲೆಯ ಮೈದಾನದಲ್ಲಿ ನಿರ್ಮಿಸಿದ್ದಲ್ಲಿ ಅನುಕೂಲದ ಜೊತೆಗೆ ಸೋಮವಾರಪೇಟೆ ಪಟ್ಟಣವೂ ಅಭಿವೃದ್ಧಿಯಾಗುತ್ತದೆ ಎಂಬ ಅಭಿಪ್ರಾಯವನ್ನು ಅನೇಕ ಹಾಕಿ ಪಟುಗಳು ವ್ಯಕ್ತಪಡಿಸಿದ್ದರು. ಆದರೆ ಇವುಗಳನ್ನೆಲ್ಲ ಬದಿಗೊತ್ತಿ ಈ ಮೈದಾನದಲ್ಲೇ ಆಸ್ಟ್ರೋಟರ್ಫ್ ಮೈದಾನ ನಿರ್ಮಾಣಕ್ಕೆ ಮುಂದಾಗಲಾಯಿತು ಎಂಬ ಅಭಿಪ್ರಾಯವೂ ಸಾರ್ವಜನಿಕ ವಲಯದಲ್ಲಿದೆ. ಈ ನಡುವೆ ಕುಂಟುತ್ತಾ ತೆವಳುತ್ತಾ ಸಾಗಿದ ಆಸ್ಟ್ರೋಟರ್ಫ್ ಮೈದಾನದ ಕಾಮಗಾರಿ ಇನ್ನೂ ಪೂರ್ಣಗೊಳ್ಳದಿರುವುದು ಹಾಕಿ ಪ್ರತಿಭೆಗಳ ನಿರಾಶೆಗೆ ಕಾರಣವಾಗಿದೆ.

ಮಾಜಿ ಶಾಸಕ ಅಪ್ಪಚ್ಚು ರಂಜನ್ ಅವರು ಕ್ರೀಡಾ ಸಚಿವರಾಗಿದ್ದಾಗ ಸೋಮವಾರಪೇಟೆಗೆ ಮಂಜೂರಾದ ಈ ಆಸ್ಟ್ರೋಟರ್ಫ್ ಮೈದಾನ ಕಾಮಗಾರಿಯನ್ನು ಹೈದರಾಬಾದ್ ಮೂಲದ ಸಂಸ್ಥೆಯೊಂದು ವಹಿಸಿಕೊಂಡಿದ್ದು, ಕಾಮಗಾರಿಯ ಗುಣಮಟ್ಟವು ಕಳಪೆಯಾಗಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿ ಬಂದಿದೆ. ಮಂದಗತಿಯಲ್ಲಿ ಕಾಮಗಾರಿ ನಡೆಸಲಾಗುತ್ತಿದ್ದು, ಅಲ್ಲಿ ಯಾವುದೇ ಭದ್ರತೆಯೂ ಇಲ್ಲ. ರಾತ್ರಿ ವೇಳೆ ಜಾನುವಾರುಗಳು ಓಡಾಡುವುದರ ಜೊತೆಗೆ ಪುಂಡರು ಕೂಡ ಇಲ್ಲಿ ಸ್ವೇಚ್ಛಾಚಾರದಿಂದ ವರ್ತಿಸುತ್ತಾರೆ ಎಂಬ ಆರೋಪವಿದೆ.

ಅನೇಕ ಹಾಕಿ ಆಟಗಾರರನ್ನು ದೇಶಕ್ಕೆ ಕೊಡುಗೆ ನೀಡಿದ ಈ ಕ್ರೀಡಾಂಗಣ ಇಂದು ಯಾರಿಗೂ ಉಪಯೋಗವಾಗದೆ ಹೀಗೆ ಬಿದ್ದಿರುವುದು ಕ್ರೀಡಾಪಟುಗಳ ಅಸಮಾಧಾನಕ್ಕೆ ಕಾರಣವಾಗಿದೆ. ಒಂದು ಕಾಲದಲ್ಲಿ ಇದೇ ಕ್ರೀಡಾಂಗಣದಲ್ಲಿ ಹಾಕಿ, ಫುಟ್ಬಾಲ್, ಕ್ರಿಕೆಟ್, ಖೋಖೋ, ಕಬಡ್ಡಿ ಸೇರಿ ಎಲ್ಲಾ ಬಗೆಯ ಕ್ರೀಡೆಗಳನ್ನು ಆಯೋಜಿಸಲಾಗುತ್ತಿತ್ತು. ಆದರೆ ಇದೀಗ ಟರ್ಫ್ ಮೈದಾನ ನಿರ್ಮಾಣವಾದ ಹಿನ್ನೆಲೆಯಲ್ಲಿ ಯಾವುದೇ ಕ್ರೀಡೆಗೂ ಇದು ಲಭ್ಯವಿಲ್ಲ. ಅತ್ತ ಹಾಕಿಯೂ ಆಡಲಾಗದೆ ಇತ್ತ ಇತರೆ ಕ್ರೀಡೆಗಳನ್ನೂ ಆಡಲಾಗದ ಅಸಹಾಯಕ ಪರಿಸ್ಥಿತಿ ಇಲ್ಲಿನ ಸ್ಥಳೀಯ ಕ್ರೀಡಾಪಟುಗಳದ್ದಾಗಿದೆ. ಟರ್ಫ್ ಮೈದಾನ ಕಾಮಗಾರಿ ಕುಂಟುತ್ತಾ ಸಾಗುತ್ತಿರುವುದು ಕ್ರೀಡಾಪಟುಗಳ ಹಾಗೂ ಕ್ರೀಡಾಭಿಮಾನಿಗಳ ಅಸಮಾಧಾನಕ್ಕೂ ಕಾರಣವಾಗಿದೆ.

ಆಧಾರವಿಲ್ಲದೆ ವಾಸ ದೃಢೀಕರಣ ಪತ್ರ ನೀಡಿದ್ದ ಪಿಡಿಓಗೆ 10 ಸಾವಿರ ರೂ. ದಂಡ

ಮಡಿಕೇರಿ, ಆ.2– ಯಾವುದೇ ಆಧಾರವಿಲ್ಲದೇ ವ್ಯಕ್ತಿಯೋರ್ವರಿಗೆ ವಾಸ ದೃಢೀಕರಣ ಪತ್ರ ನೀಡಿದ್ದ ಆರೋಪದಲ್ಲಿ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಕುಂದುಕೊರತೆ ನಿವಾರಣಾ ಪ್ರಾಧಿಕಾರ 10 ಸಾವಿರ ರೂ.ಗಳ ದಂಡ ವಿಧಿಸಿದೆ.

ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಳ್ಳೂರು ಗ್ರಾಮದಲ್ಲಿ ಗರಗಂದೂರು ಲಕ್ಷ್ಮಣ ಎಂಬುವರು ಮನೆ ಹಾಗೂ ಟಯರ್ ಫ್ಯಾಕ್ಟರಿಯನ್ನು ಹೊಂದಿದ್ದರು. ಬಳಿಕ ಇವುಗಳನ್ನು ವ್ಯಕ್ತಿಯೋರ್ವರಿಗೆ ಬಾಡಿಗೆ ನೀಡಿದ್ದರು. ಆದರೆ ಬಾಡಿಗೆಗಿದ್ದ ವ್ಯಕ್ತಿ, ಮನೆ ಹಾಗೂ ಟಯರ್ ಫ್ಯಾಕ್ಟರಿ ತನಗೆ ಸೇರಿದ್ದೆಂದು ಕೋರ್ಟ್ ಮೊರೆ ಹೊಕ್ಕಿದ್ದರು.

ಈ ನಡುವೆ ಬಾಡಿಗೆದಾರ ವ್ಯಕ್ತಿ ಸುಮಾರು 10 ವರ್ಷಗಳಿಂದ ಅಲ್ಲಿ ವಾಸವಿದ್ದಾರೆಂದು ಗುಡ್ಡೆಹೊಸೂರು ಗ್ರಾಪಂ ಪಿಡಿಓ ವೇಣುಗೋಪಾಲ್ ಅವರು ವಾಸದ ದೃಢೀಕರಣ ಪತ್ರ ನೀಡಿದ್ದಾರೆನ್ನಲಾಗಿದ್ದು, ಇದರಿಂದ ಮನೆ ಮಾಲೀಕ ಲಕ್ಷ್ಮಣ ಅವರಿಗೆ ಸುಮಾರು 50 ಲಕ್ಷ ರೂಪಾಯಿಗಳ ಮನೆ ಕಳೆದುಕೊಳ್ಳುವ ಆತಂಕ ಎದುರಾಗಿತ್ತು. ಮನೆ ಮಾಲೀಕ ದೂರುದಾರ ಗರಗಂದೂರು ಲಕ್ಷ್ಮಣ ಅವರು, ಮಡಿಕೇರಿಯ ಜಿಲ್ಲಾ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೊರೆ ಹೋಗಿದ್ದರು. ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದ ಪ್ರಾಧಿಕಾರ ಕರ್ತವ್ಯ ಲೋಪ ಎಸಗಿದ ಕಾರಣಕ್ಕಾಗಿ ಪಿಡಿಓ ಅವರಿಗೆ 10 ಸಾವಿರ ರೂ.ಗಳ ದಂಡ ವಿಧಿಸಿ ಆದೇಶಿಸಿದೆ.

ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್‌ಗೆ ನೂತನ ಪದಾಧಿಕಾರಿಗಳ ಆಯ್ಕೆ



ವಿರಾಜಪೇಟೆ, ಆ.2– ವಿರಾಜಪೇಟೆಯ ಪ್ರತಿಷ್ಠಿತ ಬ್ಯಾಂಕ್ ಒಂದಾದ ಪಟ್ಟಣ ಸಹಕಾರ ಬ್ಯಾಂಕ್‌ಗೆ ಹಲವಾರು ವರ್ಷಗಳ ನಂತರ ಚುನಾವಣೆ ನಡೆಯಿತು.

ಇಷ್ಟು ದಿನ ಅವಿರೋಧ ಆಯ್ಕೆಯೊಂದಿಗೆ ಆಡಳಿತ ಮಂಡಳಿ ಬ್ಯಾಂಕ್ ವ್ಯವಹಾರಗಳನ್ನು ನಡೆಸಲಾಗಿತ್ತು. ಬ್ಯಾಂಕ್‌ನ ಸದಸ್ಯರು ಮತ್ತು ಗ್ರಾಹಕರ ಒತ್ತಡದ ಮೇರೆಗೆ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಂತೆ ಕೋರಿದ್ದರಿಂದ ಬ್ಯಾಂಕ್ ಅಧಿನಿಯಮದಂತೆ ವಿರಾಜಪೇಟೆ ಮಹಿಳಾ ಸಮಾಜದ ಸಭಾಂಗಣದಲ್ಲಿ ಚುನಾವಣೆಗೆ ಅವಕಾಶ ಕಲ್ಪಿಸಲಾಗಿತ್ತು.

ಚುನಾವಣೆಯ ಕಣದಲ್ಲಿ 34 ಮಂದಿ ಸ್ಪರ್ಧೆ ಮಾಡಿದ್ದರು. ಪಟ್ಟಣ ಸಹಕಾರ ಬ್ಯಾಂಕ್‌ನ ಸುಮಾರು 3,813 ಸದಸ್ಯರ ಪೈಕಿ 2831 ಮಂದಿಗೆ ಮತ ಚಲಾಯಿಸುವ ಹಕ್ಕು ನೀಡಲಾಗಿತ್ತು. ಉಳಿದ ಸದಸ್ಯರು ವಿವಿಧ ಕಾರಣಗಳಿಂದ ಮತ ಚಲಾಯಿಸುವ ಹಕ್ಕು ಕಳೆದುಕೊಂಡಿದ್ದರು.

ಚುನಾವಣೆಯಲ್ಲಿ 2088 ಸದಸ್ಯರು ಮತ ಚಲಾಯಿಸಿದ್ದು, ಶೇಕಡ 74 ರಷ್ಟು ಮತದಾನ ನಡೆದಿದೆ. ಚುನಾವಣೆ ನಡೆದು ಮೂವರು ಹೊಸಬರು, ಹಾಲಿ ನಿರ್ದೇಶಕರು ಆಡಳಿತ ಮಂಡಳಿಗೆ ಆಯ್ಕೆಗೊಂಡರು.

ಸಾಮಾನ್ಯ ಕ್ಷೇತ್ರದಿಂದ ಪಟ್ಟಡ ರಂಜಿ ಪೂಣಚ್ಚ 1193 ಮತಗಳು, ಪಾಂಡಂಡ ಪಿ. ರಚನ್ ಮೇದಪ್ಪ 1107 ಮತ, ಕೋಲತಂಡ ಡಬ್ಲ್ಯೂಯು ಬೋಪಯ್ಯ 1101, ಪೂಣಚ್ಚ ಎನ್.ಮಾದೇಯಂಡ 1059, ರಘು ಸೋಮಯ್ಯ ಕೆ.ಎಂ 1008, ದೇವಯ್ಯ ಕೆ ಮಲ್ಲಂಡ 968, ಮತ್ತು ಚರ್ಮಣ ಎಂ ಕಾಂಡಂಡ 874, ಪಡೆದುಕೊಂಡರೆ, ಮಹಿಳಾ ಮೀಸಲು ಕ್ಷೇತ್ರದಿಂದ ಕಾವೇರಮ್ಮ ಐ.ಎಂ. (ರತ್ತು) 1014, ಮತ್ತು ದೇಚಮ್ಮ ಕಾಳಪ್ಪ 790, ಮತಗಳನ್ನು ಪಡೆದರು.

ಹಿಂದುಳಿದ ಪ್ರವರ್ಗ 'ಎ' ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಸುಜೀತ್ ಎನ್.ಕೆ. 762 ಮತ ಪಡೆದರೆ, ಹಿಂದುಳಿದ ಪ್ರವರ್ಗ 'ಬಿ' ಮೀಸಲು ಕ್ಷೇತ್ರದಿಂದ ಕಾವೇರಪ್ಪ ಪಿ. ಮಾದಪಂಡ (ಕಾಶಿ) 1223 ಮತ, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಮುತ್ತಮ್ಮ ಹೆಚ್.ಸಿ. 532 ಮತ, ಹಾಗೂ ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಹಾಲಿ ನಿರ್ದೇಶಕ ಪ್ರತಾಪ್ ಕೆ.ಬಿ. 1112 ಮತಗಳನ್ನು ಪಡೆದು ಆಡಳಿತ ಮಂಡಳಿಯ ನಿರ್ದೇಶಕರಾಗಿ ಆಯ್ಕೆಗೊಂಡರು. ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮತ ಎಣಿಕೆ ಕಾರ್ಯ ನಡೆಯಿತು. ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ಚುನಾವಣಾಧಿಕಾರಿಯಾಗಿ ಪಿ.ಆಶಾ ಮತ್ತು ಸಹಾಯಕ ಚುನಾವಣಾಧಿಕಾರಿ ಕರಣ್ ಕಾರ್ಯಪ್ಪ ಅವರು ಕಾರ್ಯ ನಿರ್ವಹಿಸಿದ್ದರು. ಸಹಕಾರಿ ಕ್ಷೇತ್ರದ ನೌಕರರು ಚುನಾವಣೆಯ ಕಾರ್ಯದಲ್ಲಿ ಭಾಗವಹಿಸಿದ್ದರು.

ಅಪೂರ್ಣ ಕಾಮಗಾರಿ ಪೂರ್ಣಗೊಳಿಸಲು ಕ್ರಮ

ಮಾಧ್ಯಮ ಸಂವಾದದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಭರವಸೆ



ಚಾಮರಾಜನಗರ, ಆ.2– ಚಾಮರಾಜನಗರದ ವಿವಿಧೆಡೆ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಬುಧವಾರ ನಡೆದ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ಹಲವೆಡೆ ಅರೆ–ಬರೆ ಕಾಮಗಾರಿಗಳು ನಡೆದಿದ್ದು, ಇವುಗಳ ಬಗ್ಗೆ ಮಾಹಿತಿ ತರಿಸಿಕೊಂಡು ಹಂತ–ಹಂತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

ಮೂಲ ಸೌಲಭ್ಯಕ್ಕೆ ಆದ್ಯತೆ: ಜಿಲ್ಲೆಯಲ್ಲಿ ಪ್ರಮುಖವಾಗಿ ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಅನುಕೂಲಗಳು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕಡಿಮೆ ಇದೆ, ಅಲ್ಲದೇ ಬಾಲ್ಯ ವಿವಾಹ, ಮಕ್ಕಳಲ್ಲಿ ಅಪೌಷ್ಟಿಕತೆ ಕೂಡ ಕಂಡುಬರುತ್ತಿದೆ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಬೇರೆ ಜಿಲ್ಲೆಗಳಲ್ಲಿ ಖಾಸಗಿ ಆಸ್ಪತ್ರೆಗಳು ಹೆಚ್ಚಾಗಿವೆ. ಆದರೆ, ನಮ್ಮ ಜಿಲ್ಲೆಯಲ್ಲಿ ಜನತೆ ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಬಿಸಿಕೊಂಡಿದ್ದಾರೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇರಿದಂತೆ ಇತರೆ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುವುದು ಎಂದರು.

ಹಾಡಿಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇವರಿಗೆ ಅರಿವು ಮೂಡಿಸಿ ಮತ್ತೆ ಶಾಲೆಗೆ ದಾಖಲಿಸುವ ಕೆಲಸವಾಗಬೇಕಿದೆ. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಯು ಇನ್ನೂ ಉತ್ತಮ ಸ್ಥಾನಕ್ಕೆ ಕೊಂಡೊಯ್ಯಬೇಕಿದೆ. ಅಲ್ಲದೇ ಜಿಲ್ಲೆಯಲ್ಲಿರುವ 1200 ಅಂಗನವಾಡಿ ಕೇಂದ್ರಗಳಲ್ಲಿನ ಸಹಾಯಕಿಯರಿಗೆ ವಿಶೇಷ ತರಬೇತಿ ನೀಡಿ, ಮಕ್ಕಳಲ್ಲಿ ಕಲಿಕಾ ಕೌಶಲ್ಯ ವೃದ್ಧಿಸಬೇಕಿದೆ ಎಂದು ತಿಳಿಸಿದರು.

'ಚೆಲುವ ಚಾಮರಾಜನಗರ' ಪುನಾರಂಭ: ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾದ ವಾತಾವರಣವಿದೆ. ಈ ನಿಟ್ಟಿನಲ್ಲಿ ಅನುಷ್ಠಾನಗೊಳಿಸಲಾಗಿದ್ದ ಚೆಲುವ ಚಾಮರಾಜನಗರ ಯೋಜನೆಯನ್ನು ಮತ್ತೆ ಪ್ರಾರಂಭಿಸಲಾಗುವುದು. ಜಿಲ್ಲೆಯ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ದಸರಾ ಮಹೋತ್ಸವದಲ್ಲಿ ಮೈಸೂರಿನಲ್ಲಿ ಪ್ರವಾಸಿಗರಿಗಾಗಿ ವಿಶೇಷ ಬಸ್ ವ್ಯವಸ್ಥೆ ಮಾಡಿ ಮೈಸೂರು ಹಾಗೂ ಕೊಡುಗು ಜಿಲ್ಲೆಯ ಪ್ರವಾಸಿತಾಣಗಳನ್ನು ತೋರಿಸಲಾಗುತ್ತದೆ. ಅದನ್ನು ಈ ಬಾರಿಯಿಂದ ಚಾಮರಾಜನಗರಕ್ಕೂ ವಿಸ್ತರಿಸುವಂತೆ ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲದೇ ಜಿಲ್ಲೆಯಲ್ಲಿ ನಡೆಯುವ ಗ್ರಾಮೀಣ ದಸರಾ ಮಹೋತ್ಸವದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಅಲ್ಲದೇ ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಆರ್ಥಿಕವಾಗಿ ಸದೃಢವಾಗಲು ಕ್ರಮವಹಿಸಬೇಕಿದೆ. ನಿಯಮನುಸಾರವಾಗಿ ತೆರಿಗೆ ಸಂಗ್ರಹ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜಿಲ್ಲೆಯ ಪಟ್ಟಣ ಪದೇಶಗಳಲ್ಲಿ ಯುಜಿಡಿ ಸಮಸ್ಯೆ ಹೆಚ್ಚಾಗಿದೆ. ಇದನ್ನು ಸರಿಪಡಿಸುವ ಜೊತೆಗೆ ಬೀದಿ ದೀಪಗಳು, ಉತ್ತಮ ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು. ಸಂವಾದದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಇದ್ದರು.

ನುಡಿದಂತೆ ನಡೆದ ಡಿಸಿ ಶಿಲ್ಪನಾಗ್

ಚಾಮರಾಜನಗರ, ಆ.2– ಮೃತಪಟ್ಟ ಪತ್ರಕರ್ತನ ಕುಟುಂಬಕ್ಕೆ ನೆರವಾಗುವ ಮೂಲಕ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಅವರು ನುಡಿದಂತೆ ನಡೆದು ಹೃದಯ ವೈಶಾಲತೆ ಮೆರೆದಿದ್ದಾರೆ.

ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದ ವಿಜಯವಾಣಿ ವರದಿಗಾರರಾಗಿದ್ದ ವಿ. ನಾಗರಾಜು ಇತ್ತೀಚೆಗೆ ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಅವರ ಪತ್ನಿ ನಾಗರತ್ನ ಅವರಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಜುಲೈ 29ರಂದು ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ 10 ಸಾವಿರ ರೂ. ಅನ್ನು ನೀಡಿತ್ತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ನಾಗರಾಜು ಅವರ ಕುಟುಂಬಕ್ಕೆ ಸರ್ಕಾರದ ವತಿಯಿಂದ ಪರಿಹಾರ ದೊರಕಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ್ದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಅವರು ಮೃತ ನಾಗರಾಜು ಅವರ ಪತ್ನಿ ನಾಗರತ್ನ ಅವರಿಗೆ ವೈಯಕ್ತಿಕ 15 ಸಾವಿರ ರೂ. ನೀಡುತ್ತೇನೆ. ಇದಲ್ಲದೇ ಅವರಿಗೆ ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಅವರು ನಾಗರತ್ನ ಅವರಿಗೆ 15 ಸಾವಿರ ರೂ. ಅನ್ನು ವೈಯಕ್ತಿಕವಾಗಿ ನೀಡುವ ಮೂಲಕ ನುಡಿದಂತೆ ನಡೆದಿದ್ದಾರೆ. ಓರ್ವ ಅಧಿಕಾರಿಯಾಗಿ ನೊಂದವರಿಗೆ ಸಹಾಯ ಮಾಡುವ ಮೂಲಕ ಹೃದಯ ವೈಶ್ಯಾಲತೆಯನ್ನು ಮೆರೆಯುವ ಮೂಲಕ ಇತರರಿಗೆ ಮಾದರಿ ಆಗಿದ್ದಾರೆ.

ಬಾಲ್ಯದ ನೆನಪು ಹಂಚಿಕೊಂಡ ಡಿಸಿ

ನನ್ನ ತಂದೆ ಬೆಂಗಳೂರಿನ ಕಾಲೇಜಿನಲ್ಲಿ ಬಿಇ ಇಂಜಿನಿಯರಿಂಗ್ ಪದವಿಗೆ ಸೇರ್ಪಡೆ ಮಾಡಿದರು. ಆದರೆ, ನನಗೆ ಪತ್ರಿಕೋದ್ಯಮ ಹಾಗೂ ಆಡಳಿತಾತ್ಮಕ ವಿಚಾರದಲ್ಲಿ ಹೆಚ್ಚು ಆಸಕ್ತಿ ಇತ್ತು ಹೀಗಾಗಿ, ಬಿಇ ಬಿಟ್ಟು ಬಿಎ ಪದವಿ ಸೇರ್ಪಡೆಗೊಂಡು ಅಧ್ಯಯನ ಮಾಡಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಮ್ಮ ಬಾಲ್ಯ ಜೀವನವನ್ನು ಸಂವಾದದಲ್ಲಿ ಹಂಚಿಕೊಂಡರು.

ಮೂಲತಃ ನಾವು ಹಾಸನ ಜಿಲ್ಲೆಯವರಾದರೂ, ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿಯೇ. ಅಲ್ಲಿಯೇ ನನ್ನ ವಿದ್ಯಾಭ್ಯಾಸ ಪೂರ್ಣಗೊಳಿಸಿದೆ. ಪದವಿ ಮಾಡುತ್ತಿದ್ದಾಗಲೇ ನನಗೆ ಮದುವೆ ಮಾಡಲಾಯಿತು. ಆದರೂ ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಬಯಕೆಯಿಂದ ವಿದ್ಯಾಭ್ಯಾಸ ಮುಂದುವರಿಸಿದೆ. ಕುಟುಂಬದ ನಿರ್ವಹಣೆಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆನ್‌ಲೈನ್ ಸಹಾಯದಿಂದ ಓದುತ್ತಾ ಐಎಎಸ್ ಪೂರ್ಣಗೊಳಿಸಿದೆ. ಮೆರಿಟ್ ಆಧಾರದಡಿ ಕರ್ನಾಟಕದಲ್ಲಿಯೇ ಕೆಲಸ ಮಾಡಲು ಅವಕಾಶ ದೊರೆಯಿತು ಎಂದು ತಿಳಿಸಿದರು.

ಮೊದಲಿಗೆ ಮೈಸೂರಿನಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದೆ. ನಂತರ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಉಪವಿಭಾಗಾಧಿಕಾರಿಯಾಗಿ, ಹಾಸನದಲ್ಲಿ ಜಿಪಂ ಸಿಇಒ ಆಗಿ, ಮೈಸೂರಿನ ಮಹಾನಗರ ಪಾಲಿಕೆಯ ಕಮಿಷನರ್ ಆಗಿ, ನಂತರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಮಿಷನರ್ ಆಗಿ ಕರ್ತವ್ಯ ನಿರ್ವಹಿಸಿ ಚಾಮರಾಜನಗರಕ್ಕೆ ಜಿಲ್ಲಾಧಿಕಾರಿಯಾಗಿ ಬಂದಿದ್ದೇನೆ ಎಂದು ಮಾಹಿತಿ ನೀಡಿದರು. ಜಿಲ್ಲೆಗೆ ಬಂದು 20 ದಿನಗಳಾಯಿತು. ಎಲ್ಲರೂ ಪ್ರೀತಿ– ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ಉತ್ತಮ ವಾತಾವರಣವಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಂದಿನಿ ಹಾಲು, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ನಂದಿನಿ ಹಾಲಿನ ಪ್ಯಾಕೆಟ್, ಸಕ್ಕರೆ, ತೊಗರಿಬೇಳೆ, ಇನ್ನಿತರ ವಸ್ತುಗಳನ್ನು ಪ್ರದರ್ಶಿಸಿ ಆಕ್ರೋಶ



ಚಾಮರಾಜನಗರ, ಆ.2– ನಂದಿನಿ ಹಾಲು ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಗೇಟ್ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಹಾಲಿನ ಪ್ಯಾಕೆಟ್, ತೊಗರಿ ಬೇಳೆ, ರವೆ, ಸಕ್ಕರೆ, ಅಲಸಂದೆ, ಹೆಸರಕಾಳು ಸೇರಿದಂತೆ ಇನ್ನಿತರ ವಸ್ತುಗಳನ್ನು ಪ್ರದರ್ಶಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ನಂದಿನಿ ಹಾಲು, ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಇದರಿಂದ ಜನಸಾಮಾನ್ಯರಿಗೆ ಹೊರೆಯಾಗಿದೆ. ಒಂದು ಲೀಟರ್ ಹಾಲಿಗೆ 4 ರೂ. ಹೆಚ್ಚಳ ಮಾಡಿದೆ. ಅಗತ್ಯ ವಸ್ತುಗಳಾದ ಹುರಳಿ, ಅಕ್ಕಿ, ಸಕ್ಕರೆ, ಹೆಸರುಕಾಳು, ಸಂಬಾರ ಪದಾರ್ಥಗಳು, ಇನ್ನಿತರ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಒಂದು ಕಡೆ ಜನತೆಗೆ ಸರ್ಕಾರ ಸಹಾಯ ಮಾಡುತ್ತೇವೆ ಎಂದು ಹೇಳಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ. ಸರ್ಕಾರ ಜನವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಲಾಗುತ್ತದೆ ಎಂದರು.

ಅಗತ್ಯವಸ್ತುಗಳ ಬೆಲೆ ಏರಿಕೆ ನೆಪದಲ್ಲಿ ರಾಜ್ಯ ಸರ್ಕಾರ ಲೂಟಿ ಮಾಡುತ್ತಿದೆ. ಜನಸಾಮಾನ್ಯರ ಹಿತದೃಷ್ಟಿಯಿಂದ ಹಾಲು ಮತ್ತು ಅಗತ್ಯವಸ್ತುಗಳ ಬೆಲೆ ಏರಿಕೆ ಇಳಿಸಬೇಕು. ಶಾಲಾ ಮಕ್ಕಳಿಗೆ ಸರಿಯಾಗಿ ಹಾಲು ವಿತರಣೆ ಮಾಡಬೇಕು. ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಿಸಬೇಕು. ಇಲ್ಲದಿದ್ದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜನತೆ ತಕ್ಕ ಪಾಠ ಕಲಿಸುತ್ತಾರೆ. ಬೆಲೆ ಏರಿಕೆ ವಿರುದ್ಧ ಜನಾಂದೋಲನ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಪಣ್ಯದಹುಂಡಿ ರಾಜು, ಮಹೇಶ್ ಗೌಡ, ಗು.ಪುರುಷೋತ್ತಮ್, ಚಾ.ಸಿ.ಸಿದ್ದರಾಜು, ರವಿಚಂದ್ರಪ್ರಸಾದ್ ಕಹಳೆ, ವೀರಭದ್ರ, ತಾಂಡವಮೂರ್ತಿ, ನಂಜುಂಡಸ್ವಾಮಿ, ಶಿವಣ್ಣ, ಡ್ಯಾನ್ಸ್ ಬಸವರಾಜು, ಸೋಮವಾರಪೇಟೆ ಮಂಜು ಇತರರು ಭಾಗವಹಿಸಿದ್ದರು.

ಜನರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಸೆರೆ



ಯಳಂದೂರು, ಆ.2– ಕಳೆದ ಕೆಲ ದಿನಗಳಿಂದಲೂ ಜನರ ನಿದ್ದೆಗೆಡಿಸಿದ್ದ ಚಿರತೆಯನ್ನು ಕೊನೆಗೂ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ತಾಲೂಕಿನ ಮಲ್ಲಿಗೆಹಳ್ಳಿ ಗ್ರಾಮದಲ್ಲಿ ಯುವಕನ ಮೇಲೆ ದಾಳಿ ನಡೆಸಿ ಕಣ್ಮರೆಯಾಗಿದ್ದ ಚಿರತೆ ಆಗಾಗ್ಗೆ ಕೆಸ್ತೂರು, ಕಟ್ನವಾಡಿ ಗ್ರಾಮಗಳ ಜಮೀನುಗಳಲ್ಲಿ ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿತ್ತು. ಚಿರತೆ ಸೆರೆಗೆ ಮುಂದಾದ ಅರಣ್ಯ ಇಲಾಖೆ ಅಧಿಕಾರಿಗಳು ಹಲವು ಕಡೆಗಳಲ್ಲಿ ಬೋನು ಇರಿಸಿದ್ದರು. ಅಲ್ಲದೇ ಕೆಲ ದಿನಗಳ ಹಿಂದೆ ಕುಂತೂರು ಬೆಟ್ಟದ ಬಂಡೆಯಲ್ಲಿ ಕಾಣಿಸಿಕೊಂಡಿದ್ದ ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲಿಯೇ ಬೀಡು ಬಿಟ್ಟಿದ್ದರು.

ಬೋನಿನಲ್ಲಿದ್ದ ಒಂದು ನಾಯಿಯನ್ನು ಹೊತ್ತೊಯ್ದಿದ್ದ ಚಿರತೆ ಬೋನಿಗೆ ಬಿದ್ದಿರಲಿಲ್ಲ. ಕಳೆದ ಹಲವು ದಿನಗಳ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ನಿದ್ದೆಗೆಡಿಸಿದ್ದ ಚಿರತೆ ಬುಧವಾರ ಬೆಳಗ್ಗೆ ಕುಂತೂರು ಬೆಟ್ಟದ ಬಳಿ ಇರಿಸಿದ್ದ ಬೋನಿಗೆ ಬಿದ್ದಿದೆ. ಆ ಮೂಲಕ ಇಷ್ಟು ದಿನಗಳ ಕಾಲ ಜನರ ಚಿಂತೆಗೀಡು ಮಾಡಿದ್ದ ಚಿರತೆ ಸೆರೆ ಸಿಕ್ಕಿ ನಿಟ್ಟುಸಿರು ಬಿಡುವಂತಾಗಿದೆ. ಬೋನಿಗೆ ಬಿದ್ದ ಚಿರತೆಯನ್ನು ಬೆಂಗಳೂರಿನ ಬನ್ನೇರುಘಟ್ಟ ವನ್ಯಧಾಮಕ್ಕೆ ರವಾನಿಸಲಾಗಿದೆ ಎಂದು ಆರ್.ಎಫ್.ಓ ಲೋಕೇಶ್‌ಮೂರ್ತಿ ತಿಳಿಸಿದರು.

ಚಾಲಕನ ನಿಯಂತ್ರಣ ತಪ್ಪಿ ಟಾಟಾಏಸ್ ಪಲ್ಟಿ: ಓರ್ವ ಸಾವು, 8 ಮಂದಿಗೆ ಗಾಯ

ಚಾಮರಾಜನಗರ, ಆ.2– ಚಾಲಕನ ನಿಯಂತ್ರಣ ತಪ್ಪಿ ಟಾಟಾ ಏಸ್ ಪಲ್ಟಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿದ್ದು, 8 ಮಂದಿ ಗಾಯಗೊಂಡಿರುವ ಘಟನೆ ಬುಧವಾರ ನಡೆದಿದೆ.

ತಾಲೂಕಿನ ಉಗನೇದಹುಂಡಿ ಬಳಿ ಈ ದುರ್ಘಟನೆ ನಡೆದಿದ್ದು,



ತಾಲೂಕಿನ ಮೂಡಲ ಅಗ್ರಹಾರ ಗ್ರಾಮದ ಕೆಂಪರಾಜು (27) ಮೃತ ದುರ್ದೈವಿ. ಅದೇ ಗ್ರಾಮದ ರಾಚಪ್ಪ, ಮಹೇಶ, ಮಂಟೇಲಿಂಗ, ಕುಮಾರ, ಪಿ. ಮರಹಳ್ಳಿಯ ದರ್ಶನ್, ಮಹದೇವಸ್ವಾಮಿ, ಮಹದೇವಪ್ರಸಾದ್, ಉತ್ತುವಳ್ಳಿಯ ನಾಗರಾಜು ಗಾಯಾಳುಗಳಾಗಿದ್ದಾರೆ. ಒಟ್ಟು 12 ಮಂದಿ ಚಿಕ್ಕ ಕೆಂಪನಹುಂಡಿ ಗ್ರಾಮದಲ್ಲಿ ಮನೆಯೊಂದಕ್ಕೆ ತಾರಸಿ ಹಾಕಲು ತೆರಳಿದ್ದರು. ನಂತರ ಕೆಲಸ ಮುಗಿಸಿ ವಾಪಾಸ್ ಬರುವಾಗ ಟಾಟಾ ಏಸ್ ಉಗನೇದಹುಂಡಿ ಗ್ರಾಮದ ಸಮೀಪ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದ್ದು, ಓರ್ವ ಸ್ಥಳದಲ್ಲೇ ಮೃತಪಟ್ಟಿದ್ದು ಇನ್ನುಳಿದ 8 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ವಿಷಯ ತಿಳಿದು ತಕ್ಷಣವೇ ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆಯ ಪೊಲೀಸರು ಗಾಯಾಳುಗಳಿಗೆ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು. ಮೃತದೇಹವನ್ನು ಶವಾಗಾರದಲ್ಲಿರಿಸಲಾಗಿದ್ದು, ಗುರುವಾರ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ನೀಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಿಲಗೆರೆ ಮಹಾದೇವಪ್ಪ ನಿಧನ

ಗುಂಡ್ಲುಪೇಟೆ, ಆ.2– ತಾಲೂಕಿನ ವಡ್ಡಗೆರೆ ಗ್ರಾಮದ ನಿವಾಸಿ ಕಿಲಗೆರೆ ಮಹಾದೇವಪ್ಪ (83) ಬುಧವಾರ ಮೈಸೂರಿನಲ್ಲಿ ನಿಧನರಾದರು. ಮೃತರು ಪುತ್ರ ತೆರಿಗೆ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನಸ್ವಾಮಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಡ್ಡಗೆರೆ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ.



ಚಿಕ್ಕಾಟಿ ಗ್ರಾಪಂ ನೂತನ ಅಧ್ಯಕ್ಷ ಹೊಣಕಾರ ನಾಯಕ, ಉಪಾಧ್ಯಕ್ಷೆ ಪದ್ಮ ಮಹೇಶ್ ಅವರು ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಚಿಕ್ಕಾಟಿ ಶಿವಣ್ಣನಾಯಕ, ಮಹಾದೇವ ಕುಮಾರ್, ಪ್ರಕಾಶ್, ಮಹಾದೇವ ನಾಯಕ, ಬಸವರಾಜು, ಬಂಗಾರ ನಾಯಕ ಇತರರಿದ್ದರು.

ಒಂದನೇ ಪುಟದಿಂದ

ಖತರ್ನಾಕ್ ಖದೀಮನ ಬಂಧನ

ವರದಾನವಾಯಿತು. ಮೈಸೂರಿನ ಯಾದವಗಿರಿಯ 5ನೇ ಮುಖ್ಯ ರಸ್ತೆಯಲ್ಲಿರುವ 40/ಸಿ ಮನೆ ಮುಂದೆ ನಿಲ್ಲಿಸಿದ್ದ ಲೆಕ್ಕ ಪರಿಶೋಧಕ ಬಿ.ಸತೀಶ್ ರಾವ್ ಅವರ ಮಹೀಂದ್ರ ಎಕ್ಸ್‌ಯುವಿ 700(ಕೆಎ 09 ಎಂಜಿ 2677) ಕಾರನ್ನು ಜುಲೈ 25ರಂದು ರಾತ್ರಿ ಕಳವು ಮಾಡಲಾಗಿತ್ತು. ಈ ಕಾರಿಗೆ ಜಿಪಿಎಸ್ ಅಳವಡಿಸಿದ್ದರಿಂದ ಅದರ ಚಲನ-ವಲನ, ದಿಕ್ಕು-ದೆಸೆ ನಿಖರವಾಗಿ ಗೊತ್ತಾಗುತ್ತಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್ ಅವರನ್ನೊಳಗೊಂಡ ತಂಡ ತಂತ್ರಜ್ಞಾನದ ಸಹಕಾರದಿಂದ ಕಾರಿನ ಪತ್ತೆಗಾಗಿ ಶೋಧ ಕಾರ್ಯ ನಡೆಸಿದಾಗ ಜುಲೈ 30ರಂದು ಈ ಕಾರಿನೊಂದಿಗೆ ಅದನ್ನು ಕಳವು ಮಾಡಿದ್ದ ಕರಿಸಾಥಿ ಬಾಬು ಎಂಬುವನು ಬೆಂಗಳೂರಿನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಈತ ಮನೆಯ ಹಿಂಬಾಗಿಲ ಚಿಲಕವನ್ನು ಕಿಟಕಿ ಮೂಲಕ ಕೈ ತೂರಿಸಿ ತೆಗೆದು, ಒಳಗೆ ನುಗ್ಗಿ ಕಾರಿನ ಕೀ ತೆಗೆದುಕೊಂಡು ಕಾರಿನೊಂದಿಗೆ ಪರಾರಿಯಾಗಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಪೊಲೀಸರು ಇತರೆ ಕಳವು ಪ್ರಕರಣಗಳ ಬಗ್ಗೆ ಅಲರ್ಟ್ ಆಗಿ ಪರಿಶೀಲನೆ ನಡೆಸಿದ್ದಾರೆ.

ವಿವಿ ಪುರಂ ಠಾಣಾ ವ್ಯಾಪ್ತಿಯ ಚೆಲುವಾಂಬ ಪಾರ್ಕ್ ಎದುರುಗಡೆ ಇರುವ ಉದ್ಯಮಿ ಅರ್ಜುನ್ ರಂಗ ಅವರ ಮನೆಯ ಹಿಂಬಾಗಿಲು ತೆಗೆದು ನುಸುಳಿದ್ದ ಆತ, 750 ಗ್ರಾಂ ಚಿನ್ನಾಭರಣ, ಬೆಲೆ ಬಾಳುವ 3 ವಾಚ್‌ಗಳು, ಹೆಡ್‌ಫೋನ್ ಹಾಗೂ ಫೋನ್ ಸ್ಪೀಕರ್‌ಗಳನ್ನು ಕಳವು ಮಾಡಿದ್ದ ಎಂಬುದು ಬಯಲಾಗಿದೆ. ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಗಮನಿಸಿದಾಗ ಆ ಮನೆಯಲ್ಲಿ ಕಳವು ಮಾಡಿರುವುದು ಈತನೇ ಎಂಬುದು ದೃಢಪಟ್ಟಿದೆ.

ಮತ್ತೊಂದೆಡೆ ವಿಜಯನಗರ 3ನೇ ಹಂತದ 80 ಅಡಿ ರಸ್ತೆಯಲ್ಲಿರುವ ಮಾಜಿ ಸಚಿವ ಕೋಟೆ ಶಿವಣ್ಣ ಅವರ ಮನೆಯ ಮುಂದೆ ನಿಲ್ಲಿಸಿದ್ದ ಇನ್ನೋವಾ ಕ್ರೆಸ್ಟಾ ಕಾರನ್ನು ಕಳೆದ ಜೂನ್ 5ರಂದು ರಾತ್ರಿ ಕಳವು ಮಾಡಲಾಗಿತ್ತು. ಅವರ ಮನೆಗೆ ನುಗ್ಗಿ ಟೇಬಲ್ ಮೇಲಿಟ್ಟಿದ್ದ ಕೀ ತೆಗೆದುಕೊಂಡು ಆರಾಮವಾಗಿ ಈತ ಕಾರು ಚಾಲನೆ ಮಾಡಿಕೊಂಡು ಬಂದಿದ್ದ. ಈ ದೃಶ್ಯಗಳು ಕೂಡ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಅದಕ್ಕೂ ಮುನ್ನ ಮೇ 12ರಂದು ರಾತ್ರಿ ಶಿವಣ್ಣ ಅವರ ಮನೆಯಿಂದ ಕೇವಲ 100 ಮೀ. ಅಂತರದಲ್ಲಿರುವ ಸಿಲ್ವರ್ ಓಕ್ ಹೋಟೆಲ್ ಮಾಲೀಕ ಕೆ.ಆರ್.ಸಂತೋಷ್ ಅವರ ಫಾರ್ಚುನರ್ ಕಾರ್ (ಕೆಎ 09 ಎಂಡಿ 9977) ಅನ್ನು ಕಳವು ಮಾಡಲಾಗಿತ್ತು. ಇದನ್ನೂ ಕೂಡ ಒಬ್ಬಂಟಿಯಾಗಿ ಈತ ಕಳವು ಮಾಡಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು.

ಕೇವಲ ಎಸ್‌ಎಸ್‌ಎಲ್‌ಸಿವರೆಗೆ ವ್ಯಾಸಂಗ ಮಾಡಿರುವ ಈ ಖದೀಮ ಐ-ಫೋನ್, ಇಂಟರ್ನೆಟ್, ವೆಬ್‌ಸೈಟ್ ಬಳಕೆ ಹಾಗೂ ಗೂಗಲ್ ಸರ್ಚ್ ಮಾಡುವುದರಲ್ಲಿ ನಿಪುಣನಾಗಿದ್ದು, ತಂತ್ರಜ್ಞಾನದ ಬಗ್ಗೆ ಅಪಾರ ಜ್ಞಾನ ಉಳ್ಳವನಾಗಿದ್ದಾನೆ. ಗೂಗಲ್ ಸರ್ಚ್ ಮಾಡಿ ಮೈಸೂರಲ್ಲಿ ಶ್ರೀಮಂತರಿರುವ ಬಡಾವಣೆಗಳನ್ನು ಗುರುತಿಸಿ, ಆ ಏರಿಯಾದಲ್ಲಿನ ದೊಡ್ಡ ದೊಡ್ಡ ಮನೆಗಳನ್ನು ಆಯ್ಕೆ ಮಾಡಿಕೊಂಡು ರಾತ್ರಿ ವೇಳೆ ಕೃತ್ಯವೆಸಗುತ್ತಿದ್ದ. ಒಬ್ಬಂಟಿಯಾಗೇ ಕೃತ್ಯವೆಸಗುತ್ತಿದ್ದ ಈತ ಮನೆಗಳ ಕಿಟಕಿ ಚಿಲಕ ತೆರೆದು ಕೈಗೆಟಕುವ ಅಂತರದಲ್ಲಿ ಕೀ ದೊರೆತರೆ ತೆಗೆದುಕೊಳ್ಳುತ್ತಿದ್ದ. ಇಲ್ಲದಿದ್ದರೆ ದೊಡ್ಡ ಮನೆಗಳ ಹಿಂಬಾಗಿಲನ್ನು ಉಪಾಯವಾಗಿ ತೆರೆದು ಒಳ ನುಗ್ಗಿ ಕೀ ತೆಗೆದುಕೊಂಡು ಆರಾಮವಾಗಿ ಐಷಾರಾಮಿ ಕಾರು ಚಾಲನೆ ಮಾಡಿಕೊಂಡು ಹೋಗಿಬಿಡುತ್ತಿದ್ದ. ಅದೇ ರೀತಿ ಮನೆಗಳಲ್ಲಿ ಬೆಲೆ ಬಾಳುವ ವಾಚ್, ಚಿನ್ನಾಭರಣ, ಹೆಡ್ ಫೋನ್‌ಗಳನ್ನು ಕಳವು ಮಾಡುತ್ತಿದ್ದ. ವಿಶೇಷವೆಂದರೆ ಈತ ಬಹುಶಃ ಯಾವುದೇ ಮನೆಯ ಬಾಗಿಲನ್ನಾಗಲೀ, ವಾರ್ಡ್ ರೋಬ್‌ಗಳನ್ನಾಗಲೀ ಮುರಿಯದೇ ಉಪಾಯವಾಗಿ ಕೃತ್ಯವೆಸಗಿ ಪರಾರಿಯಾಗಿ ಬಿಡುತ್ತಿದ್ದ. ತಂತ್ರಜ್ಞಾನ ಬಳಸಿಕೊಂಡು ಪೊಲೀಸರಿಗೆ ಸುಳಿವೇ ದೊರೆಯದಂತೆ ಬಚಾವ್ ಆಗಿಬಿಡುತ್ತಿದ್ದ. ಐಷಾರಾಮಿ ಕಾರುಗಳನ್ನು ಮಾರಾಟ ಮಾಡಲು ಗ್ರಾಹಕರನ್ನು ಹೊಂದಿದ್ದ ಈತ ತಾನು ಕದ್ದ ಕಾರುಗಳನ್ನು ಆಂಧ್ರಪ್ರದೇಶದಲ್ಲಿ ಮಾರಾಟ ಮಾಡಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಯಾದವಗಿರಿಯಲ್ಲಿ ಈತ ಕಳವು ಮಾಡಿದ್ದ ಕಾರಿನಲ್ಲಿ ಜಿಪಿಎಸ್ ವ್ಯವಸ್ಥೆ ಇಲ್ಲದಿದ್ದರೆ ಇನ್ನಷ್ಟು ಕೃತ್ಯಗಳನ್ನು ಈತ ನಡೆಸುವ ಸಾಧ್ಯತೆ ಇತ್ತು. ಆದರೆ ಜಿಪಿಎಸ್ ಸಹಕಾರದಿಂದ ಮೈಸೂರು ಪೊಲೀಸರು ಈತನನ್ನು ಸೆರೆ ಹಿಡಿದಿದ್ದಾರೆ. ಈ ಖದೀಮ ಈವರೆಗೆ ಒಟ್ಟು 59 ಕೃತ್ಯಗಳಲ್ಲಿ ಭಾಗಿಯಾಗಿರುವ ಬಗ್ಗೆ ತಿರುಪತಿಯಲ್ಲಿ 36, ತೆಲಂಗಾಣದಲ್ಲಿ 20 ಹಾಗೂ ತಮಿಳುನಾಡಿನಲ್ಲಿ 3 ಪ್ರಕರಣಗಳು ದಾಖಲಾಗಿವೆ. ಚಿತ್ತೂರಿನ ಮನೆ ಕಳವು ಪ್ರಕರಣದಲ್ಲಿ ಬಂಧಿತನಾಗಿ ಜೈಲಿನಲ್ಲಿದ್ದ ಆತ, ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಹೊರ ಬಂದ ನಂತರ ಆಂಧ್ರ, ತೆಲಂಗಾಣ, ತಮಿಳುನಾಡು ನಂತರ ತನ್ನ ಕೃತ್ಯವನ್ನು ಕರ್ನಾಟಕಕ್ಕೆ ವಿಸ್ತರಿಸಿಕೊಂಡು ಮೈಸೂರಿನಲ್ಲಿ ಐಷಾರಾಮಿ ಕಾರುಗಳು ಹಾಗೂ ಮನೆಗೆ ನುಗ್ಗಿ ಬೆಲೆ ಬಾಳುವ ವಾಚ್ ಮತ್ತಿತರ ವಸ್ತುಗಳನ್ನು ಕಳವು ಮಾಡಿದ್ದಾನೆ. ಕರ್ನಾಟಕದಲ್ಲಿ ಪ್ರಥಮವಾಗಿ ಈತ ಮೈಸೂರಲ್ಲೇ ಆಯ್ಕೆ ಮಾಡಿಕೊಂಡಿದ್ದಾನೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಂತೆ ಎನ್.ಆರ್. ಉಪ ವಿಭಾಗದ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಉಸ್ತುವಾರಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೆ.ಲೇಪಾಕ್ಷ, ಕೆ.ಕೆ.ಮೋಹನ್, ಸಿಬ್ಬಂದಿಗಳಾದ ಎಸ್.ಪ್ರಸನ್ನ, ಜಿ.ಸುರೇಶ, ಎಸ್.ಚೆಲುವರಾಜು, ಸುನಿಲ್ ಕಾಂಬಳೆ, ವೀರಣ್ಣ, ಬಿ.ಉಮೇಶ್, ಹರೀಶ್ ಹಾಗೂ ಚಾಮುಂಡಮ್ಮ ಪಾಲ್ಗೊಂಡಿದ್ದರು.

ಆರೋಪ ಬಂದರೂ ವಜಾ ಮಾಡಿ

ಮಾರ್ಗದರ್ಶನ ಮಾಡಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 135 ಸೀಟು ಬಂದಿರುವುದು ನಿರ್ದಿಷ್ಟ ಜಾತಿ ಅಥವಾ ಸಮಾಜದಿಂದ ಅಲ್ಲ. ಇಡೀ ರಾಜ್ಯದ ಜನತೆ ಬದಲಾವಣೆ ಬಯಸಿ ಪ್ರೀತಿಯಿಂದ ಪಕ್ಷವನ್ನು ಗೆಲ್ಲಿಸಿದ್ದಾರೆ. 1989ರ ಬಳಿಕ ಭಾರೀ ಬಹುಮತದಿಂದ ಗೆಲ್ಲಿಸಿದ್ದಾರೆ. ಈ ಜನರ ನಿರೀಕ್ಷೆಯಂತೆ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಬದ್ಧತೆಯೊಂದಿಗೆ ಸರಕಾರ ಟೇಕಾಫ್ ಆಗಿದ್ದೂ ಸರಿ. ಆದರೆ, ಅದರ ಬೆನ್ನಲ್ಲೇ, ಹೊರಬರುತ್ತಿರುವ ಊಹಾಪೋಹ, ಆರೋಪಗಳು ಕಾಂಗ್ರೆಸ್ ಸರಕಾರದ ಕಡೆಗಿನ ಜನರ ಸದಾಭಿಪ್ರಾಯವನ್ನು ಬದಲಿಸುವಂತೆ ಆಗಬಾರದು ಎಂದು ವರಿಷ್ಠರು ತಾಕೀತು ಮಾಡಿದ್ದಾರೆ.

ಪಕ್ಷದಿಂದ ಗೆದ್ದು ಅಧಿಕಾರ ಅನುಭವಿಸುತ್ತಿದ್ದೀರಿ. ಕಾರ್ಯಕರ್ತರ ದುಡಿಮೆ ಫಲ ಇದು ಎಂಬುದನ್ನು ಮರೆತಂತೆ ಕೆಲವು ಸಚಿವರ ನಡವಳಿಕೆ ಇದೆ. ಕೆಲವು ಸಚಿವರ ವಿರುದ್ಧ ದಿಲ್ಲಿ ವರೆಗೆ ದೂರುಗಳು ಬಂದಿವೆ. ಪಕ್ಷದ ಶಾಸಕರು, ಮುಖಂಡರೇ ದೂರು, ದಾಖಲೆಗಳನ್ನು ನೀಡಿದ್ದಾರೆ. ಇದು ಯಾವ ಕಾರಣಕ್ಕೂ ಮುಂದುವರಿಯಬಾರದು ಎಂದು ಹೈಕಮಾಂಡ್ ಖಡಕ್ ಎಚ್ಚರಿಕೆ ನೀಡಿದೆ.

ಡೋಂಟ್ ಕೇರ್: ಭ್ರಷ್ಟಾಚಾರದ ವಿಚಾರದಲ್ಲಿ ರಾಜೀ ಪ್ರಶ್ನೆಯೇ ಇಲ್ಲ. ಕರಪ್ಷನ್ ವಿಚಾರವನ್ನು ಯಾವ ಕಾರಣಕ್ಕೂ ಸಹಿಸುವುದಿಲ್ಲ. ನಮ್ಮ ಈ ಭರವಸೆಯನ್ನು ನಂಬಿಯೇ ಕರ್ನಾಟಕದ ಜನರ ಅಗಾಧ ಪ್ರೀತಿ ತೋರಿ ಮತಗಳ ಮೂಲಕ ಆಶೀರ್ವಾದ ನೀಡಿದ್ದಾರೆ. ಯಾವುದೇ ಸಚಿವರ ವಿರುದ್ಧ ನಿರ್ದಿಷ್ಟವಾಗಿ ಭ್ರಷ್ಟಾಚಾರದ ಆಪಾದನೆ ಬಂದರೂ ಸಂಪುಟದಿಂದ ಕಿತ್ತೊಗೆಯಿರಿ. ಈ ವಿಚಾರದಲ್ಲಿ ಡೋಂಟ್ ಕೇರ್. ಪಕ್ಷಕ್ಕೆ ಯಾವೊಬ್ಬ ಸಚಿವ ಅಥವಾ ನಾಯಕ ಮುಖ್ಯವಲ್ಲ. ಕಾರ್ಯಕರ್ತರೇ ಕಾಂಗ್ರೆಸ್ ಜೀವಾಳ ಎಂದು ರಾಹುಲ್‌ಗಾಂಧಿ ಫರ್ಮಾನು ಹೊರಡಿಸಿದರು ಎಂದು ಹೇಳಲಾಗಿದೆ.

ಬಹಳಷ್ಟು ಸಚಿವರು ಪಕ್ಷದ ವೇದಿಕೆಯಲ್ಲಿದ್ದು, ಎರಡೂ ಜವಾಬ್ದಾರಿಗಳನ್ನು ನಿಭಾಯಿಸುವುದು ಕಷ್ಟ. ಪದಾಧಿಕಾರಿಗಳಾಗಿರುವ ಸಚಿವರನ್ನು ಪಕ್ಷದ ಜವಾಬ್ದಾರಿಗಳಿಂದ ಮುಕ್ತಗೊಳಿಸಿ, ಹೊಸಬರನ್ನು ಪದಾಧಿಕಾರಿಗಳಾಗಿ ನೇಮಕ ಮಾಡಿ. ಆದರೆ, ಲೋಕಸಭೆ ಚುನಾವಣೆಗೆ ಕ್ಷೇತ್ರವಾರು ನೇಮಕಗೊಳ್ಳುವ ವೀಕ್ಷಕರೊಟ್ಟಿಗೆ ತಲಾ ಒಬ್ಬ ಸಚಿವ ಹಾಗೂ ಕೆಪಿಸಿಸಿ ಪದಾಧಿಕಾರಿಯನ್ನು ಜೋಡಿಸಿ ಎಂದು ರಾಹುಲ್‌ಗಾಂಧಿ ಸೂಚನೆ ನೀಡಿದ್ದಾರೆ. ರಾಹುಲ್‌ಗಾಂಧಿ ಅವರ ಈ ಅಭಿಪ್ರಾಯಗಳಿಗೆ ಧ್ವನಿಗೂಡಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ.ವೇಣುಗೋಪಾಲ್, ಕೆಲವು ಸಚಿವರ ವಿರುದ್ಧ ನಿರ್ದಿಷ್ಟ ಆರೋಪಗಳ ಕುರಿತಂತೆ ದೂರುಗಳು ನಮ್ಮ ಬಳಿ ಇವೆ. ಇದು ಮುಂದುವರಿಯಬಾರದು ಎಂದರು. ಕೆಲವು ಸಚಿವರುಗಳು ಜಿಲ್ಲೆಗಳಿಗೆ ಹೋಗುತ್ತಿಲ್ಲ. ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರ ಅಹವಾಲುಗಳಿಗೆ ಸ್ಪಂದಿಸುತ್ತಿಲ್ಲ. ಈ ಬಗ್ಗೆ ಸೂಕ್ತ ನಿರ್ದೇಶನ ನೀಡಿ ಎಂದು ಅವರು ಸಿಎಂ ಮತ್ತು ಡಿಸಿಎಂಗೆ ಸೂಚಿಸಿದರು. ಪ್ರತಿ ತಾಲೂಕು ಕೇಂದ್ರಗಳಲ್ಲಿ ಪಕ್ಷದ ಸ್ವಂತ ಕಟ್ಟಡದಲ್ಲಿ ಕಚೇರಿ ಆರಂಭಿಸಲೂ ಸಂಬಂಧಪಟ್ಟ ಸಚಿವರುಗಳು ಕ್ರಮ ವಹಿಸಬೇಕು ಎಂದು ಸಲಹೆ ಮಾಡಿದರು.

ದಾರಿ ಒಂದೇ ಇರಲಿ: ಸರಕಾರ ಅಧಿಕಾರಕ್ಕೆ ಬಂದು 3 ತಿಂಗಳು ಸಮೀಪಿಸುವ ಮುನ್ನವೇ ಪಕ್ಷವೊಂದು ಕಡೆ, ಸರಕಾರ ಮತ್ತೊಂದು ದಿಕ್ಕಿನಲ್ಲಿ ಸಾಗಿದೆ ಎಂಬ ಅಭಿಪ್ರಾಯ ಗಟ್ಟಿಯಾಗುತ್ತಿದೆ. ಅಧಿಕಾರಿಗಳ ವರ್ಗಾವಣೆ, ಪೋಸ್ಟಿಂಗ್, ಅನುದಾನ ಬಿಡುಗಡೆ ವಿಚಾರದಲ್ಲಿ ನಾನಾ ರೀತಿಯ ಊಹಾಪೋಹಗಳು ಕೇಳಿ ಬರುತ್ತಿವೆ. ಇದಕ್ಕೆ ಆಸ್ಪದ ಕೊಡಬೇಡಿ. ಅದಕ್ಕಾಗಿ ಕಾರ್ಯಕರ್ತರು ಮತ್ತು ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿ ಎಂದು ಮಲ್ಲಿಕಾರ್ಜುನ ಖರ್ಗೆ, ಸಚಿವರುಗಳಿಗೆ ಮಾರ್ಗದರ್ಶನ ಮಾಡಿದ್ದಾರೆ.

ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಕೃಷ್ಣ ಭೈರೇಗೌಡ, ಈಶ್ವರ ಖಂಡ್ರೆ, ಸತೀಶ್ ಜಾರಕಿಹೊಳಿ, ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್, ಕೆ.ಜೆ.ಜಾರ್ಜ್, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಸಂಸದ ಡಿ.ಕೆ.ಸುರೇಶ್, ಜಿ.ಸಿ.ಚಂದ್ರಶೇಖರ್, ಹಿರಿಯ ನಾಯಕರಾದ ಜೈರಾಮ್ ರಮೇಶ್, ಆರ್.ವಿ.ದೇಶಪಾಂಡೆ, ಬಿ.ಎಲ್ ಶಂಕರ್, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಬಿ.ಕೆ.ಹರಿಪ್ರಸಾದ್, ಕೆ.ಆರ್.ರಮೇಶ್‌ಕುಮಾರ್, ಸಲೀಂ ಅಹ್ಮದ್ ಮತ್ತಿತರರು ಪಾಲ್ಗೊಂಡಿದ್ದರು.

5 ವರ್ಷದೊಳಗಿನ ಮಕ್ಕಳು, ಗರ್ಭಿಣಿಯರಿಗೆ ಲಸಿಕೆ ಪೂರ್ಣಗೊಳಿಸಿ

ಆ.7ರಿಂದ 12ರವರೆಗೆ ಮೊದಲ ಸುತ್ತಿನ ಇಂದ್ರಧನುಷ್ ಲಸಿಕಾ ಅಭಿಯಾನ; ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಿರ್ದೇಶನ



ಮೈಸೂರು ಜಿಲ್ಲಾ ಪಂಚಾಯತಿ ಕಚೇರಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಬುಧವಾರ ಮಿಷನ್ ಇಂದ್ರಧನುಷ್ 5.0' ಅಭಿಯಾನ ಅನುಷ್ಠಾನ ಸಂಬಂಧ ನಡೆದ ಅಧಿಕಾರಿಗಳ ಸಭೆಯಲ್ಲಿ ಅಭಿಯಾನದ ಪೋಸ್ಟರ್ ಅನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಬಿಡುಗಡೆ ಮಾಡಿದರು.

ಮೈಸೂರು,ಆ.2(ಪಿಎಂ)- ಮಾರಕ ರೋಗಗಳ ವಿರುದ್ಧ ನೀಡುವ ಲಸಿಕೆಗಳಿಂದ ವಂಚಿತರಾದ 5 ವರ್ಷದೊಳಗಿನ ಎಲ್ಲಾ ಮಕ್ಕಳು ಹಾಗೂ ಗರ್ಭಿಣಿಯರಿಗೆ 'ಮಿಷನ್ ಇಂದ್ರಧನುಷ್ 5.0' ಅಭಿಯಾನದಡಿ ಲಸಿಕೆಗಳನ್ನು ನೀಡಲು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಿರ್ದೇಶನ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತಿ ಕಚೇರಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ 'ತೀವ್ರತರ ಮಿಷನ್ ಇಂದ್ರಧನುಷ್ 5.0' ಅಭಿಯಾನ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 2023ರ ಅಂತ್ಯದೊಳಗೆ ದಡಾರ ಮತ್ತು ರುಬೆಲ್ಲಾ ರೋಗಗಳ ನಿರ್ಮೂಲನೆಯ ಗುರಿಯಿದೆ. ಈ ರೋಗಗಳ ವಿರುದ್ಧ ಲಸಿಕಾ ಪ್ರಕ್ರಿಯೆ ಹಾಗೂ ಪಿಸಿವಿ 3ನೇ ಡೋಸ್ ಲಸಿಕಾ ಪ್ರಕ್ರಿಯೆ ವೇಗ ಹೆಚ್ಚಿಸಲು ಅಭಿಯಾನ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 3 ಸುತ್ತುಗಳಲ್ಲಿ ಅಭಿಯಾನ ನಡೆಯಲಿದೆ. ಅದರಂತೆ ಅಭಿಯಾನವು ಆ.7ರಿಂದ 12ರವರೆಗೆ, ಸೆ.11ರಿಂದ 16ರವರೆಗೆ ಮತ್ತು ಅ.9ರಿಂದ 14ರವರೆಗೆ ನಡೆಯಲಿದ್ದು, ಪ್ರತಿ ತಿಂಗಳಲ್ಲಿ 6 ದಿನಗಳ ಕಾಲ ಲಸಿಕಾ ಪ್ರಕ್ರಿಯೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಳ್ಳಿಗಳು, ಕೊಳಚೆ ಪ್ರದೇಶಗಳಲ್ಲಿ ಹೆಚ್ಚು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ಸಂಬಂಧ ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರಿಂದ ಲಸಿಕೆ ಪಡೆಯುವವರನ್ನು ಗುರುತಿಸುವ ಕೆಲಸವಾಗಬೇಕು. ಮಕ್ಕಳ ಆರೋಗ್ಯ ಸ್ಥಿತಿಗತಿ ಪರೀಕ್ಷಿಸಿ ಲಸಿಕೆ ನೀಡಬೇಕು. ಯಾವುದೇ ಅಡ್ಡ ಪರಿಣಾಮ ಆಗದಂತೆ ಎಚ್ಚರ ವಹಿಸಬೇಕೆಂದು ಸೂಚನೆ ನೀಡಿದರು.

ಆಶಾ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇರದಂತೆ ಕ್ರಮ ವಹಿಸಬೇಕು. ಅರ್ಹರನ್ನು ಗುರುತಿಸಿ ಲಸಿಕೆ ಪಡೆಯುವಂತೆ ಅರಿವು ಮೂಡಿಸುವ ಕಾರ್ಯ ಆಶಾ ಕಾರ್ಯಕರ್ತೆರಿಂದ ಪರಿಣಾಮಕಾರಿಯಾಗಿ ಆಗಬೇಕು. ಈ ಸಂಬಂಧ ಆಶಾ ಕಾರ್ಯಕರ್ತೆಯರಿಗೆ ಅಗತ್ಯ ತರಬೇತಿ ನೀಡಬೇಕು ಎಂದು ತಿಳಿಸಿದರು.

ಡೆಂಗ್ಯೂ ಬಗ್ಗೆ ಜಾಗೃತಿ ವಹಿಸಿ: ಮಳೆಗಾಲ ಪ್ರಾರಂಭವಾಗಿದ್ದು, ಡೆಂಗ್ಯೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದೆ. ಸೊಳ್ಳೆಗಳ ಕಡಿತದಿಂದ ಕಂಡು ಬರುವ ಸೋಂಕು ಇದಾಗಿದ್ದು, ಸೊಳ್ಳೆಗಳು ಉತ್ಪತ್ತಿ ಆಗದಂತೆ ನೋಡಿಕೊಳ್ಳಬೇಕೆಂದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಹಳೆ ಟೈರ್, ತೆಂಗಿನ ಚಿಪ್ಪು, ಒಡೆದ ಮಡಿಕೆಗಳು ಹಾಗೂ ಮನೆ ಮುಂದೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನೀರಿನ ತೊಟ್ಟಿ ಹಾಗೂ ಟ್ಯಾಂಕ್‌ಗಳನ್ನು ಆಗಾಗ್ಗೆ ಸ್ವಚ್ಛಗೊಳಿಸಬೇಕು. ಜ್ವರ ಬಂದರೆ ತಕ್ಷಣ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಜನರಲ್ಲಿ ತಿಳುವಳಿಕೆ ನೀಡಬೇಕೆಂದು ಎಂದು ತಿಳಿಸಿದರು.

ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

900 ವಿಶೇಷ ಲಸಿಕಾ ಕೇಂದ್ರಗಳು

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ ಮಾತನಾಡಿ, ಅಭಿಯಾನದಲ್ಲಿ ಲಸಿಕೆ ಪಡೆಯಲು ಫಲಾನುಭವಿಗಳು ವೆಬ್‌ಸೈಟ್‌ನಲ್ಲಿಯೂ (uwinselfregistration.mohfw.giv.in) ನೋಂದಣಿ ಮಾಡಿಕೊಳ್ಳಬಹುದು. ಸದರಿ ಲಸಿಕಾ ಅಭಿಯಾನದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಸಮೀಕ್ಷಾ ಕಾರ್ಯ ಕೈಗೊಂಡಿದ್ದು, ಅದರಂತೆ 0 ರಿಂದ 2 ವರ್ಷದ 5,075 ಮಕ್ಕಳು, 2 ರಿಂದ 5 ವರ್ಷದ 432 ಮಕ್ಕಳು ಹಾಗೂ 1,211 ಗರ್ಭಿಣಿಯರನ್ನು ಗುರುತಿಸಲಾಗಿದೆ. 900 ವಿಶೇಷ ಲಸಿಕಾ ಕೇಂದ್ರಗಳ ಮೂಲಕ ಲಸಿಕೆ ನೀಡಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಆ.6ರಂದು ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ



ಮೈಸೂರು, ಆ. 2-ಮೈಸೂರಿನ ಮಾ ಫೌಂಡೇಷನ್ ವತಿಯಿಂದ ಆ. 6 ರಂದು ಬೆಳಗ್ಗೆ 10.30 ರಿಂದ 12.30 ರವರೆಗೆ ಶಾರದಾದೇವಿನಗರದ ವೃತ್ತದ ಬಳಿಯಿರುವ ನಿವೇದಿತಾ ನಗರದ ಉದ್ಯಾನವನದಲ್ಲಿ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. 6 ರಿಂದ 8, 9 ರಿಂದ 11, 12ರಿಂದ 14ರ ವಯೋಮಾನದವರಿಗೆ ಮೂರು ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಸ್ಪರ್ಧಿಗಳಿಗೆ ಡ್ರಾಯಿಂಗ್ ಹಾಳೆಗಳನ್ನು ಫೌಂಡೇಷನ್ ವತಿಯಿಂದ ನೀಡಲಾಗುವುದು. ಚಿತ್ರ ರಚನೆಗೆ ಅಗತ್ಯವಾದ ಇತರೆ ಸಾಮಗ್ರಿಗಳನ್ನು ಸ್ಪರ್ಧಿಗಳೇ ತರಬೇಕು. ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ಫೌಂಡೇಷನ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಮೊ. 91486 01212, 73531 04142, 91086 80534 ಸಂಪರ್ಕಿಸಬಹುದು.

ಆ.5ರಂದು ಮೆಲ್ಲುಸಿರೇ ಸವಿಗಾನ ಸಂಗೀತ ಸಂಜೆ

ಮೈಸೂರು, ಆ.2(ಜಿಎ)-ಮೈಸೂರಿನ ವಿವಿ ಮೊಹಲ್ಲದ ಭಾರತೀ ಸ್ತ್ರೀ ಸಮಾಜದ ಹಳೆ ವಿದ್ಯಾರ್ಥಿ ವೃಂದದಿಂದ ಆ.5ರಂದು ಮೆಲ್ಲುಸಿರೇ ಸವಿಗಾನ ಸಂಗೀತ ಸಂಜೆ ಆಯೋಜಿಸಲಾಗಿದೆ ಎಂದು ಹಳೆ ವಿದ್ಯಾರ್ಥಿ ರಾಘವ್ ಖರೆ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀ ಸ್ತ್ರೀ ಸಮಾಜದಲ್ಲಿ 1969 ರಿಂದ 75ರ ಅವಧಿಯಲ್ಲಿ ನಾವೆಲ್ಲರೂ ಏಳನೇ ತರಗತಿವರೆಗೂ ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ನಡೆಸಿದ್ದೇವು, ಮತ್ತೊಮ್ಮೆ ನಾವೆಲ್ಲರೂ ಒಗ್ಗೂಡಲು ಈ ಸಂಗೀತ ಸಂಜೆಯನ್ನು ಏರ್ಪಡಿಸಲಾಗಿದ್ದು, ಅಂದು ಸಂಜೆ 5.30ಕ್ಕೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಕಾರ್ಯಕ್ರಮ ಜರುಗಲಿದೆ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಚಿತ್ರಗೀತೆ ಮತ್ತು ಭಾವಗೀತೆಯನ್ನು ಗಾಯಕರಾದ ಡಾ.ಎ.ಡಿ.ಶ್ರೀನಿವಾಸ್, ವಿಜಯ್‌ಅರಸ್, ಎಸ್.ಎನ್.ಜಯರಾವ್, ಕೆ.ಎನ್.ಪ್ರಭಾಕರ, ಎ.ಎಸ್.ಶ್ರೀಹರಿ ಹಾಗೂ ಗಾಯಕಿಯರಾದ ಹಂಸಿನಿ ಎಸ್.ಕುಮಾರ್, ಲತಾ ವೆಂಕಟೇಶ್, ಡಾ.ಎಸ್.ಪದ್ಮಶ್ರೀ ಮತ್ತು ನಂದಿನಿ ಮೂರ್ತಿ ಹಾಡಿ ರಂಜಿಸಲಿದ್ದಾರೆ.

ಮ್ಯಾಂಡೋಲಿನ್ ವಿದ್ವಾನ್ ಸಿ.ವಿಶ್ವನಾಥ್, ಕೀಬೋರ್ಡ್ ವಿದ್ವಾನ್ ಷಣ್ಮುಖ ಸಜ್ಜ, ತಬಲ ವಿದ್ವಾನ್ ರಘು, ರಿದಂ ಪ್ಯಾಡ್ ವಿದ್ವಾನ್ ರಾಘವೇಂದ್ರ ಪ್ರಸಾದ್ ಮತ್ತು ಡೋಲಕ್ ಮೂಲಕ ವಿದ್ವಾನ್ ಇಂದು ಶೇಖರ್ ಸಾಥ್ ನೀಡಲಿದ್ದಾರೆ ಎಂದು ತಿಳಿಸಿದರು. ಈ ಸಂಗೀತ ಸಂಜೆ ಮುಖ್ಯ ಉದ್ದೇಶ ಭಾರತೀ ಸ್ತ್ರೀ ಸಮಾಜದ ವಿದ್ಯಾಭ್ಯಾಸ ಮಾಡಿದ ಎಲ್ಲಾ ಹಳೆಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ನಂತರ ಎಲ್ಲರೂ ಸೇರಿ ಶಾಲೆಯನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿದ್ದೇವೆ. ಹೆಚ್ಚಿನ ಮಾಹಿತಿಗೆ 9845111038 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಡಿ.ಶ್ರೀನಿವಾಸನ್, ಜಿ.ವಿ.ಶ್ರೀನಿವಾಸ ದತ್ತ, ಕೆ.ಎನ್.ಪ್ರಭಾಕರ ಮತ್ತು ಹೆಚ್.ಆರ್.ವೆಂಕಟೇಶ್ ಉಪಸ್ಥಿತರಿದ್ದರು.

ಶಿಕ್ಷಣದ ಜೊತೆಗೆ ನೈತಿಕ, ಮಾನವೀಯ ಮೌಲ್ಯ ರೂಢಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಿವಿಮಾತು



ಮೈಸೂರು, ಆ. 2- ಶ್ರೀ ಚಾಮುಂಡೇಶ್ವರಿ ಮತ್ತು ಕರುಮಾರಿಯಮ್ಮನವರ 93ನೇ ವರ್ಷದ ಕರಗ ಮಹೋತ್ಸವದ ಹಿನ್ನೆಲೆ ವಿದ್ಯಾರಣ್ಯಪುರಂನ ಕರುಮಾರಿಯಮ್ಮ ದೇವಸ್ಥಾನದ ಸಮುದಾಯ ಭವನದಲ್ಲಿ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿತ್ತು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿ, ನಾವು ಈಗ ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಶ್ರಮ ಇಲ್ಲದೆ ಯಾವುದು ಸಹ ದಕ್ಕುವುದಿಲ್ಲ. ಹಾಗಾಗಿ ಅದೃಷ್ಟಗಳ ಮೇಲೆ ನಂಬಿಕೆ ಇಡದೆ ಪ್ರಯತ್ನದ ಮೇಲೆ ಹೆಚ್ಚು ಗಮನ ಹರಿಸಬೇಕು. ಆಗ ಮಾತ್ರ ಯಶಸ್ಸಿನ ಬಾಗಿಲು ತಟ್ಟಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರತೀ ವರ್ಷವೂ ಕರುಮಾರಿಯಮ್ಮ ದೇವಸ್ಥಾನದ ಟ್ರಸ್ಟ್ ಜನಪರ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುವ ಮೂಲಕ ಸತ್ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ. ಇಲ್ಲಿ ಆಯೋಜಿಸಿರುವ ಆರೋಗ್ಯ ತಪಾಸಣೆ ಶಿಬಿರಗಳು, ಪ್ರತಿಭಾ ಪುರಸ್ಕಾರಗಳು, ಅನ್ನದಾಸೋಹ, ಪೂಜೆ ಪುರಸ್ಕಾರ ಎಲ್ಲಾ ಕಾರ್ಯಕ್ರಮಗಳಿಗೂ ನಾನು ಭಾಗವಹಿಸಿದ್ದೇನೆ.

ಅತ್ಯುತ್ತಮ ಕಾರ್ಯಕ್ರಮಗಳು ಈ ಟ್ರಸ್ಟ್‌ನಿಂದ ಸಂಪನ್ನಗೊಂಡಿವೆ. ಇವತ್ತು ಯಾವ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಪಡೆದಿದ್ದೀರೋ ಮುಂದಿನ ದಿನಗಳಲ್ಲಿ ನಿಮ್ಮನ್ನು ಗುರುತಿಸಿದ ಸಂಸ್ಥೆ, ಸಮುದಾಯವನ್ನು ನೆನೆದು ಅದರ ಶ್ರೇಯೋಭಿವೃದ್ಧಿಗೆ ಶ್ರಮಿಸಿ ನೀವು ಕೂಡ ಇದೇ ರೀತಿ ಬೇರೆಯವರಿಗೆ ಪ್ರೋತ್ಸಾಹಿಸುವಂತಹ ಕೆಲಸ ಮಾಡಬೇಕು.

ಆಗ ನೀವು ಸಮಾಜಕ್ಕೆ ಮಾದರಿಯಾಗುತ್ತೀರಿ. ಕೆಲವರು ತಾವು ಬೆಳೆಯಲು ಸಮಾಜವನ್ನು ಮೆಟ್ಟಿಲಾಗಿ ಬಳಸಿಕೊಂಡು ನಂತರದಲ್ಲಿ ತಾನು ಮತ್ತು ತನ್ನ ಕುಟುಂಬದ ಸೌಖ್ಯವನ್ನು ಬಯಸಿ ಸ್ವಾರ್ಥರಾಗುತ್ತಾರೆ. ಅಂತಹ ಕೆಲಸ ನೀವುಗಳು ಮಾಡದೇ ಸಮಾಜದ ಏಳಿಗೆಗೆ ದುಡಿಯಿರಿ. ಎತ್ತರಕ್ಕೆ ಬೆಳೆದು ಉತ್ತಮ ಸತ್ಪ್ರಜೆಗಳಾಗಬೇಕು. ಶಿಕ್ಷಣ ಎಂದರೆ ಕೇವಲ ಅಂಕಗಳಿಕೆಗೆ ಸೀಮಿತವಾಗದೆ ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಈ ದೇಶದ ಮಾದರಿ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯ ಎಂದು ತಿಳಿಸಿದರು.

ಹಿರಿಯ ಬ್ಯೂಟಿಷಿಯನ್ ವೃತ್ತಿ ಸಾಧಕರಿಗೆ ಸನ್ಮಾನ

ಮೈಸೂರು, ಆ.2-ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಶಾಲೆಯ ಆವರಣದಲ್ಲಿ ಶ್ರೀ ದುರ್ಗಾ ಫೌಂಡೇಶನ್ ಟ್ರಸ್ಟ್ ಹಾಗೂ ಶಿವಮೊಗ್ಗದ ಬ್ಯೂಟಿಷಿಯನ್ ಅಸೋಸಿಯೇಷನ್ ವತಿಯಿಂದ ವಿಶ್ವ ಬ್ಯೂಟಿಷಿಯನ್ ದಿನದ ಅಂಗವಾಗಿ ಹಿರಿಯ ಬ್ಯೂಟಿಷಿಯನ್ ವೃತ್ತಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಾಗೂ ಶಾಲಾ ಮಕ್ಕಳಿಗೆ ಓದುವ ಸಾಮಗ್ರಿಗಳು ವಿತರಣೆ ಕಾರ್ಯಕ್ರಮವನ್ನು ಆ. 3 ರಂದು ಬೆಳಗ್ಗೆ 11.30 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಹೆಚ್ ಪವಿತ್ರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗವಾಲ ಡಾ. ಶೋಭರಾಣಿ, ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷೆ ವೇದಾ ರೈ, ಶಿವಮೊಗ್ಗ ಬ್ಯೂಟಿಷಿಯನ್ ಅಸೋಸಿಯೇಷನ್ ಅಧ್ಯಕ್ಷೆ ಅಶ್ವಿನಿ, ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಉಪಾಧ್ಯಕ್ಷೆ ಅಹಲ್ಯ, ಟ್ರಾಫಿಕ್ ವಾರ್ಡನ್ ಮಾಲಿನಿ, ಸುಗುಣ ಇನ್ನಿತರರು ಭಾಗವಹಿಸಲಿದ್ದಾರೆ.

ಇಂಟರ್ ಡೈರೆಕ್ಟೊರೇಟ್ ಸ್ಪೋರ್ಟ್ಸ್ ಶೂಟಿಂಗ್ ಸ್ಪರ್ಧೆ ವಿಜೇತರು



ಮೈಸೂರು,ಆ.2-ಕೇರಳದಲ್ಲಿ ಜು. 3ರಿಂದ 16ರವರೆಗೆ ನಡೆದ ಇಂಟರ್ ಡೈರೆಕ್ಟೊರೇಟ್ ಸ್ಪೋರ್ಟ್ಸ್ ಶೂಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಮೈಸೂರಿನ 14 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕೆಡೆಟ್‌ಗಳಾದ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪಿ.ಡಿ.ಚಂಗಪ್ಪ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಕೆ.ಎಂ.ರಕ್ಷಿತಾ, ಎಕ್ಸೆಲ್ ಪಬ್ಲಿಕ್ ಸ್ಕೂಲಿನ ಸವಿಕಿರಣ್ ಹೊಲ್ಲ, ಲಯನ್ ಸೇವಾನಿಕೇತನದ ಕೆ.ತೇಜಸ್ವಿನಿ, ಮಂಡ್ಯ ಪಿಇಎಸ್ ಕಾಲೇಜಿನ ಮೊಹಮದ್ ಆಫ್ತಾಬ್ ಅವರನ್ನು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸುತ್ತೂರು ಶ್ರೀಗಳು ಅಭಿನಂದಿಸಿದರು. 14 ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್ ಕರ್ನಲ್ ಮನೀಷ್ ಪ್ರಸಾದ್, ಸುಬೇದಾರ್ ಮೇಜರ್ ಗೋವಿಂ ದಪ್ಪ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ.ವಿಜಯೇಂದ್ರಕುಮಾರ್, ಎನ್‌ಸಿಸಿ ಅಧಿಕಾರಿ ಡಾ.ವಿನಯ್‌ಕುಮಾರ್ ಇದ್ದರು.

ವಂದೇ ಭಾರತ್ ರೈಲಿನ ಒಳಗಡೆ ಲಗ್ಗೆ ಇಡಲು ನಂದಿನಿ ತಯಾರಿ

ಬೆಂಗಳೂರು, ಆ.2- ಪ್ರಧಾನಿ ನರೇಂದ್ರ ಮೋದಿ ಕನಸಿನ ವಂದೇ ಭಾರತ್ ರೈಲಿನ ಒಳಗಡೆ ನಂದಿನಿ ಲಗ್ಗೆ ಇಡಲು ಸಜ್ಜಾಗಿದೆ. ಕರ್ನಾಟಕ ಚುನಾವಣೆಯ ಸಮಯದಲ್ಲಿ ನಂದಿನಿ ವರ್ಸಸ್ ಅಮುಲ್ (Amul) ವಿಚಾರ ಜೋರು ಚರ್ಚೆಯಾಗಿತ್ತು. ನಂದಿನಿಯ ಮಾರುಕಟ್ಟೆಯನ್ನು ಅಮುಲ್ ಕಬಳಿಸಲು ಮುಂದಾಗಿದೆ ಎಂದು ಬಿಂಬಿಸಲಾಗುತ್ತಿತ್ತು. ಆದರೆ ಈಗ ನಂದಿನಿ ಉತ್ಪನ್ನಗಳನ್ನು ವಂದೇ ಭಾರತ್ ರೈಲಿನಲ್ಲಿ ವಿತರಿಸಲು ಕೆಎಂಎಫ್ ಚಿಂತನೆ ನಡೆಸಿದೆ.

ಸದ್ಯ ರಾಜ್ಯದಲ್ಲಿ ಪ್ರತಿ ದಿನ ಸುಮಾರು 75-85 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದ್ದು, ಈ ಪೈಕಿ 8ರಿಂದ 9 ಲಕ್ಷ ಲೀಟರ್ ಹಾಲಿನಿಂದ ಇತರೆ ಉತ್ಪನ್ನಗಳ ತಯಾರಿ ನಡೆಸಲಾಗುತ್ತಿದೆ. ಉತ್ಪನ್ನಗಳ ಬಳಕೆಯ ಹಾಲಿನ ಪ್ರಮಾಣ ಏರಿಸಲು ಚಿಂತಿಸಿರುವ ಕೆಎಂಎಫ್ 9 ರಿಂದ 11 ಅಥವಾ 12 ಲಕ್ಷ ಲೀಟರ್ ಹಾಲನ್ನು ಬಳಸಲು ಚಿಂತನೆ ನಡೆಸುತ್ತಿದೆ. ಲಸ್ಸಿ, ಮಜ್ಜಿಗೆ, ಪೇಡಾ, ನಂದಿನಿ ಕೋಲ್ಡ್ ಹಾಲು, ಫ್ಲೇವರ್ಡ್ ಡ್ರಿಂಕ್ ಸೇರಿದಂತೆ ನಂದಿನ ಉತ್ಪನ್ನಗಳ ಮಾರಾಟಕ್ಕೆ ಕೆಎಂಎಫ್ ಪ್ಲ್ಯಾನ್ ಮಾಡಿದ್ದು ಈ ಸಂಬಂಧ ಸವಿಸ್ತಾರ ಪ್ರಸ್ತಾವನೆ ಸಲ್ಲಿಸಲು ಮುಂದಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ಮಾಡುವಂತಿಲ್ಲ



ಮೈಸೂರು, ಆ.2(ಜಿಎ)- ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ಮಾಡುವಂತಿಲ್ಲ. ಬಳಕೆ ಕಂಡು ಬಂದರೆ ದಂಡ ವಿಧಿಸಿ, ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತ್ರೈಮಾಸಿಕ ಸಭೆಯಲ್ಲಿ ಮಾತನಾಡಿದ ಅವರು, ಟೀ ಅಂಗಡಿಗಳು ಹಾಗೂ ಕಾಫಿ ಶಾಪ್‌ಗಳಲ್ಲಿ ಸಿಗರೇಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಅಲ್ಲಿ ಅದನ್ನು ಬಳಸಲಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಟೀ ಅಂಗಡಿ ಮಾಲೀಕರಿಗೆ ಈ ಕುರಿತು ಅರಿವು ಮೂಡಿಸಬೇಕು. ಆದರೂ ಕಾನೂನು ಪಾಲನೆ ಮಾಡದೇ ಇದ್ದರೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಸಿಗರೇಟ್ ಹಾಗೂ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವವರು ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಯ ವತಿಯಿಂದ ಅನುಮತಿ ಪಡೆದುಕೊಳ್ಳಬೇಕು. ಸ್ಮೋಕಿಂಗ್ ಬಡ್ಸ್‌ಗಳನ್ನು ಡಸ್ಟ್ ಬಿನ್‌ಗಳಲ್ಲಿಯೇ ಹಾಕಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಹಾಕಬಾರದು. ಸಾರ್ವಜನಿಕ ಸ್ಥಳಗಳಲ್ಲಿ ಹಾಕಿದರೆ ದಂಡ ವಿಧಿಸಬೇಕು. ಈ ಸಂಬಂಧ ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಕನಿಷ್ಠ 10 ಕೇಸ್‌ಗಳನ್ನು ದಾಖಲಿಸಬೇಕು ಎಂದು ಸೂಚನೆ ನೀಡಿದರು. ಶಾಲಾ ಕಾಲೇಜುಗಳ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಸೇವನೆಯನ್ನು ಮಾಡುವಂತಿಲ್ಲ. ಶಿಕ್ಷಣ ಇಲಾಖೆಯ ವತಿಯಿಂದ ಪ್ರೌಢಶಾಲೆಗಳು ಹಾಗೂ ಕಾಲೇಜುಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿ, ತಂಬಾಕು ಮುಕ್ತ ವಲಯ ನಾಮಫಲಕಗಳನ್ನು ಅಳವಡಿಸಿ ಹಾಗೂ ಗೋಡೆ ಬರಹಗಳನ್ನು ಬರೆಯಬೇಕು. ಶಾಲಾ ಕಾಲೇಜುಗಳನ್ನು ತಂಬಾಕು ಮುಕ್ತ ವಲಯಗಳಾಗಿ ಮಾಡಬೇಕು. ಶಾಲಾ ಕಾಲೇಜು ಹಂತದಲ್ಲಿಯೇ ಮಕ್ಕಳು ತಂಬಾಕು ಸೇವನೆ ಮಾಡದಂತೆ ತಡೆದರೆ ಮುಂದೆ ಅವರು ತಂಬಾಕು ಉತ್ಪನ್ನಗಳ ಸೇವನೆ ಮಾಡುವುದಿಲ್ಲ ಎಂದು ತಿಳಿಸಿದರು. ಸಭೆಯಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವ್ ಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗಿಯಾಗಿದ್ದರು.

ಮೈಸೂರು ಮಿತ್ರ

ಗುರುವಾರ 3 ಆಗಸ್ಟ್ 2023

ಕುಪ್ಯ ಗ್ರಾಮ ಪಂಚಾಯಿತಿ ಕಾಂಗ್ರೆಸ್ ಪಾಲು

ಅಧ್ಯಕ್ಷೆಯಾಗಿ ಯಶೋಧ, ಉಪಾಧ್ಯಕ್ಷೆಯಾಗಿ ಶಿವಮ್ಮ ಆಯ್ಕೆ



ತಿ.ನರಸೀಪುರ, ಆ.2– ತಾಲೂಕಿನ ಕುಪ್ಯ ಗ್ರಾಮ ಪಂಚಾಯಿತಿಯ ಆಡಳಿತ ಕಾಂಗ್ರೆಸ್ ಪಕ್ಷದ ವಶವಾಗಿದ್ದು, ನೂತನ ಅಧ್ಯಕ್ಷರಾಗಿ ಯಶೋಧ, ಉಪಾಧ್ಯಕ್ಷೆಯಾಗಿ ಶಿವಮ್ಮ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಗೊಂಡರು.

ತಾಲೂಕಿನ ಕುಪ್ಯ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಗೆ ನಿಗದಿಯಾಗಿದ್ದ ಚುನಾವಣೆಯಲ್ಲಿ ಪ.ಜಾತಿ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಯಶೋಧ ಹಾಗೂ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಶಿವಮ್ಮ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು.

ಪಂಚಾಯಿತಿಯ ಒಟ್ಟು 12 ಮಂದಿ ಚುನಾಯಿತ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರು. ಚುನಾವಣಾಧಿಕಾರಿಯಾಗಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣ ಕಾರ್ಯನಿರ್ವಹಿಸಿದರು.

ಅವಿರೋಧ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಪಂಚಾಯತಿ ಮುಂಭಾಗ ನೆರೆದಿದ್ದ ನೂರಾರು ಮಂದಿ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿಯನ್ನು ವಿತರಿಸಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷೆ ಯಶೋಧ ಮಾತನಾಡಿ ಸ್ಥಳೀಯ ಮುಖಂಡರು ಮತ್ತು ಸದಸ್ಯರೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಮದ ಅಭಿವೃದ್ಧಿಗೆ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾರ್ಗದರ್ಶನದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ ಅನುದಾನವನ್ನು ತಂದು ದುಡಿಯುತ್ತೇನೆ. ಗ್ರಾಮೀಣ ಪ್ರದೇಶಗಳ ಜನರಿಗೆ ಅಗತ್ಯ ಮೂಲ ಸೌಕರ್ಯ ಹಾಗೂ ಸರ್ಕಾರದ ಸೌಲಭ್ಯವನ್ನು ತಲುಪಿಸುವಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತೇನೆ ಎಂದು ತಿಳಿಸಿದರು.

ನಿಕಟಪೂರ್ವ ಅಧ್ಯಕ್ಷ ಎಸ್.ರಾಘವೇಂದ್ರ ಮಾತನಾಡಿ ಸದಸ್ಯರೆಲ್ಲರ ಒಗ್ಗಟ್ಟಿನ ಬಲದಿಂದ ಪಂಚಾಯ್ತಿಯ ವರಿಷ್ಠರ ಆಯ್ಕೆ ಅವಿರೋಧವಾಗಿ ನಡೆದಿದೆ ಅಧ್ಯಕ್ಷರ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಪಂಚಾಯ್ತಿಯ ಎಲ್ಲ ಸದಸ್ಯರ ಸಹಕಾರ ಅಧ್ಯಕ್ಷ–ಉಪಾಧ್ಯಕ್ಷರಿಗಿದ್ದು, ಅವರು ಪಂಚಾಯ್ತಿ ವ್ಯಾಪ್ತಿಗೊಳಪಡುವ ಎಲ್ಲ ಗ್ರಾಮಗಳಿಗೆ ಸರ್ಕಾರದಿಂದ ದೊರಕುವ ಅನುದಾನವನ್ನು ಸಮಾನವಾಗಿ ಹಂಚಿ ಅಭಿವೃದ್ಧಿಗೆ ಮುಂದಾಗಬೇಕೆಂದು ಸಲಹೆ ನೀಡಿದರು. ಅಧ್ಯಕ್ಷರು ಅಭಿವೃದ್ಧಿ ಪರವಾಗಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಸದಸ್ಯರು ಬದ್ಧರಾಗಿದ್ದು, ಹೆಚ್ಚಿನ ಅನುದಾನ ತರಲು ಅವರಿಗೆ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

ಭಾಗ್ಯಮ್ಮ, ಎನ್.ಗೋವಿಂದ, ಗವಿ ಸಿದ್ದಯ್ಯ, ನಂದಿನಿ, ಕೆ.ಸಿ.ಪುಟ್ಟರಾಜು, ಪುಷ್ಪ, ಪಿ.ಪದ್ಮ, ಮಂಜುಳ, ಮಹದೇವಶೆಟ್ಟಿ, ಜಿಪಂ ಮಾಜಿ ಸದಸ್ಯ ಕೆ.ಮಹದೇವು, ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್ ಬಾಬು, ಕೆ.ಬಿ.ಪ್ರಭಾಕರ್, ಪಿ.ಶಿವರಾಂ, ಎಸ್.ಶಿವರಾಂ, ಎ.ಪಿ.ಮಾದೇಗೌಡ, ಜೆ.ಶಿವರಾಂ, ಎಂ.ಮಹದೇವಯ್ಯ, ಕೆ.ಶಿವಮಲ್ಲು, ದಯಾನಂದ, ನವೀನ, ಎಸ್‌ಡಿಎಂಸಿ ಅಧ್ಯಕ್ಷ ಉಮೇಶ್, ದೊಡ್ಡನಿಂಗಯ್ಯ, ನಿಂಗರಾಜು, ಮಹದೇವಯ್ಯ, ವೆಂಕಟಪ್ಪ, ಗೊಬ್ರ ನಾಗೇಶ್, ಕಾಳಪ್ಪ, ಅನಿಲ್ ಕುಮಾರ್, ಹರೀಶ್, ಗಾರೆ ಸೀನಪ್ಪ, ರಾಮಣ್ಣ, ಮಹದೇವಸ್ವಾಮಿ, ರಂಗಸ್ವಾಮಿ, ರಾಮಯ್ಯ, ಮಾಜಿ ಅಧ್ಯಕ್ಷ ಮಹದೇವು, ನಾಗರಾಜು, ನಾಗೇಶ್ ಸೇರಿದಂತೆ ಗ್ರಾಮಸ್ಥರು ಮುಖಂಡರು ಹಾಜರಿದ್ದರು.

ಹರದನಹಳ್ಳಿ ಗ್ರಾಪಂಗೆ ಲಾಟರಿ ಮೂಲಕ ಒಲಿದ ಅಧ್ಯಕ್ಷ ಸ್ಥಾನ



ಮಲ್ಲುಂಡಿ: ನಂಜನಗೂಡು ತಾಲೂಕಿನ ಹರದನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನ ಲಾಟರಿ ಮೂಲಕ ಒಲಿದಿದೆ.

ಗ್ರಾಪಂ ಕಚೇರಿಯಲ್ಲಿ ಬುಧವಾರ ನಡೆದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಚಿನ್ನಮ್ಮ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಚಿಕ್ಕತಾಯಮ್ಮ ನಾಮಪತ್ರ ಸಲ್ಲಿಸಿದರು. 20 ಸದಸ್ಯರ ಬಲ ಹೊಂದಿರುವ ಹರದನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಚಿನ್ನಮ್ಮ 10, ಚಿಕ್ಕತಾಯಮ್ಮ 10 ಮತ ಪಡೆದರು. ಇಬ್ಬರು ಸಮ ಮತ ಪಡೆದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಕೃಷ್ಣ ಲಾಟರಿ ಮೂಲಕ ಆಯ್ಕೆ ಮಾಡಿದರು. ಲಾಟರಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಚಿನ್ನಮ್ಮ ಆಯ್ಕೆಯಾಗಿ ಅಧ್ಯಕ್ಷ ಸ್ಥಾನವನ್ನು ತಮ್ಮದಾಗಿಸಿಕೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಚಿಕ್ಕನಾಯಕ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರಾಜೇಂದ್ರ ನಾಮಪತ್ರ ಸಲ್ಲಿಸಿದರು. ಚಿಕ್ಕನಾಯಕ 11 ಮತ ಪಡೆದು ಜಯಶೀಲರಾದರೆ, ಪ್ರತಿಸ್ಪರ್ಧಿ ರಾಜೇಂದ್ರ 9 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಕೃಷ್ಣ ಅವರು ಇವರ ಆಯ್ಕೆಯನ್ನು ಘೋಷಣೆ ಮಾಡಿದರು. ಈ ಮೂಲಕ ಗ್ರಾಪಂ ಬಿಜೆಪಿ ವಶವಾಯಿತು. ಗ್ರಾಪಂ ಮಾಜಿ ಅಧ್ಯಕ್ಷ ಕೆ.ಸುಂದ್ರಪ್ಪ, ಮಹೇಶ್, ಸದಸ್ಯರಾದ ಬಸಪ್ಪ, ಲಕ್ಷ್ಮಮ್ಮ, ಇಂದ್ರಮ್ಮ, ಶಿವಮ್ಮ, ವೈರ್ಮುಡಿ, ನಾಗನಾಯಕ, ಮುಖಂಡರಾದ ಕೆಂಡಗಣ್ಣಪ್ಪ, ಮಹದೇವು ಸೇರಿದಂತೆ ಪ್ರಮುಖರು ಹಾಜರಿದ್ದರು.

ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷ ಸ್ಥಾನ ಕಾಂಗ್ರೆಸ್, ಉಪಾಧ್ಯಕ್ಷ ಸ್ಥಾನ ಜೆಡಿಎಸ್ ಪಾಲು



ಭೇರ್ಯ, ಅ.2– ಹೊಸ ಅಗ್ರಹಾರ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾದ ಸೌಮ್ಯ ಶಿವಕುಮಾರ್, ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಆಶಾ ರಾಣಿ ಮಹದೇವ್ ಆಯ್ಕೆಯಾದರು.

ಎರಡನೇ ಅವದಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಹಾಗೂ ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ಸೌಮ್ಯ ಶಿವಕುಮಾರ್ ಮತ್ತು ಪೂರ್ಣಿಮಾ ನಾಮಪತ್ರ ಸಲ್ಲಿಸಿದರೇ, ಉಪಾಧ್ಯಕ್ಷ ಸ್ಥಾನಕ್ಕೆ ಬೊಮ್ಮನಹಳ್ಳಿ ಸದಸ್ಯೆ ಆಶಾರಾಣಿ ಮಹದೇವ್ ಒಬ್ಬರೇ ನಾಮಪತ್ರ ಸಲ್ಲಸಿದ್ದರಿಂದ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷರ ಚುನಾವಣೆಯಲ್ಲಿ ಸೌಮ್ಯ ಶಿವಕುಮಾರ್ 8 ಮತಗಳನ್ನು ಪಡೆದು ಅಧ್ಯಕ್ಷೆಯಾಗಿ ಆಯ್ಕೆಯಾದರೇ ಪ್ರತಿಸ್ಪರ್ಧಿ ಪೂರ್ಣಿಮಾ 5 ಮತ ಪಡೆದು ಪರಾಭವಗೊಂಡರು ಎಂದು ಚುನಾವಣಾಧಿಕಾರಿ ಬಿಇಓ ಕೃಷ್ಣಪ್ಪ ಪ್ರಕಟಿಸಿದರು. ಪಿಡಿಓ ಭಾಸ್ಕರ್ ಸಹಕರಿಸಿದರು.

ನೂತನ ಅಧ್ಯಕ್ಷೆ ಸೌಮ್ಯಶಿಮಕುಮಾರ್ ಅವನ್ನು ಕಾಂಗ್ರೆಸ್ ಮುಖಂಡ ಸಿ.ಪಿ.ರಮೇಶ್ ಕುಮಾರ್, ತಾ.ಪಂ ಮಾಜಿ ಅಧ್ಯಕ್ಷ ಕೆ.ಪಿ.ಯೋಗೇಶ್ ಅವರು ಸೇಬಿನ ಹಾರ ಹಾಕಿ ಅಭಿನಂದಿಸಿದರು. ಕಾಂಗ್ರೆಸ್ ಪಕ್ಷದ ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಣೆ ಮಾಡಿದರು.

ಚುನಾವಣೆಯಲ್ಲಿ ಸದಸ್ಯರಾದ ಡಿ.ಎಸ್.ಯೋಗೇಶ್, ಹೆಚ್.ಎಂ.ರಾಮಚಂದ್ರ, ಮಂಜೇಗೌಡ, ಮಲ್ಲಿಕಾರ್ಜುನ, ಶೇಖರ್, ಸುಕನ್ಯ, ಮಹದೇವಮ್ಮ, ಬೇಬಿಮಹೇಶ್, ಜಯಲಕ್ಷ್ಮಿ, ಪುಷ್ಪಾಜಯರಾಂ, ವಿ.ಪೂರ್ಣಿಮಾ ಭಾಗವಹಿಸಿದರು.

ಕಾಂಗ್ರೆಸ್ ಪಕ್ಷದ ಮುಖಂಡರಾದ ಬಿ.ಟಿ.ಮೋಹನ, ಲಕ್ಷ್ಮಣ, ಬುಡಿಗೌಡ, ಆಟೋಕುಮಾರ, ಲೋಕೇಶ್, ಸಂತೋಷ ಸೇರಿದಂತೆ ಅನೇಕರು ಇದ್ದರು.

ಕಗ್ಗಲಿಪುರ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ,ಆ.2 – ತಾಲೂಕಿನ ಕಗ್ಗಲೀಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್.ರಾಜೇಶ್ ಅವಿರೋಧವಾಗಿ ಆಯ್ಕೆಗೊಂಡರೆ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಾಗೇಂದ್ರ ಜಯಗಳಿಸಿದರು.

ಗ್ರಾಮದ ಡೈರಿ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಆರ್.ರಾಜೇಶ್ ಅವರೊಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ತ್ರಿವೇಣಿ ಹಾಗೂ ನಾಗೇಂದ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಆಯ್ಕೆಯನ್ನು ಗುಪ್ತ ಮತದಾನ ಮಾಡುವ ನಿರ್ಧಾರ ಕೈಗೊಂಡರು. ಆನಂತರ ನಡೆದ ಚುನಾವಣೆಯಲ್ಲಿ ನಾಗೇಂದ್ರ 5 ಮತಗಳನ್ನು ಪಡೆದು 4 ಮತ ಪಡೆದ ತ್ರಿವೇಣಿ ಅವರನ್ನು ಒಂದು ಮತಗಳ ಅಂತರದಿಂದ ಪರಾಭವಗೊಳಿಸಿದರು. ಸಹಕಾರ ಸಂಘದ ಎಲ್ಲ 9 ಮಂದಿ ಸದಸ್ಯರು ಚುನಾವಣೆಯಲ್ಲಿ ಹಾಜರಿದ್ದು ಮತದಾನದಲ್ಲಿ ಪಾಲ್ಗೊಂಡರು. ಸಹಕಾರ ಇಲಾಖೆಯ ಸಹಾಯಕ ಅಭಿವೃದ್ಧಿ ಅಧಿಕಾರಿ ರಾಜಣ್ಣ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು.ನೂತನವಾಗಿ ಆಯ್ಕೆಯಾದ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಕಗ್ಗಲೀಪುರ ಗ್ರಾಮದಲ್ಲಿ ತಾಲೂಕಿನಲ್ಲಿಯೇ ಪ್ರಪ್ರಥಮವಾಗಿ ಹಾಲು ಉತ್ಪಾದಕರ ಸಹಕಾರ ಸಂಘ ನಿರ್ಮಿಸಲು ದಿ.ಎಸ್.ಸಿದ್ದೇಗೌಡ ಹಾಗೂ ನಮ್ಮ ತಂದೆ ಕರಿಗೌಡರ ಪರಿಶ್ರಮವನ್ನು ಇಂದು ನೆನಪಿಸಿಕೊಳ್ಳಬೇಕಿದೆ. 40 ವರ್ಷಗಳ ಹಿಂದೆಯೇ ಆರಂಭಗೊಂಡ ಗ್ರಾಮದ ಡೈರಿಗೆ ಸುತ್ತಮುತ್ತಲ ಗ್ರಾಮಗಳಿಂದ ಹಾಲು ಉತ್ಪಾದಕರು ಹಾಲು ತಂದು ಹಾಕುತ್ತಿದ್ದರು. ಹಾಗಾಗಿ ಇಂದಿಗೂ ಸಹ ಗ್ರಾಮದ ಡೈರಿ ತಾಲೂಕಿನಲ್ಲಿ ಉತ್ತಮಡೈರಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಸಹಕಾರ ಸಂಘದ ನಿರ್ದೇಶಕರಾದ ಕೃಷ್ಣ, ಚಿಕ್ಕಸ್ವಾಮಿ, ನಾಗರಾಜು, ನಾಗೇಂದ್ರ ಎನ್.ಮಹದೇವಸ್ವಾಮಿ, ಕೆ.ಎಂ.ಮಂಜುನಾಥ್, ಆರ್.ರಾಜೇಶ್, ತ್ರಿವೇಣಿ, ಸುಜಾತ,ಗ್ರಾಮದ ಮುಖಂಡರಾದ ನಾಗರಾಜು, ಬೋರೇಗೌಡ, ವರದರಾಜು, ಗಿರೀಶ್‌ಗೌಡ, ಕಾಲಿಮಂಜು, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಸಿದ್ದರಾಮು, ಸಂಘದ ಕಾರ್ಯದರ್ಶಿ ರವಿ ಇದ್ದರು.

ಕೊತ್ತೇಗಾಲ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸರಗೂರು: ತಾಲೂಕಿನ ಕೊತ್ತೇಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಸಿ.ಚಲುವಪ್ಪ, ಉಪಾಧ್ಯಕ್ಷರಾಗಿ ವಿಮಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಂಚಾಯಿತಿ ಆವರಣದಲ್ಲಿ ಬುಧವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿ ಸಿ.ಚಲುವಪ್ಪ ಉಪಾಧ್ಯಕ್ಷ ಸ್ಥಾನಕ್ಕೆ ವಿಮಲ ಅವರನ್ನು ಬಿಟ್ಟರೆ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆ ಅಧ್ಯಕ್ಷರಾಗಿ ಸಿ.ಚಲುವಪ್ಪ, ಉಪಾಧ್ಯಕ್ಷರಾಗಿ ವಿಮಲ ಆಯ್ಕೆಯಾದರು.

ನೀರಾವರಿ ಇಲಾಖೆ ಅಧಿಕಾರಿ ಜನಾರ್ಧನ್, ಪಿಡಿಓ ನಾಗೇಂದ್ರ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು. ಸದಸ್ಯರಾದ ಲಕ್ಷ್ಮೀದೇವಿ, ಕೆಆರ್.ಶೋಭಾ, ಚಿಕ್ಕರಾಚಶೆಟ್ಟಿ, ಕೆ.ಮಹದೇವಯ್ಯ, ಗೌರಮ್ಮ, ಕೆಂಪಾಲಮ್ಮ, ಮಹೇಶ್, ಟಿ.ಕುಮಾರ್, ರತ್ನಮ್ಮ, ಸವಿತಾ, ಕಾಂಗ್ರೆಸ್ ಮುಖಂಡರಾದ ಮರದಕಟ್ಟೆ ಬಸವರಾಜು, ಪುಟ್ಟೇಗೌಡ, ಶಂಭುಲಿಂಗನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ಯಜಮಾನ ನಾಗಯ್ಯ, ಮಹದೇವ್, ಸುಂದರ್, ಸಣ್ಣಸ್ವಾಮಿಶೆಟ್ಟಿ, ಸ್ವಾಮಿ, ಚಾಮನಾಯಕ, ಭೀಮನಾಯಕ, ಶಂಕರಪ್ಪ, ಗಣೇಶ್, ಪುಟ್ಟಶೆಟ್ಟಿ, ಮಹೇಶ್, ಸುರೇಶ್, ಚಾಮೇಗೌಡರ ಹುಂಡಿ ಸುರೇಶ್, ಪಂಚಾಯಿತಿ ಸಿಬ್ಬಂದಿಗಳಾದ ನಾಗರಾಜ್, ಸಿದ್ದರಾಜ್, ಗುಂಡುರಾವ್, ಸುನೀಲ್ ಹಾಜರಿದ್ದರು.

ಹೊರಳವಾಡಿ ಗ್ರಾಪಂಗೆ ಬಿಜೆಪಿ ಅಧ್ಯಕ್ಷ, ಕಾಂಗ್ರೆಸ್ ಉಪಾಧ್ಯಕ್ಷ



ನಂಜನಗೂಡು, ಆ.2– ತಾಲೂಕಿನ ಹೊರಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ರಾಜಮ್ಮ, ಉಪಾಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಶಿವಕುಮಾರ್ ಆಯ್ಕೆಯಾಗುವ ಮೂಲಕ ಎರಡು ಪಕ್ಷಗಳು ಅಧಿಕಾರ ಹಂಚಿಕೊಂಡರು.

20 ಸದಸ್ಯ ಬಲವನ್ನು ಹೊಂದಿರುವ ಹೊರಳವಾಡಿ ಗ್ರಾಮ ಪಂಚಾಯಿತಿಯಲ್ಲಿ ಬುಧವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಯಿತು. ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗದಿಗೊಳಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ರಾಜಮ್ಮ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸೌಭಾಗ್ಯ ರಾಮಚಂದ್ರ ನಾಮಪತ್ರ ಸಲ್ಲಿಸಿದ್ದರು. ರಾಜಮ್ಮ 11 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು. ಸೌಭಾಗ್ಯ ರಾಮಚಂದ್ರ 9 ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಮುರುಳಿ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದರು. ಇಬ್ಬರಿಗೂ ತಲಾ 10 ಮತಗಳು ಬಂದ ಕಾರಣ ಲಾಟರಿ ಮೂಲಕ ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶಿವಕುಮಾರ್‌ಗೆ ಲಾಟರಿ ಮೂಲಕ ಅದೃಷ್ಟ ಒಲಿದು ಉಪಾಧ್ಯಕ್ಷರಾಗಿ ನೇಮಕಗೊಂಡರು. ಚುನಾವಣಾಧಿಕಾರಿಯಾಗಿ ತಾಲೂಕು ಯೋಜನಾಧಿಕಾರಿ ಗುರುಮಹದೇವ್, ಕಾರ್ಯನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ರಮೇಶ, ನಾಗರತ್ನ, ಮಹೇಶ್, ರಾಜಮ್ಮ, ನಾಗೇಂದ್ರ, ನವೀನ್ ಕುಮಾರ್, ಶರತ್ ಕುಮಾರ್, ಮಹಾದೇವಮ್ಮ, ಮಲ್ಲೇಗೌಡ, ಮಂಜುಳಾ, ಹೇಮಾವತಿ, ಉಷಾ, ಕಾಳ ಮಾದೇಗೌಡ ಮುಖಂಡರಾದ ರಾಮಚಂದ್ರ, ಸೇರಿದಂತೆ ಗ್ರಾಮಸ್ಥರು, ಪಕ್ಷದ ಕಾರ್ಯಕರ್ತರು, ಹಲವಾರು ಪ್ರಮುಖರು ಇದ್ದರು.

ಚಿಟ್ಟೆನಹಳ್ಳಿ ಗ್ರಾಮ ಪಂಚಾಯತಿ ಕಾಂಗ್ರೆಸ್ ತೆಕ್ಕೆಗೆ

ಪಿರಿಯಾಪಟ್ಟಣ, ಆ.2– 20 ಸದಸ್ಯರ ಬಲವನ್ನು ಹೊಂದಿರುವ ಒಳಗೊಂಡ ಚಿಟ್ಟೆನಹಳ್ಳಿ ಗ್ರಾಮ ಪಂಚಾಯತಿ ಅಧಿಕಾರವನ್ನು ಕಾಂಗ್ರೆಸ್ ತನ್ನದಾಗಿಸಿಕೊಂಡಿದೆ. ಬುಧವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರೂಪ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ 11 ಮತಗಳನ್ನು ಪಡೆದು ಜಯಗಳಿಸಿದರೆ ಉಪಾಧ್ಯಕ್ಷ ಸ್ಥಾನಕ್ಕೆ ಗಣೇಶ್ ನಾಮಪತ್ರ ಸಲ್ಲಿಸಿ 11 ಮತಗಳನ್ನು ಪಡೆದು ಜಯಗಳಿಸಿದರು.

ಅದೇ ರೀತಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸುಧಾರಾಣಿ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ 9 ಮತಗಳನ್ನು ಪಡೆದುಕೊಂಡರೆ ಉಪಾಧ್ಯಕ್ಷ ಸ್ಥಾನಕ್ಕೆ ಗೌರಮ್ಮ ನಾಮಪತ್ರ ಸಲ್ಲಿಸಿ 9 ಮತಗಳನ್ನು ಪಡೆದು ಪರಜಯಗೊಂಡರು. ಈ ಸಂದರ್ಭದಲ್ಲಿ ಮುಖಂಡರಾದ ಮಂಜು. ಚಂದ್ರು. ಮುನಿಯಪ್ಪ ರಂಗಸ್ವಾಮಿ. ಆರ್.ಎಸ್.ಮಾದೇವ, ಜವರೇಗೌಡ, ವಿಜಯಕುಮಾರ್, ವಿರೂಪಾಕ್ಷ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.



ಚಿಟ್ಟೆನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯರನ್ನು ಅಭಿನಂದಿಸಿದ ಸದಸ್ಯರು.

ವಲಯಮಟ್ಟದ ಕ್ರೀಡಾಕೂಟ ಉದ್ಘಾಟನೆ



ಕಂಪಲಾಪುರ, ಆ.2– ಮಕ್ಕಳ ದೈಹಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿಯಾಗಲಿದೆ ಎಂದು ಗ್ರಾಮದ ಸರ್ಕಾರಿ ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ ತಿಳಿಸಿದರು.

ಆ.2ರ ಬುಧವಾರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಆಟದಲ್ಲಿ ಸೋತವರು ಕುಗ್ಗದೇ, ಗೆದ್ದವರು ಹಿಗ್ಗದೇ ಸೋಲು, ಗೆಲುವನ್ನು ಸಮನಾಗಿ ಸ್ವೀಕರಿಸಿ ಮುನ್ನಡೆಯಬೇಕು ಎಂದರು. ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಘುಪತಿ ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಕ್ರೀಡಾಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ಆ ಮೂಲಕ ದೈಹಿಕವಾಗಿ ಸದೃಢರಾಗಲು ಸಾಧ್ಯ ಎಂದರು.

ಗ್ರಾಪಂ ಅಧ್ಯಕ್ಷೆ ಶೀಲಾ ಮಂಜು ಕ್ರೀಡಾಜ್ಯೋತಿ ಸ್ವೀಕರಿಸಿ ವಿದ್ಯಾರ್ಥಿಗಳು ಕೇವಲ ಓದುಬರಹಕ್ಕೆ ಮಾತ್ರ ಸೀಮಿತವಾಗಿರಬಾರದು. ಬದಲಾಗಿ ಇಂತಹ ಆಟೋಟ ಸ್ಪರ್ಧೆಗಳಲ್ಲಿ ತೊಡಗಿಸಿಕೊಂಡಾಗ ತಮ್ಮಲ್ಲಿರುವ ಪ್ರತಿಭೆ ಹೊರಹೊಮ್ಮಲು ಸಾಧ್ಯ ಎಂದರು.

ಕ್ರೀಡಾಕೂಟದಲ್ಲಿ 10 ಪ್ರೌಢಶಾಲೆಗಳು ಭಾಗವಹಿಸಿದ್ದವು. ಪಥಸಂಚಲನದಲ್ಲಿ ಮಾಕೋಡು ಶಾಲೆ(ಪ್ರ), ಅತ್ತಿಗೋಡು.ಲೆ (ದ್ವಿ), ಕಂಪಲಾಪುರ ಶಾಲೆ(ತೃ) ಸ್ಥಾನ ಪಡೆದವು.

ವೇದಿಕೆಯಲ್ಲಿ ತಾ.ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ನಾಗಶೆಟ್ಟಿ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಸುರೇಶ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪರಮಶಿವಯ್ಯ, ಶಾಲೆ ಮುಖ್ಯ ಶಿಕ್ಷಕ ಮಹದೇವಯ್ಯ ರಾಜಯ್ಯ, ಮುಖಂಡ ಪ್ರಕಾಶ್‌ಗೌಡ, ಗ್ರಾಪಂ ಸದಸ್ಯ ಮಂಜು, ಕುಮಾರ್, ಸುರೇಶ್, ಕೆ.ಪಿ.ನಿಂಗರಾಜು, ವಿಶುಕುಮಾರ್, ಶಿಕ್ಷಕರಾದ ಜಗದೀಶ್, ಶಿವರಾಜ್, ಯಶ್ವಂತ್, ಎಸ್ಡಿಎಂಸಿ ಸದಸ್ಯರಾದ ಜಯರಾಂ, ರಾಣಿ, ಶಹಜಾನ್, ಸತೀಶ್ ಸೇರಿದಂತೆ ಶಿಕ್ಷಕ ಶಿಕ್ಷಕಿಯರು, ಗ್ರಾಮಸ್ಥರು ಹಾಜರಿದ್ದರು.



ತಗಡೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಚಂದ್ರವತಿ ಬಸವರಾಜು ಅವಿರೋಧವಾಗಿ, ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗುರುಮಲ್ಲೇಶ್ 18 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.

ಹುಲ್ಲಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹುಲ್ಲಹಳ್ಳಿ, ಆ.2– ನಂಜನಗೂಡು ತಾಲೂಕು ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ದೇವಮ್ಮ ಹುಚ್ಚಮ್ಮ ಮತ್ತು ಉಪಾಧ್ಯಕ್ಷರಾಗಿ ಹೆಚ್.ಪಿ.ಲೋಕೇಶ್ ಆಯ್ಕೆಯಾಗಿದ್ದಾರೆ. ಹುಲ್ಲಹಳ್ಳಿ ಗಾಮ ಪಂಚಾಯಿತಿಯಲ್ಲಿ 22 ಸದಸ್ಯರಿದ್ದು, ಅಧ್ಯಕ್ಷೆ ದೇವಮ್ಮ ಅವರಿಗೆ 12 ಮತಗಳು ಅವರ ಪ್ರತಿಸ್ಪರ್ಧಿ ಸುಧಾ ಸೋಮಣ್ಣ ಅವರಿಗೆ 10 ಮತಗಳು ಲಭಿಸಿದವು. ಉಪಾಧ್ಯಕ್ಷ ಸ್ಥಾನಕ್ಕೆ ಲೋಕೇಶ ಅವರಿಗೆ 12 ಮತಗಳು, ಪ್ರತಿಸ್ಪರ್ಧಿ ಪ್ರತಾಪ್ ಅವರಿಗೆ 9 ದೊರೆತವು. 1 ಮತ ತಿರಸ್ಕೃತಗೊಂಡಿದೆ.

ತೋಟಗಾರಿಕೆ ಸಹಾಯಕ ನಿರ್ದೇಶಕರಾದ ಚಂದ್ರು, ಪಿಡಿಓ ಶ್ರೀಧರ್, ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು. ಕಾರ್ಯದರ್ಶಿ ಅರುಣ್‌ಕುಮಾರ್ ಗ್ರಾಪಂ ಸದಸ್ಯರುಗಳಾದ ಶಿವಣ್ಣ, ಮಲ್ಲಿಕಾರ್ಜುನ, ನಾಗೇಂದ್ರ , ಆನ್ಸರ್ ಅಹಮದ್, ಮಹೇಶ, ಗೋಪಾಲ ನಾಯಕ, ಸುರೇಶ, ಸೋಮಶೇಖರ, ಕುಮಾರ್, ರತ್ನಮ್ಮ, ಲಕ್ಷ್ಮಮ್ಮ, ಪವಿತ್ರ, ನಾಗರಾಜಮ್ಮ, ಶ್ರೀವಿದ್ಯಾ, ಭಾಗ್ಯಮ್ಮ, ಜಯಮ್ಮ ಜ್ಯೋತಿ, ಸಲ್ಮಾ ಇನ್ನು ಮುಂಖಡರುಗಳು ಹಾಜರಿದ್ದರು.

ಸಾಗರ್ ನಿಧನ



ನಂಜನಗೂಡು, ಆ.2– ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ಸಿಬ್ಬಂದಿ ಹಾಗೂ ಪಟ್ಟಣದ ಹಳ್ಳದಕೇರಿ ನಿವಾಸಿ ಸಾಗರ್ (36) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ತಾಯಿ, ಸಹೋದರ, ಸಹೋದರಿ, ಪತ್ನಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಇಂದು, ನಾಳೆ ಇಪ್ಟಾ ಸಮ್ಮೇಳನ

ಆಹಾರ ಪ್ಯಾಕೇಜಿಂಗ್‌ನಲ್ಲಿ ಪ್ಲಾಸ್ಟಿಕ್ ಬದಲು ಪೇಪರ್ ಬಳಕೆ ಸಂಬಂಧವೂ ವಿಚಾರ ಸಂಕಿರಣ



ಮೈಸೂರು, ಆ.2(ಎಂಕೆ)– ಮೈಸೂರಿನ ಸಿಎಫ್‌ಟಿಆರ್‌ಐ(ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್ಸ್‌ಟ್ಯೂಟ್) ಆವರಣದಲ್ಲಿ ಆ.3(ನಾಳೆ) ಮತ್ತು 4ರಂದು ಇಪ್ಟಾ(ಇಂಡಿಯನ್ ಪಲ್ಪ್ ಅಂಡ್ ಪೇಪರ್ ಟೆಕ್ನಿಕಲ್ ಅಸೋಸಿಯೇಷನ್–ಐಪಿಪಿ ಟಿಎ) ವಾರ್ಷಿಕ ಸಮ್ಮೇಳನ ಹಾಗೂ 'ಆಹಾರ ಪದಾರ್ಥಗಳ ಪ್ಯಾಕೇಜಿಂಗ್‌ನಲ್ಲಿ ಒಂದು ಬಾರಿ ಬಳಸುವ ಪ್ಲಾಸ್ಟಿಕ್ ಬದಲು ಪೇಪರ್ ಬಳಕೆ'(replacing single use plastic by paper with emphasis on food packaging)ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಇಪ್ಟಾ ಅಧ್ಯಕ್ಷ ಗಣೇಶ್ ಭಡ್ತಿ ತಿಳಿಸಿದರು.

ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಬೆಳಗ್ಗೆ 9.15ಕ್ಕೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಸಿಕಂದರಾಬಾದ್‌ನಲ್ಲಿರುವ ಐಟಿಸಿ ಲಿಮಿಟೆಡ್‌ನ ಸುಸ್ಥಿರ ಉತ್ಪನ್ನ ಮತ್ತು ಪ್ಯಾಕೇಜಿಂಗ್ ವಿಭಾಗದ ಡಿಜಿಎಂ ಪಿ.ಎನ್.ಶ್ರೀಧರ್, ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪೇಪರ್ ಮಿಲ್ ಪ್ರಾಡಕ್ಟ್ ವ್ಯವಸ್ಥಾಪಕ ನಿರ್ದೇಶಕ ಎಸ್.ತಾಲಿಕೆರಪ್ಪ ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣಸಿಂಗ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಕಾಗದ ತಯಾರಿಕೆಗೆ ಸಂಬಂಧಿಸಿದಂತೆ ದೇಶ–ವಿದೇಶಗಳಿಂದ ಪ್ರಸಿದ್ಧ ತಂತ್ರಜ್ಞರು, ವಿಜ್ಞಾನಿಗಳು ಇಂಜಿನಿಯರ್‌ಗಳು, ಯಂತ್ರೋಪಕರಣಗಳನ್ನು ಸರಬರಾಜು ಮಾಡುವವರು. ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ 350ಕ್ಕೂ ಹೆಚ್ಚು ಮಂದಿ ಪೇಪರ್ ಬಳಕೆ ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಆಹಾರೋದ್ಯಮಗಳಲ್ಲಿ ಪ್ಲಾಸ್ಟಿಕ್ ಬದಲಾಗಿ ಕಾಗದದ ವಸ್ತುಗಳ ಬಳಕೆ ಕುರಿತು ಇರುವ ಮಾರ್ಗೋಪಾಯಗಳು, ಸುಸ್ಥಿರ ಆರ್ಥಿಕ ಬೆಳವಣಿಗೆಯಲ್ಲಿ ಪೇಪರ್ ಉದ್ಯಮಗಳ ಪಾತ್ರದ ಕುರಿತು ವಿಚಾರ ಸಂಕಿರಣ ಬೆಳಕು ಚೆಲ್ಲಲಿದೆ. ಮುಖ್ಯವಾಗಿ ಸಿಂಗಲ್ ಯೂಸ್ ಪ್ಲಾಸ್ಟಿಕ್ ಬಳಕೆ ತಗ್ಗಿಸುವಲ್ಲಿ ಮೂಲಕ ಪ್ರಕೃತಿಯಲ್ಲಿ ಸಹಜತೆ ಕಾಪಾಡಬೇಕಿದೆ ಎಂದರು.

ಇಪ್ಟಾ ಗೌರವ ಕಾರ್ಯದರ್ಶಿ ಎಂ.ಕೆ.ಗೋಯಲ್ ಮಾತನಾಡಿ, ಏಕ ಬಳಕೆಯ ಪ್ಲಾಸ್ಟಿಕ್ ಅನ್ನೂ ಸಂಪೂರ್ಣವಾಗಿ ನಿಷೇಧಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಅದರಲ್ಲಿಯೂ ಆಹಾರ ಪದಾರ್ಥಗಳ ಪ್ಯಾಕೇಜಿಂಗ್‌ನಲ್ಲಿ ಇದಕ್ಕೆ ಅವಕಾಶವಿದೆ. ಇದರಿಂದ ಉದ್ಯಮವೂ ಪರಿಸರ ಸ್ನೇಹಿಯಾಗಿ ಪರಿವರ್ತನೆಗೊಳ್ಳುವುದರ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಬಹುದು. ಒಂದೆಡೆ ಸಾಂಪ್ರದಾಯಿಕ ತಂತ್ರಜ್ಞಾನದ ಕಾಗದ ತಯಾರಿಕೆ ಕಾರ್ಖಾನೆಗಳನ್ನು ಮುಚ್ಚಿದರೆ, ಮತ್ತೊಂದೆಡೆ ಹೊಸ ತಂತ್ರಜ್ಞಾನ ಆಧಾರಿತ ಕಾರ್ಖಾನೆಗಳು ಆರಂಭವಾಗಿ ಲಾಭದಾಯಕವಾಗಿ ಮುನ್ನಡೆಯುತ್ತಿವೆ. ಇವುಗಳಿಂದ ಸುಮಾರು 50 ಲಕ್ಷ ಜನರಿಗೆ ಪರೋಕ್ಷ ಹಾಗೂ 15 ಲಕ್ಷ ಜನರಿಗೆ ನೇರವಾಗಿ ಉದ್ಯೋಗ ನೀಡಲಾಗಿದೆ ಎಂದು ತಿಳಿಸಿದರು.

ಸವಾಲಿನ ಕೆಲಸ: ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿ, ಆಹಾರ ಪದಾರ್ಥಗಳ ಪ್ಯಾಕೇಜಿಂಗ್‌ನಲ್ಲಿ ಪ್ಲಾಸ್ಟಿಕ್ ಬದಲು ಪೇಪರ್ ಬಳಕೆ ಮಾಡುವುದು ಸವಾಲಿನ ಕೆಲಸವಾಗಿದೆ. ಆದರೆ ಪರಿಸರ ಕಾಪಾಡುವ ಮತ್ತು ಜನರ ಆರೋಗ್ಯದ ದೃಷ್ಟಿಯಿಂದ ಪ್ಲಾಸ್ಟಿಕ್ ತ್ಯಜಿಸುವುದು ಉತ್ತಮ. ಈ ಕಾರ್ಯಕ್ರಮಕ್ಕೆ ಸಿಎಫ್‌ಟಿಆರ್‌ಐ ಸಂಪೂರ್ಣ ಸಹಕಾರ ನೀಡಲಿದೆ ಎಂದು ಹೇಳಿದರು.

ಮರಗಳನ್ನು ಕಡಿಯುತ್ತಿಲ್ಲ

"ಕಾಗದ ತಯಾರಿಕೆಗೆ ಕಾರ್ಖಾನೆಗಳಿಂದ ಕಾಡು ನಾಶವಾಗುತ್ತಿದೆ ಎಂಬ ತಪ್ಪು ಕಲ್ಪನೆ ಜನರ ಮನಸ್ಸಿನಲ್ಲಿದೆ. ಆದರೆ, ನೈಜವಾಗಿ ಕಾರ್ಖಾನೆಗಳು ಬಳಸಿದಷ್ಟು ಮರಗಳನ್ನು ಮತ್ತೆ ಬೆಳೆಸುತ್ತಿವೆ. ಕಾಗದ ತಯಾರಿಕೆ ಶೇ.80ರಷ್ಟು ಮರುಬಳಕೆಯಿಂದ ನಡೆಯುತ್ತಿದೆ. ದೇಶದಲ್ಲೇ ಗುಣಮಟ್ಟದ ಕಾಗದ ಲಭ್ಯವಿದ್ದರೂ ಸುಮಾರು 18 ದಶಲಕ್ಷ ಟನ್ ಆಮದು ಮಾಡಿಕೊಳ್ಳಲಾಗುತ್ತಿದೆ. ದಿನಪತ್ರಿಕೆಗಳು, ಉದ್ಯಮಗಳು ಕೆನಡಾ, ಚೀನಾದಿಂದ ಆಮದು ಮಾಡಿಕೊಳ್ಳುತ್ತಿವೆ. ಹೀಗಾಗಿಯೇ, ಪತ್ರಿಕೆಗೆ ಬಳಸುವ ಕಾಗದದ ಬೆಲೆ ದುಬಾರಿಯಾಗಿದೆ. –ಗೋಯಲ್

ಮೈಸೂರು ವಿವಿ ಕುಲಪತಿ ನೇಮಕಕ್ಕೆ ತಡೆಯಾಜ್ಞೆ ತೆರವು ಅರ್ಜಿ ಇಂದು ವಿಚಾರಣೆ



ಮೈಸೂರು, ಆ.2 (ಎಂಕೆ)– ಮೈಸೂರು ವಿವಿ ಕುಲಪತಿ ಪ್ರೊಎನ್.ಕೆ. ಲೋಕನಾಥ್ ನೇಮಕಕ್ಕೆ ನೀಡಲಾಗಿದ್ದ ತಡೆಯಾಜ್ಞೆ ತೆರವು ಸಂಬಂಧಿತ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ನಾಳೆ(ಆ.3)ಗೆ ನಿಗದಿಪಡಿಸಿದ್ದು, ಅಂತಿಮ ತೀರ್ಪು ಹೊರಬೀಳುವ ಸಾಧ್ಯತೆ ಇದೆ.

ಯುಜಿಸಿ ನಿಯಮಾವಳಿ ಹಾಗೂ ಕರ್ನಾಟಕ ವಿವಿ ಕಾಯ್ದೆಯನ್ನು ಉಲ್ಲಂಘಿಸಿ ಮೈಸೂರು ವಿವಿ ಕುಲಪತಿಗಳನ್ನಾಗಿ ಪ್ರೊಎನ್.ಕೆ.ಲೋಕನಾಥ್ ಅವರನ್ನು ನೇಮಕ ಮಾಡಲಾಗಿದ್ದು, ಅವರ ನೇಮಕಾತಿಯನ್ನು ರದ್ದುಗೊಳಿಸವಂತೆ ಕುಲಪತಿ ರೇಸ್‌ನಲ್ಲಿದ್ದ ಪ್ರೊ.ಶರತ್ ಅನಂತಮೂರ್ತಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ಹೈಕೋರ್ಟ್ ಜೂ.21ರಂದು ನೇಮಕಾತಿಗೆ ತಡೆಯಾಜ್ಞೆ ನೀಡಿತ್ತು ನಂತರ ತಡೆಯಾಜ್ಞೆ ತೆರವುಗೊಳಿಸುವಂತೆ ಲೋಕನಾಥ್ ಪರ ವಕೀಲರು ಸಲ್ಲಿಸಿದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿದ್ದ ಹೈಕೋರ್ಟ್, ಜೂ.27, ಜು.14 ನಂತರ ಆ.2ಕ್ಕೆ ವಿಚಾರಣೆಯನ್ನು ಮುಂದೂಡಿತ್ತು ಅದರಂತೆ ಬುಧವಾರ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿಗಳಾದ ಸಂಜಯ್‌ಗೌಡ, ವಿಚಾರಣೆಯನ್ನು ನಾಳೆ (ಆ.3)ಗೆ ಮುಂದೂಡಿದ್ದಾರೆ. ಹಾಗೆಯೇ ಪ್ರಕರಣ ಸಂಬಂಧ ನಾಳೆಯೇ ಅಂತಿಮ ತೀರ್ಪು ಹೊರಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ. ಕಳೆದ 40 ದಿನಗಳಿಂದ ಮೈಸೂರು ವಿವಿ ಕುಲಪತಿಗಳು ಹಾಗೂ ಪ್ರಭಾರ ಕುಲಪತಿಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ವಿವಿ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿ ಇಷ್ಟು ದಿನಗಳ ಕಾಲ ಕುಲಪತಿಗಳು ಇದ್ದರೂ ಇಲ್ಲದಂತಹ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸಿದೆ. ಅಲ್ಲದೆ ಕುಲಪತಿಗಳ ನೇಮಕಾತಿ ವಿಚಾರದಲ್ಲಿ ರಾಜ್ಯ ಸರ್ಕಾರ ಮೌನವಾಗಿರುವುದು ಕುತೂಹಲವನ್ನು ಮತ್ತಷ್ಟು ಕೆರಳಿಸಿದೆ.

2ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ

ಎಂ.ಮಹದೇವು (ರಾಜು)

ನಿಧನ: 3.8.2021

ದುಃಖತಪ್ತರು:- ಧರ್ಮಪತ್ನಿ ಜಯಮ್ಮ ಮತ್ತು ಮಕ್ಕಳು, ಕುಟುಂಬವರ್ಗ, 6ನೇ ಕ್ರಾಸ್, ಅಶೋಕಪುರಂ, ಮೈಸೂರು

3ನೇ ವರ್ಷದ ಸವಿನೆನಪು



ಶ್ರೀಮತಿ ಪುಟ್ಟತಾಯಮ್ಮ

ದುಃಖತಪ್ತರು: ಸಿ.ಆರ್. ಶ್ರೀನಿವಾಸ ಮತ್ತು ಕುಟುಂಬವರ್ಗದವರು

तम्बाकू बोर्ड / TOBACCO BOARD

(भारत सरकार, वाणिज्य एवं उद्योग मंत्रालय, वाणिज्य विभाग)
(GOVT. OF INDIA, MIN. OF COMMERCE)
नीलामी निर्देशालय / DIRECTORATE OF AUCTIONS
1/9 III Cross, CSI Compound, 4th Floor,
Unity Building Annexe, Mission Road, बेंगलूर / BENGALURU- 560 027
अंप्रस से प्रमाणित संस्थान / An ISO Certified Organisation)
Phone: 080-22236599/22233304 Fax: 080-22225075
email: bangaloreoffice@tobaccoboard.co.in

Ref.No.TB/DOA/Pre-Auc-KK/Pub/GAD/2023-24 Date: 02.08..2023

SHORT TERM RE-TENDER NOTIFICATION

Sealed Tenders are invited from interested tenderers for the following contracts at Tobacco Board Offices during 2023-24 Auctions in Karnataka.

Sl No	Name of the Contract/Work	Last Date & time for closing the tenders	Date & time of opening the tender	EMD amount (In Rs.)	Cost of tender form inclusive of GST @ 18%
1	Hiring of Vehicle (Vigilance squad)	09.08.2023 2.30 PM	09.08.2023 3.00 PM	20,000.00	500.00 + GST @18%
2	Hiring of vehicle for Regional Manager's Office, Mysore in Karnataka	09.08.2023 3.30 PM	09.08.2023 4.00 PM	20,000.00	500.00 + GST @18%

The bid documents for the above contracts are available on Tobacco Board's website i.e. **https://tobaccoboard.com/tenders.php** under Tender Section. These can also be obtained at Tobacco Board, Regional Manager's Offices, Mysuru and Periyapatna and all Auction superintendents in Karnataka by Paying the requisite fee.

All the above tenders have to be dropped in the respective Tender Boxes kept **at the office of the Regional Manager, Tobacco Board, Mysuru only.** Tenders received by post or in person at the Office of the Directorate of Auctions, Tobacco Board, Bengaluru, Regional office, Tobacco Board, Mysuru and Periyapatna or at any of the Auction Platforms **will not be accepted.**

Sd/- Regional Manager, DOA, Bengaluru

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಜೆ.ಹೇಮಲತ ಮತ್ತು ಸುಹಾಸ್ ಎಂಬುವವರು ಹೆಚ್.ಪಿ.ರೇವಣ್ಣ ರವರ ವಿರುದ್ಧ ಮೈಸೂರಿನ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಎಂ ನ್ಯಾಯಾಲಯದಲ್ಲಿ ಅಸಲು.ದಾವಾ ಸಂಖ್ಯೆ: 1047/2023 ರ ಪ್ರಕರಣವನ್ನು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಬೇರೆ ಯಾವುದೇ ವ್ಯಕ್ತಿಗಳು ಹೆಚ್.ಪಿ.ರೇವಣ್ಣ ರವರ ಜೊತೆ ಯಾವುದೇ ವ್ಯವಹಾರ ಮಾಡದಂತೆ ಅಥವಾ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಮುಂದಾಗಬಾರದೆಂದು ಈ ಪ್ರಕಟಣೆ ಮೂಲಕ ಎಲ್ಲರ ಗಮನಕ್ಕೆ ತರಲು ನಮ್ಮ ಕಕ್ಷಿದಾರರು ಇಚ್ಛಿಸಿರುತ್ತಾರೆ. ಒಂದು ವೇಳೆ ಈ ಪ್ರಕಟಣೆಯನ್ನು ನೋಡಿಯೂ ಸಹ ಬೇರೆ ಯಾವುದೇ ವ್ಯಕ್ತಿಗಳು ಹೆಚ್.ಪಿ.ರೇವಣ್ಣ ರವರ ಜೊತ ಕ್ರಯದ ವ್ಯವಹಾರ ಮಾಡಲು ಮುಂದಾದಲ್ಲಿ ನ್ಯಾಯಾಲಯದ ಆದೇಶಕ್ಕೆ ಒಳಗಾಗ ಬೇಕಾಗಿರುತ್ತದೆ ಎಂದು ಮತ್ತು ಮುಂದೆ ಆಗುವ ಎಲ್ಲಾ ಖರ್ಚು ವೆಚ್ಚಗಳಿಗೆ ಕ್ರಯಕ್ಕೆ ಕೊಂಡುಕೊಳ್ಳುವವರು ಹೊಣೆಗಾರರಾಗಿರುತ್ತಾರೆಂದು ನಮ್ಮ ಕಕ್ಷಿದಾರರು ತಿಳಿಯಪಡಿಯಬಯಸುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತಹ ಎಲ್ಲಾ ಅಸಲು ಪತ್ರಗಳು ಮಾನ್ಯ ನ್ಯಾಯಾಲಯದಲ್ಲಿ ಇರುತ್ತದೆ. **ಷೆಡ್ಯೂಲ್ ಸ್ವತ್ತು:** ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ, 4ನೇ ಹಂತ, 2ನೇ ಫೇಸ್, ನಿವೇಶನ ಸಂಖ್ಯೆ: 8168 (ಎಂಟು ಸಾವಿರದ ಒಂದು ನೂರ ಅರವತ್ತೆಂಟು)ವುಳ್ಳದ್ದಕ್ಕೆ ಚೆಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ:8176ನೇ ನಂಬರಿನ ಸ್ವತ್ತು, ಉತ್ತರಕ್ಕೆ: 8167ನೇ ನಂಬರಿನ ಸ್ವತ್ತು, ದಕ್ಷಿಣಕ್ಕೆ: 8169ನೇ ನಂಬರಿನ ಸ್ವತ್ತು

ಸಹಿ/– ಶ್ರೀ ಜೆ.ಎನ್.ಪರಶಿವಮೂರ್ತಿ, ಎಂ.ಎ. ಎಲ್.ಎಲ್.ಬಿ., ವಕೀಲರು, ನೋಂದಣಿ ಸಂಖ್ಯೆ: ಕೆಎಆರ್ 2674/2003, ಕೊಠಡಿ ಸಂಖ್ಯೆ: 11, 2ನೇ ಮಹಡಿ, ಆರ್.ಜಿ.ಕಾಂಪ್ಲೆಕ್ಸ್, 5ನೇ ಕ್ರಾಸ್, 2ನೇ ಮುಖ್ಯರಸ್ತೆ, ಜಯನಗರ, ಮೈಸೂರು–14 ಮೊ.ನಂ: 9880301972

ದಿನಾಂಕ: 02.08.2023 ಸ್ಥಳ: ಮೈಸೂರು

ಸಾರ್ವಜನಿಕರ ಗಮನಕ್ಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸ್ವತ್ತು ಸಂಖ್ಯೆ 39/ಎ, 9ನೇ ಮುಖ್ಯ ರಸ್ತೆ, ಹೆಬ್ಬಾಳ್ 1 ನೇ ಹಂತ, ದೇವರಾಜ ಮೊಹಲ್ಲಾ, ಮೈಸೂರು ಈ ಸಂಬಂಧ ನಮ್ಮ ಕಕ್ಷೀದಾರರಾದ ಎಸ್.ಪಿ, ಆದರ್ಶರವರು, ಪೂರ್ಣಿಮರವರ ವಿರುದ್ಧ ಮೈಸೂರಿನ ಪ್ರಧಾನ ಹಿರಿಯ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಓ.ಎಸ್. 326/2017 ನ್ನು ದಾಖಲಿಸಿದ್ದು, ಸ್ವತ್ತಿನ ಮೇಲೆ ಯಾವುದೇ ಸಾಲ ಪಡೆಯುವುದಾಗಲಿ, ಸ್ವತ್ತನ್ನು ಪರಭಾರೆ ಮಾಡುವುದಾಗಲಿ ಮಾಡುವಂತಿಲ್ಲ ಎಂಬ ನ್ಯಾಯಾಲಯದ ಆದೇಶ ದಿನಾಂಕ 27-4-2017 ಈ ದಿವಸದವರೆಗೂ ಚಾಲ್ತಿಯಲ್ಲಿರುತ್ತದೆ. ಅದಾಗ್ಯೂ ಮೈಸೂರಿನ ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ., ಶ್ರೀಮತಿ ಪೂರ್ಣಿಮ ರವರೊಂದಿಗೆ ಶರೀಕಾಗಿ ಅನುಸೂಚಿ ಸ್ವತ್ತಿನ ಮೇಲೆ ಒಂದು ಸಾಲದ ವ್ಯವಸ್ಥೆ ಎಂಬುದಾಗಿ ತೋರಿಸಿದ್ದು, ನಮ್ಮ ಕಕ್ಷೀದಾರರು ಈಗಾಗಲೇ ಪೂರ್ಣಿಮ ಮತ್ತು ಸಂಬಂಧಪಟ್ಟ ಉಪನೋಂದಣಾಧಿಕಾರಿ ವಿರುದ್ಧ ನ್ಯಾಯಾಂಗ ನಿಂದನಾ ಕ್ರಮ ಜರುಗಿಸಿರುತ್ತಾರೆ. ನ್ಯಾಯಾಲಯದ ಆದೇಶದನ್ವಯ ಷಡ್ಯೂಲ್ ಸ್ವತ್ತನ್ನು ಮೇಲ್ಕಂಡ ಬ್ಯಾಂಕಾಗಲಿ, ಪೂರ್ಣಿಮರವರಾಗಲಿ ಪರಭಾರೆ ಮಾಡಲು ಬರುವುದಿಲ್ಲ. ನೋಂದಣಿಯೂ ಆಗುವುದಿಲ್ಲ. ಇಷ್ಟಾಗಿಯೂ ಬ್ಯಾಂಕಿನವರು ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನ ಪಡುತ್ತಿದ್ದು, ಬ್ಯಾಂಕಿನ ವಿರುದ್ಧ ಈಗಾಗಲೇ ನೋಟೀಸನ್ನು ನೀಡಿದ್ದು RBI ಗೂ ಸಹ ಬ್ಯಾಂಕಿನ ವಿರುದ್ಧ ದೂರು ನೀಡಲಾಗಿದೆ. ಯಾವುದಾದರು ವ್ಯಕ್ತಿ / ಸಂಸ್ಥೆ ಮೇಲ್ಕಂಡ ಸ್ವತ್ತನ್ನು ಹರಾಜಿನಲ್ಲಾಗಲಿ, ಖರೀದಿಯನ್ನಾಗಲಿ ಮಾಡಲು ಹೊರಟಲ್ಲಿ ಅದು ಅಸಿಂಧುವಾಗುವುದರೊಂದಿಗೆ ನನ್ನ ಕಕ್ಷೀದಾರರನ್ನು ಬದ್ಧಪಡಿಸುವುದಿಲ್ಲ ಹಾಗೂ ಹಣ ಕಳೆದುಕೊಳ್ಳಬೇಕಾಗುತ್ತದೆ ಎಂಬ ವಿಚಾರವನ್ನು ಈ ಮೂಲಕ ತಿಳಿಸಲಾಗಿದೆ.

Sd/- PRASAD Advocate
Office No. 705/3A,Krishna Building,
Thyagaraja Road, K. R. Mohalla,
Mysuru-570004. Ph No. 94480 23164

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಯು॥ ಶ್ರೀ ವೆಂಕಟೇಗೌಡರವರು (ಜೂ)

ಇವರು ದಿ: 24.07.2023 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು 03.08.2023 ಗುರುವಾರ ಬೆಳಗ್ಗೆ 9.00 ರಿಂದ 1.30 ರವರೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ .

ದುಃಖತಪ್ತರು: ಕುಮಾರ್.ವಿ ವಕೀಲರು, ಚೋರನಹಳ್ಳಿ 9164921133

ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೆಳವರಹುಂಡಿ

2022-23ನೇ ಸಾಲಿನ ವಾರ್ಷಿಕ ಮಹಾಸಭಾ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ ಮೇಲ್ಕಂಡ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಯನ್ನು ದಿ: 5.08.2023ರ ಶನಿವಾರ ಬೆಳಗ್ಗೆ 10.00ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ವೀರಭದ್ರಪ್ಪ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಸಂಘದ ಮಾನ್ಯ ಸದಸ್ಯರೆಲ್ಲರಿಗೂ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಮುದ್ದಾಂ ಮೂಲಕ ಕಳುಹಿಸಲಾಗಿರುತ್ತದೆ ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಕಾಲದಲ್ಲಿ ಆಗಮಿಸಿ ಮಹಾಸಭೆಗೆ ಭಾಗವಹಿಸಿಬೇಕಾಗಿ ಈ ಮೂಲಕ ಕೋರಲಾಗಿದೆ.

ಮುಂದೂಡಿಕೆ: ಸಂಘದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡ ಉದ್ಘಾಟನೆ ಕಾರ್ಯಕ್ರಮವನ್ನು ಆ.5ರಂದು ನಿಗದಿಪಡಿಸಲಾಗಿತ್ತು. ಕಾರಣಾಂತರಗಳಿಂದ ಉದ್ಘಾಟನೆ ಕಾರ್ಯಕ್ರಮ ಮುಂದೂಡ ಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪ ತಿಳಿಸಿದ್ದಾರೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ ಸಹಿ/–ಮುಖ್ಯಕಾರ್ಯನಿರ್ವಹಣಾಧಿಕಾರಿ

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎನ್. ರಾಜೇಂದ್ರ

(ಲೇಟ್ ನಿಂಗಯ್ಯನವರ ಮಗ)

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ ಜಯಶ್ರೀ ಮತ್ತು ಮಕ್ಕಳು, ಎನ್. ರವಿಗೌಡರು ಮತ್ತು ಸಹೋದರರು ಹಾಗೂ ಲೇಟ್ ಯಜಮಾನ್ ಮರವೇಗೌಡರು ಮತ್ತು ನಿಂಗಯ್ಯ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು